

ನಮ್ಮೂರ ಹೆಮ್ಮೆ

# ಬೇಲಿಯೊ ಉಸ್ತಾದ್

ಪ್ರಕಾಶಕರು: ಶಿಷ್ಯಂದಿರ ವೃಂದ ಕಾಟಿಪಳ್ಳ





# ನಮ್ಮೂರ ಹೆಮ್ಮೆ ಬೆಲಿಯೊ ಉಸ್ತಾದ್

ಪ್ರಕಾಶಕರು: **ಬೆಲಿಯೊ ಉಸ್ತಾದರ ಶಿಷ್ಯಂದಿರ ವೃಂದ ಕಾಟಿಪಳ್ಳ**

**NAMMOORA HEMME BELIYO USTHAD**

| | |
|---|---|
| Pages | : **84 +iv** |
| First Print | : **June 2022** |
| Honourable Editor | : **Hussain Katipalla** |
| Chief Editor | : **Ansar Katipalla** |
| Cover Page Design | : **Rilwan Hussain Valal** |
| Art Design | : **Riyaz Ashraf Kalakaar** |
| Inner Page Design | : **Yousuf M. Mundole** |
| Printed by | : **Print City Mangalore** |
| Published by | : **Beliyo Usthad's Students Team Katipalla** |

**ನಮ್ಮೂರ ಹೆಮ್ಮೆ ಬೆಲಿಯೊ ಉಸ್ತಾದ್**

| | |
|---|---|
| ಪುಟಗಳು | : 84 + 4 |
| ಮೊದಲ ಮುದ್ರಣ | : ಜೂನ್ 2022 |
| ಗೌರವ ಸಂಪಾದಕರು | : ಹುಸೈನ್ ಕಾಟಿಪಳ್ಳ |
| ಪ್ರಧಾನ ಸಂಪಾದಕರು | : ಅನ್ಸಾರ್ ಕಾಟಿಪಳ್ಳ |
| ಮುಖಪುಟ ವಿನ್ಯಾಸ | : ರಿಲ್ವಾನ್ ಹುಸೈನ್ ವಳಾಲ್ |
| ಡಿಜಿಟಲ್ ಆರ್ಟ್ | : ರಿಯಾಝ್ ಅಶ್ರಫ್ ಕಲಾಕಾರ್ |
| ಒಳಪುಟ ವಿನ್ಯಾಸ | : ಯೂಸುಫ್ ಎಂ. ಮುಂಡೋಳೆ |
| ಮುದ್ರಕರು | : ಪ್ರಿಂಟ್ ಸಿಟಿ ಮಂಗಳೂರು |
| ಪ್ರಕಾಶಕರು | : ಬೆಲಿಯೊ ಉಸ್ತಾದರ ಶಿಷ್ಯಂದಿರ ವೃಂದ, ಕಾಟಿಪಳ್ಳ |




ಉಚಿತ ಪ್ರತಿ

# ಒಳಪುಟದಲ್ಲಿ...

## ಶುಭ ಸಂದೇಶ


| | |
|---|---|
| 1. ಅಲ್ ಹಾಜಿ ಈ.ಕೆ. ಇಬ್ರಾಹೀಂ ಮುಸ್ಲಿಯಾರ್ | 07 |
| 2. ವಿ.ಯು. ಅಬ್ದುನ್ನಾಸಿರ್ ಮದನಿ ಸೂರಿಂಜೆ | 09 |
| 3. ಕೆ. ಅಹ್ಮದ್ ಬಾವ ಅಯ್ಯೂಬ್ | 10 |
| 4. ಬದ್ರುದ್ದೀನ್ ಪಣಂಬೂರ್ | 11 |
| 5. ಸುನ್ನಿ ಯುವಜನ ಸಂಘ ಹಾಗೂ ಸುನ್ನಿ ಸ್ಟೂಡೆಂಟ್ ಫೆಡರೇಶನ್ | 12 |


## ಲೇಖನ


| | |
|---|---|
| 1. ನಮ್ಮೂರ ಹೆಮ್ಮೆ ಬೆಲಿಯೊ ಉಸ್ತಾದ್ | 13 |
| 2. ಸಾತ್ವಿಕ ಸ್ವಾಲಿಹ್ ಉಸ್ತಾದರೊಂದಿಗೆ ಸಾರ್ಥಕ ಸಹ ವರ್ತಿತ್ವ | 19 |
| 3. ನಾ ಕಂಡಂತೆ ನನ್ನ ತಂದೆ | 21 |
| 4. ನಾ ಕಂಡಂತೆ ನನ್ನ ಉಸ್ತಾದ್ | 27 |
| 5. ಜ್ಞಾನದೀಪ ಬೆಲಿಯೊ ಉಸ್ತಾದ್ | 31 |
| 6. ಮರೆಯಲಾರದ ನೆನಪು ಬೆಲಿಯೊ ಉಸ್ತಾದ್ | 35 |
| 7. ಬೆಲಿಯೊ ಉಸ್ತಾದ್ ಮರೆಯಲಾಗದ ವ್ಯಕ್ತಿತ್ವ | 38 |
| 8. ಸೌಹಾರ್ದತೆಯ ಪ್ರತೀಕ | 45 |
| 9. ಸಾಮರಸ್ಯದ ಸಾರಥಿ ಬೆಲಿಯೊ ಉಸ್ತಾದ್ | 46 |
| 10. ನಾ ಕಂಡ ಮಹಾಗುರು ಹಾಜಿ ಮುಹಮ್ಮದ್ ಸ್ವಾಲಿಹ್ | 51 |
| 11. ಮುಂದಾಲೋಚನೆಯ ಸಾಮಾಜಿಕ ಚಿಂತಕ | 53 |
| 12. ಸಹನಾಶೀಲ ಬೆಲಿಯೊ ಉಸ್ತಾದ್ | 55 |
| 13. ಉಸ್ತಾದರೊಂದಿಗಿನ ಒಡನಾಟ ಅವಿಸ್ಮರಣೀಯ | 56 |






| | |
|---|---|
| 14. ಆದರ್ಶ ವ್ಯಕ್ತಿತ್ವದ ನನ್ನ ಪಿತ | 60 |
| 15. ಮರೆಯಲಾಗದ ಕರುಣೆಯ ಉಸ್ತಾದ್ | 63 |
| 16. ಆ ಕೊನೆಗಳಿಗೆಯ ನೆನಪು | 66 |
| 17. ನಿಸ್ವಾರ್ಥ ಮನಸ್ಸಿನ ಬೆಲಿಯೊ ಉಸ್ತಾದ್ | 68 |
| 18. ತ್ಯಾಗ ಮತ್ತು ಸಹಿಷ್ಣುತೆಯ ಪ್ರತಿರೂಪ | 70 |
| 19. ಉತ್ತಮ ವಾಗ್ಮಿ ಬೆಲಿಯೊ ಉಸ್ತಾದ್ | 72 |
| 20. ಉದಾರ ಮನಸ್ಸಿನ ಉಸ್ತಾದ್ | 73 |
| 21. ನಾನು ಬಹಳವಾಗಿ ಗೌರವಿಸುತ್ತಿದ್ದ ಬೆಲಿಯೊ ಉಸ್ತಾದ್ | 74 |


## ಸಂದರ್ಶನ


| | |
|---|---|
| 1. ತನ್ನ ಜವಾಬ್ದಾರಿಗೆ ಪ್ರಥಮ ಆದ್ಯತೆ ನೀಡುತ್ತಿದ್ದ ಖತೀಬ್ | 48 |
| 2. ಧಾರ್ಮಿಕ ಚಿಂತಕ | 57 |


## ಕವನ


| | |
|---|---|
| 1.ಮರೆಯದ ಮಾಣಿಕ್ಯ | 34 |
| 2. ನನ್ನ ದರ್ಸ್ ದಾರಿ... | 40 |
| 3. ನನ್ನ ಬೆಲಿಯುಸ್ತಾ... | 59 |
| 4. ಬೆಲಿಯೊ ಉಸ್ತಾದ್‌ರ ಬೆತ್ತ | 77 |


## ಸಂಘ ಸಂಸ್ಥೆಗಳ ಅನಿಸಿಕೆ


| | |
|---|---|
| 1. ಸಾಹಿತ್ಯ ಪ್ರೇಮಿ ಬೆಲಿಯೊ ಉಸ್ತಾದ್ | 78 |
| 2. ಬೆಲಿಯೊ ಉಸ್ತಾದರ ಅನುಪಮ ಆದರ್ಶ | 79 |
| 3. ಆದರ್ಶ ಗುರುಗಳು | 80 |
| 4. ಸ್ನೇಹ ಜೀವಿ ಬೆಲಿಯೊ ಉಸ್ತಾದ್ | 82 |
| 5. ನಮ್ಮೆಲ್ಲರ ಆದರಣೀಯ ಬೆಲಿಯೊ ಉಸ್ತಾದ್ | 83 |
| 6. ಸರಳ ವ್ಯಕ್ತಿತ್ವದ ಬೆಲಿಯೊ ಉಸ್ತಾದ್ | 83 |




# ಸಂಪಾದಕೀಯ

ಅನ್ಸಾರ್ ಕಾಟಿಪಳ್ಳ

ಗಣ್ಯ ವ್ಯಕ್ತಿಯೊಬ್ಬರ ನಡೆದ ಹಾದಿಗಳನ್ನು ಅಕ್ಷರ ರೂಪಕ್ಕಿಳಿಸಲು ಆ ವ್ಯಕ್ತಿಗಳು ನಮ್ಮೊಂದಿಗಿದ್ದರೂ ಅದೊಂದು ಕಷ್ಟದ ಕೆಲಸವೇ ಸರಿ, ಅವರ ಹಾದಿಗಳನ್ನು ಅವರ ಜೊತೆ ಚರ್ಚಿಸಿ ಕೃತಿಯೊಂದನ್ನು ಹೊರತಂದು ಅದನ್ನು ಓದುಗರಿಗೆ ತಲುಪಿಸಿದ ಮೇಲಷ್ಟೇ ಸಂಪಾದಕನಿಗೆ, ಉಸ್ತುವಾರಿಗಳಿಗೆ ಸಂಪೂರ್ಣ ನಿಟ್ಟುಸಿರು ಸಮಾಧಾನ. ಆದರೆ ಇಲ್ಲಿ ಹಾಗಲ್ಲ, ಈ ಕೃತಿಯಲ್ಲಿ ಅಚ್ಚಾಗಿದ್ದು ಊರ ಮೇರು ವ್ಯಕ್ತಿ ಎನ್ನುವುದಕ್ಕಿಂತಲೂ ಅವರೊಳಗಿನ ವ್ಯಕ್ತಿತ್ವ, ಅದೂ ಅವರು ನಮ್ಮಿಂದ ಅಗಲಿ ಇದೀಗ 25 ವರ್ಷ ಪೂರ್ತಿಯಾದ ಸಮಯ. ಅಕ್ಷರಗಳು ಕಾದ ಕಬ್ಬಿಣದಂತೆ ವಿಷಯಗಳ ಹುಡುಕಾಟ, ಕೃತಿಯ ವಸ್ತುವಿನ ವಿಷಯಕ್ಕೇನೂ ಕೊರತೆಯಿಲ್ಲವಾದರೂ ಆ ವಿಷಯಗಳಿರುವ ತಲೆಗಳ ಹುಡುಕಾಟ ಈಗ ಸಂಪೂರ್ಣ ಅಸಾಧ್ಯವೇ ಸರಿ. ಅವರೊಡನೆ ಹತ್ತಿರದ ಬಾಂಧವ್ಯವಿದ್ದವರಲ್ಲಿ ಬಹಳಷ್ಟು ಜನರು ಕರ್ತನ ಕರೆಗೆ ಓಗೊಟ್ಟಿದ್ದಾರೆ. ಇನ್ನಷ್ಟು ಜನರು ದೂರ ದೂರವೆಂಬಂತೆ ದೇಶ ವಿದೇಶಗಳಲ್ಲಿದ್ದಾರೆ. ಆದರೂ ಊರಲ್ಲಿನ ಉಸ್ತಾದರ ಬಗ್ಗೆ ಅರಿವಿರುವವರೊಂದಿಗೆ ಮಾತಿಗಿಳಿದು ಆ ಜೀವದ ಮರೆಯದ ನೆನಪುಗಳನ್ನು ಹೆಕ್ಕಿ ತೆಗೆದ ಶ್ರಮವಿಂದು ಸಾರ್ಥಕವಾಗಿದೆ, ಅಲ್ ಹಂದುಲಿಲ್ಲಾಹ್.

ಇಲ್ಲಿ ಅವರ ನೆನಪುಗಳನ್ನು ಹಂಚಿದ್ದು ಉಸ್ತಾದರ ವಿದ್ಯಾರ್ಥಿಗಳೇ, ಇಂದು ಊರಲ್ಲಿ ಹೆಮ್ಮೆಯ ಲೇಖಕರೆನಿಸಿಕಂಡ ಹಿರಿಯ ಲೇಖಕರ ಜೊತೆಗೆ ಬರಹದ ಆಕರ್ಷಣೆಯನ್ನು ಸದುಪಯೋಗಪಡಿಸಿಕೊಂಡ ಊರ ಕಿರಿಯ ಬರಹಗಾರರು ಇಲ್ಲಿ ಉಸ್ತಾದರ ಬಗ್ಗೆ ಅನಿಸಿಕೆ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಈ ಹಿರಿಕಿರಿಯರಾದ ನಾವೆಲ್ಲರೂ ಈ ಕೃತಿಯ ವಸ್ತುವಿನೊಂದಿಗೆ ಕಲಿತು ಬೆಳೆದವರು. ಅಲ್ಲದೆ ಉಸ್ತಾದರು ಕವಿತೆಗಳನ್ನೂ ಪದ್ಯಗಳನ್ನೂ ನೇಯುತ್ತಿದ್ದರು, ಬರಹದಲ್ಲಿ ಅವರಿಗಿದ್ದ ಒಲವು ಒಳಪುಟಗಳಲ್ಲಿ ಅರಿವಾಗಬಹುದು. ಅವರ ಈ ಸಾಹಿತ್ಯದ ಆಕರ್ಷಣೆಯು ವಿದ್ಯಾರ್ಥಿಗಳಾದ ನಮಗೆಲ್ಲರಿಗೂ ನಮಗರಿಯದೆ ಅವರಿಂದ ಬಳುವಳಿಯಾಗಿ ಬಂದಿರಬಹುದು, ಹತ್ತೂರು ಸುತ್ತ ಪ್ರತಿಭೆಗಳ ತವರೂರು ಕಾಟಿಪಳ್ಳ ಎಂದು ಪ್ರಸಿದ್ಧಿ ಪಡೆಯಲು ಉಸ್ತಾದರ ಪ್ರತಿಭೆಯ ಅಡಿಪಾಯ ಭದ್ರವಾಗಿದ್ದ ಕಾರಣವೆಂಬುವುದು ಅಲ್ಲಗೆಳೆಯುವಂತಿಲ್ಲ ಅಲ್ಲವೇ? ನಮಗೆಲ್ಲರಿಗೂ ಬೆಲಿಯೊ ಉಸ್ತಾದ್ ಹೆಮ್ಮೆಯಷ್ಟೆ.




ಅವರ ಬಾಲ್ಯ ಕಳೆದ ನಂತರದ ಪುಟ್ಟ ನೋಟದೊಂದಿಗೆ, ಅವರ ಮದುವೆಯ ಸಂದರ್ಭವೂ ಹಾದು ಹೋಗಿ ಕೊನೆಯ ಮರಣದ ಸಮಯದವರೆಗಿನ ಜನೋಪಯೋಗಿ ಕುರುಹುಗಳು ಇಲ್ಲಿ ಮನದಾಳದಿಂದ ಇಂಗಿತವಾಗಿದ್ದೂ ಅಲ್ಲದೆ ಅವರ ಸ್ಫೂರ್ತಿಗಳನ್ನು ಮತ್ತೆ ಮರುಕಳಿಸುವಂತೆ ಮಾಡಬೇಕೆಂಬ ಆಕಾಂಕ್ಷೆ ಬಹುತೇಕ ಬರಹಗಳಲ್ಲಿ ಉಲ್ಲೇಖವಾಗಿರುವುದು ಉಸ್ತಾದರ ಸ್ವಾರ್ಥವಿಲ್ಲದ ಸಾಧನೆಗೊಂದು ಗರಿ.

ಸುಮಾರು ಆರು ತಿಂಗಳುಗಳಿಂದ ಈ ಕೃತಿಗಾಗಿ ಅಲೆದಾಡಿದರೂ ಉಸ್ತಾದರ ಭಾವಚಿತ್ರವೊಂದೂ ಸಿಗದ ಕಾರಣ ಮುಖಪುಟಕ್ಕೆ ಡಿಜಿಟಲ್ ಮೊರೆ ಹೋಗುವುದು ಅನಿವಾರ್ಯವಾಗಿತ್ತು. ಇದನ್ನು ಸಾಧ್ಯವಾಗಿಸಿದವರು ನಮ್ಮೂರಿನಲ್ಲೇ ಬೆಳೆದ ರಿಯಾಝ್ ಅಶ್ರಫ್ ಕಲಾಕಾರ್, ಪಾಸ್‌ಪೋರ್ಟ್ ಅಳತೆಯ ಹಳೆಯ ಒಂದು ಸಣ್ಣ ಭಾವಚಿತ್ರವೊಂದನ್ನು ಹಿಡಿದು ಅವರಿಗೆ ಸಾಧ್ಯವಾದಷ್ಟು ರೀತಿಯಲ್ಲಿ ಡಿಜಿಟಲ್ ರೇಖಾಚಿತ್ರವೊಂದನ್ನು ರಚಿಸಿಕೊಟ್ಟರು, ಆ ರೇಖಾಚಿತ್ರವನ್ನು ಅಲ್ಪ ತಿದ್ದಿ ಮತ್ತಷ್ಟು ಜೀವ ನೀಡುವುದರೊಂದಿಗೆ ಕೃತಿಗೆ ಹೊಂದುವಂತೆ ಅತ್ಯುತ್ತಮ ಮುಖಪುಟವನ್ನೂ ರಚಿಸಿಕೊಟ್ಟಿದ್ದು ನನ್ನ ಆತ್ಮೀಯ ಮಿತ್ರ ರಿಲ್ವಾನ್ ಹುಸೈನ್ ವಳಾಲ್. ಇವರನ್ನು ಈ ಸಂದರ್ಭದಲ್ಲಿ ನೆನೆಪಿಸುತ್ತೇನೆ.

''ನಮ್ಮೂರ ಹೆಮ್ಮೆ ಬೆಲಿಯೊ ಉಸ್ತಾದ್'' ಕೃತಿಗಾಗಿ ನನ್ನ ಕನಸನ್ನು ಅವರ ಮಕ್ಕಳಾದ ಇಸ್ಮಾಯಿಲ್ ಮತ್ತು ಅಬ್ದುಲ್ ಖಯ್ಯೂಮ್ ರವರ ಜೊತೆ ತೆರೆದಿಟ್ಟಾಗ ಅವರಿಂದ ನಿರೀಕ್ಷೆಗೂ ಮೀರಿದ ಸಹಕಾರ ಸಿಕ್ಕಿತ್ತು, ಅಲ್ಲದೆ ಈ ಕೃತಿಯ ಕನಸು ಚಿಗುರುವುದೂ, ಉಸ್ತಾದರು ನಮ್ಮನ್ನಗಲಿ 25 ವರ್ಷದ ಸನಿಹ ಬಂದಿರುವುದೂ ಕಾಕತಾಳೀಯ. ಅಂತೂ ಈ ಕೃತಿಗಾಗಿ ವೇಗ ಬೇಕಾದಾಗ ನನ್ನ ಬೆನ್ನು ತಟ್ಟಿ ಪ್ರೋತ್ಸಾಹಿಸುವ ಈ ಕೃತಿಯ ಗೌರವ ಸಂಪಾದಕರೂ ಆಗಿರುವ ಹುಸೈನ್ ಕಾಟಿಪಳ್ಳ ನನ್ನ ಜೊತೆ ಸೇರಿ ಧೈರ್ಯ ತುಂಬಿದರು, ಅಲ್ಲದೆ ಈ ವಿಷಯದಲ್ಲಿ ಪಿ.ಎಂ. ಝೈನುದ್ದೀನ್ ಕಾಟಿಪಳ್ಳರವರನ್ನು ಭೇಟಿಯಾಗಿ ಈ ಬಗ್ಗೆ ಚರ್ಚಿಸಿದಾಗ ನೀಡಿದ ಭರವಸೆಯಂತೆ ಸಂಪೂರ್ಣ ಸಹಕಾರ ನೀಡಿದರು,

ಊರ ಮೇರು ಲೇಖಕರಾದ ಅಬ್ದುಲ್ ಜಬ್ಬಾರ್ ಕಾಟಿಪಳ್ಳ, ನನ್ನ ಗೌರವದ ಇಲ್ಯಾಸ್ ಬಿನ್ ಅಬ್ದುಲ್ಲ (ಇಲ್ಯಾಸಾಕ), ಉಸ್ತಾದರ ನಿಕಟ ಸಂಪರ್ಕವಿದ್ದ ಪಿ.ಎಚ್. ಇದ್ದಿನಬ್ಬ (ಬೀಡ್ರಾಕ), ಪಿ.ಬಿ. ಅಬ್ದುಲ್ ರಝಾಕ್ (ಇನ್ ಫೇಶನ್), ಅಬ್ದುಲ್ ಅಝೀಝ್ ರಿಯಾದ್, ಅಬ್ದುಲ್ ಸಮದ್ ಕಾಟಿಪಳ್ಳ ಅಲ್ಲದೆ ಘನವೆತ್ತ ಆಲಿಂಗಳೂ, ಇನ್ನಷ್ಟು ಊರ ಮೇರು ವ್ಯಕ್ತಿಗಳೂ ತನು-ಮನಗಳ ಸಹಕಾದೊಂದಿಗೆ ಉಸ್ತಾದರ ಬಗ್ಗೆ ಅನಿಸಿಕೆ ಅಭಿಪ್ರಾಯಗಳನ್ನೂ ಇಲ್ಲಿ ವ್ಯಕ್ತಪಡಿಸಿದ್ದಾರೆ. ಅದರೊಂದಿಗೆ ಉಸ್ತಾದರ ಸೌಹಾರ್ದತೆಯ ಸಾಕ್ಷಿಯ ಪ್ರತೀಕವಾಗಿ ಡಾ. ಅಶೋಕ್ ಕುಮಾರ್ ಶೆಟ್ಟಿ, ಡಾ. ಅರವಿಂದ್ ಭಟ್ ಜೊತೆಗೆ ಆದರ್ಶ್ ಯುವಕ ಮಂಡಲದವರೂ ಉಸ್ತಾದರ ನೆನಪನ್ನು ಇಲ್ಲಿ ಹಂಚಿಕೊಂಡಿದ್ದಾರೆ.

ನಮ್ಮ ಬೆಲಿಯೊ ಉಸ್ತಾದರು ಹೊಗಳಿಕೆಗೆ ಸಂಪೂರ್ಣ ಅರ್ಹರಾದರೂ ಈ ಕೃತಿಯ ಉದ್ದೇಶದ ಜಾಡಿನಲ್ಲಿರುವುದು ಅವರನ್ನು ಹೊಗಳುವುದಲ್ಲ, ಬದಲಾಗಿ ಅವರ ವ್ಯಕ್ತಿತ್ವದ ಶಕ್ತಿಯು ಮಾದರಿಯಾಗಿ ಊರಿನ ಏಳಿಗೆಯಲ್ಲಿ ಇಂದಿನ ಮತ್ತು ಮುಂದಿನ ಪೀಳಿಗೆಯು ಕಿಂಚಿತ್ತಾದರೂ ಫಲಪ್ರದವಾಗಿಸಲೆಂಬ ಬಯಕೆಯಷ್ಟೆ. ಇನ್ನು ವ್ಯಕ್ತಿ ಹೊಗಳಿಕೆಯು ಬರಹಗಳ ಸಾರವನ್ನು ಕಡಿಮೆ ಮಾಡುತ್ತದೆಯಾದರೂ, ವಿಷಯದಲ್ಲಿ ಬರುವ ಪ್ರೇರಣೆಯು ಸಾರ್ಥಕವಾದರೆ ಸಾರವೇನು ಬಿಡಿ, ಊರ ಕೊರತೆಯ ಭಾರವಿಳಿದರಷ್ಟೇ ಸಾಕು. ಅಲ್ ಹಂದುಲಿಲ್ಲಾಹ್.

# ಶುಭ ಸಂದೇಶ


**ಅಲ್ ಹಾಜಿ ಈ.ಕೆ. ಇಬ್ರಾಹೀಂ ಮುಸ್ಲಿಯಾರ್**
ಖಾಝಿ, ಕೃಷ್ಣಾಪುರ ಮೊಹಲ್ಲಾ

ಪಣಂಬೂರು ಮುಸ್ಲಿಂ ಜಮಾಅತ್ ಕಾಟಿಪಳ್ಳದ ಜುಮಾ ಮಸೀದಿಯಲ್ಲಿ ಸುಮಾರು ನಾಲ್ಕು ದಶಕಗಳ ದೀರ್ಘ ಕಾಲ ಧಾರ್ಮಿಕ ನೇತೃತ್ವವನ್ನು ವಹಿಸಿದ್ದ, ಅಲ್ಲಾಹನ ನಿಷ್ಠದಾಸರಾಗಿ ಬಾಳಿ ಬದುಕಿದ್ದ, ಫಿಕ್ಹ್ ಗ್ರಂಥಗಳ ಬಗ್ಗೆ ಆಗಾಧ ಪಾಂಡಿತ್ಯವನ್ನು ಹೊಂದಿದ್ದ ವಿಶಿಷ್ಟ ವ್ಯಕ್ತಿತ್ವದ ಅಲ್ಲಿನ ಖತೀಬ್ ಸ್ಥಾನವನ್ನು ವಹಿಸಿದ್ದ ಮುಹಮ್ಮದ್ ಸ್ವಾಲಿಹ್ ಉಸ್ತಾದ್ ನನ್ನ ಆತ್ಮೀಯ ಸ್ನೇಹಿತರಾಗಿದ್ದರು.

ಅವರ ಇಮಾಮತ್‌ನ ಕರ್ತವ್ಯವನ್ನು ಚಾಚೂ ತಪ್ಪದೆ ಪಾಲಿಸಿದ ಓರ್ವ ಅಸಾಮಾನ್ಯ ಆಲಿಮ್ ಆಗಿದ್ದರು. ಅಲ್ಲಾಹನು ನಮಗೆ ಆದೇಶಿಸಿದ ಐದು ಸಮಯದ ನಮಾಜಿನ ಬಗ್ಗೆಯಾಗಲಿ, ಅಲ್ಲಿ ತನ್ನ ಕರ್ತವ್ಯವಾದ ಇಮಾಮಾತ್‌ನ ಬಗ್ಗೆಯಾಗಲಿ, ಇಮಾಮ್ ಜಮಾತಿನಲ್ಲಿ ಪಾಲ್ಗೊಳ್ಳುವ ಬಗ್ಗೆಯಾಗಲಿ, ಇಷ್ಟೊಂದು ತೀವ್ರ ನಿಗಾ ಇಡುವಂತಹ ವ್ಯಕ್ತಿಯನ್ನು ನಾನು ಈ ವರೆಗೂ ನೋಡಿಲ್ಲ. ಅನಿವಾರ್ಯ ಕಾರಣಗಳಿಂದ ಇಮಾಮತ್ ನಷ್ಟ ಹೊಂದುವ ಸಂದರ್ಭದಲ್ಲಿ ಅವರು ನೀರಿಲ್ಲದೆ ಚಡಪಡಿಸುವ ಮೀನಿನಂತೆ ಚಡಪಡಿಸುತ್ತಿದ್ದರು ಹೆದರುತ್ತಿದ್ದರು, ಸುಬ್‌ಹಾನಲ್ಲಾಹ್.. ಇದು ಅವರ ಆದರ್ಶ ಜೀವನದ ಸ್ಪಷ್ಟ ಉದಾಹರಣೆ

ಸ್ವಾಲಿಹ್ ಉಸ್ತಾದರ ಜೀವನವು ತುಂಬಾ ಕಷ್ಟದಾಯಕವಾಗಿತ್ತು. ಅವರ ಕಷ್ಟ ಜೀವನವನ್ನು ನಾನು ಒಂದೆರಡು ಬಾರಿ ನೋಡಿದ್ದೇನೆ. ಆದರೆ ಅವರು ತನ್ನ ಕಷ್ಟವನ್ನು ಸಾರ್ವಜನಿಕ ಜೀವನ ದಲ್ಲಿ ಎಲ್ಲಿಯೂ ಪ್ರಕಟಿಸಿಲ್ಲ. ಇದನ್ನು ನೆನೆಯುವಾಗ ನನಗೆ ರಸೂಲುಲ್ಲಾಹಿ ಸ್ವಲ್ಲಲ್ಲಾಹು





ಅಲೈಹಿ ವಸಲ್ಲಮರ ಪತ್ನಿಯಾಗಿದ್ದ ಅಸ್ಮಾ (ರ.ಅ.) ರವರು ಹರ್ಝ್ರತ್ ಆಯಿಷಾರವರೊಂದಿಗೆ ಪ್ರವಾದಿ (ಸ.ಅ.ಸ.) ರ ವಫಾತಿನ ಬಳಿಕ ಬಂದು ಪವಿತ್ರ ಪ್ರವಾದಿಗಳ ಯಾವುದಾದರೂ ಒಂದು ವಸ್ತುವನ್ನು ನನಗೆ ಕೊಡಿ ಎಂದು ಕೇಳಿದಾಗ, ಆಯಿಶಾರವರು ಒಂದು ನಿಲುವಂಗಿ (ಜುಬ್ಬಾ) ಯನ್ನು ನೀಡಿದರು. ಅದನ್ನು ಆಶ್ಚರ್ಯದಿಂದ ನೋಡಿದ ಅಸ್ಮಾರವರು ಆಯಿಶಾರಲ್ಲಿ ಇದು ಹಳೆಯದು ಇದರಲ್ಲಿ ಸುಮಾರು ಎಂಟರಷ್ಟು ಪತ್ತೆ (ಅಡೆ) ಇದೆಯಲ್ಲವೇ ಎಂದು ಕೇಳಿದಾಗ ಆಯಿಶಾರವರು ಇದಾಗಿರುತ್ತದೆ ಪ್ರವಾದಿಗಳು ರೂಹ್ ಹೋಗುವಾಗ ಧರಿಸಿದ ವಸ್ತ್ರ ಎಂದು ಹೇಳಿದರು. ಪ್ರವಾದಿಗಳ ಜೀವನವು ಎಷ್ಟು ಕಷ್ಟದಲ್ಲಿತ್ತು ಆದರೆ ತಪ್ಪಿಯೂ ತನ್ನ ಕಷ್ಟಗಳನ್ನು ಪ್ರಕಟಪಡಿಸದ ಪ್ರವಾದಿಗಳ ಆದರ್ಶ ಜೀವನ ನಾನು ಸ್ವಾಲಿಹ್ ಉಸ್ತಾದರಲ್ಲಿ ಕಂಡೆ. ಅವರು ಎಷ್ಟು ಕಷ್ಟದಲ್ಲಿದ್ದರೂ ಮುಗುಳ್ನಗೆಯೊಂದಿಗೆ ಜನರನ್ನು ಭೇಟಿಯಾಗುತ್ತಿದ್ದರು. ಅಲ್ಲದೆ ಅವರು ಆಲಿಂಗಳನ್ನು ವಿದ್ವಾಂಸರನ್ನು ಬಹಳ ಗೌರವಾದರಗಳಿಂದ ಕಾಣುತ್ತಿದ್ದರು. ಅದು ಚಿಕ್ಕ ಮುತಅಲ್ಲಿಮ್ ಆಗಲಿ, ಮಹಾ ವಿದ್ವಾಂಸರೇ ಆಗಲಿ ಬಹಳ ಗೌರವದಿಂದ ಕಾಣುತ್ತಿದ್ದರು.

ಬಹುಮಾನ್ಯ ಸ್ವಾಲಿಹ್ ಉಸ್ತಾದರು ಮರಣ ಹೊಂದುವ ದಿವಸ ನನ್ನ ಕಣ್ಣೆದುರು ವುಝೂ ಮಾಡಿ ಮಸೀದಿಯನ್ನು ಪ್ರವೇಶಿಸಿದ್ದರು,ಅವರ ಮರಣ ವುಝೂವಿನೊಂದಿಗಿತ್ತು, ವುಝೂವಿನೊಂದಿಗೆ ಮರಣ ಹೊಂದಿದವರ ದರ್ಜೆ ಸ್ವತಃ ಮಲಕುಲ್ ಮುಖರ್‍ರಬಾಯ ಜಿಬ್ರೀಲ್ (ಅ.ಸ) ರವರೆ ರೂಹ್ ಕೊಂಡು ಹೋಗುವ ಭಾಗ್ಯಶಾಲಿಗಳಲ್ಲಿ ಅವರೊಬ್ಬರಾಗಿದ್ದಾರೆ.

ಅವರ ಇಪ್ಪತ್ತೈದನೇ ಅನುಸ್ಮರಣೆಯ ಸಂಧರ್ಭದಲ್ಲಿ ಹೊರತರಲು ಉದ್ದೇಶಿಸಿರುವ 'ನಮ್ಮೂರ ಹೆಮ್ಮೆ ಬೆಲಿಯೊ ಉಸ್ತಾದ್' ಎಂಬ ಈ ಕೃತಿಗೆ ನಾನು ಸರ್ವ ವಿಧದ ಶುಭವನ್ನು ಹಾರೈಸುತ್ತಿದ್ದೇನೆ, ಪರಮ ದಯಾಳುವಾದ ಅಲ್ಲಾಹನು ದಿವಂಗತ ಉಸ್ತಾದರನ್ನೂ ಅವರೊಂದಿಗೆ ನಮ್ಮೆಲ್ಲರನ್ನೂ ಜನ್ನಾತುಲ್ ಫಿರ್‌ದೌಸ್ ಎಂಬ ಸ್ವರ್ಗದಲ್ಲಿ ಸೇರಿಸಲಿ ಎಂಬ ಪ್ರಾರ್ಥನೆಯೊಂದಿಗೆ.

# ಶುಭ ಸಂದೇಶ

ವಿ.ಯು. ಅಬ್ದುನ್ನಾಸಿರ್ ಮದನಿ ಸೂರಿಂಜೆ
ಖತೀಬರು, ಮುಹ್ಯುದ್ದೀನ್ ಜುಮಾ ಮಸೀದಿ, ಕಾಟಿಪಳ್ಳ

ಪಣಂಬೂರು ಮುಸ್ಲಿಂ ಜಮಾಅತ್ ಕಾಟಿಪಳ್ಳದಲ್ಲಿ ಸುದೀರ್ಘ 35 ವರ್ಷಗಳ ಕಾಲ ಧಾರ್ಮಿಕ ನೇತೃತ್ವ ವಹಿಸಿ ಊರಿನಲ್ಲಿ ಧಾರ್ಮಿಕ ಕ್ರಾಂತಿಯನ್ನು ಉಂಟು ಮಾಡಿದ 'ಬೆಲಿಯೊ ಉಸ್ತಾದ್' ಎಂದೇ ಊರವರು ಪ್ರೀತಿಯಿಂದ ಕರೆಯುತ್ತಿದ್ದ ಮರ್ಹೂಂ ಸ್ವಾಲಿಹ್ ಉಸ್ತಾದ್ ನಮ್ಮಿಂದಗಲಿ 25 ವರ್ಷ ಪೂರ್ತಿಯಾಗುವ ಈ ಸಂದರ್ಭದಲ್ಲಿ ಅವರ ಶಿಷ್ಯರಾದ ಅನ್ಸಾರ್ ಕಾಟಿಪಳ್ಳ (ಮಸ್ಕತ್) ಮತ್ತು ಉಸ್ತಾದರ ಶಿಷ್ಯ ವೃಂದ ಲೇಖಕರು ಸೇರಿ ಅವರ ನೆನಪಿಗಾಗಿ ಹೊರತರುವ ಈ ಸಂಚಿಕೆ ನಿಜಕ್ಕೂ ಶ್ಲಾಘನೀಯ ಕಾರ್ಯ.

ಅವರ ಬದುಕನ್ನು ಅರಿತು ಅವರು ಕಲಿಸಿ ಕೊಟ್ಟ ಧಾರ್ಮಿಕ ಜ್ಞಾನವನ್ನು ಜೀವನದಲ್ಲಿ ಅಳವಡಿಸಿ ನೈಜ ಸುನ್ನಿಯಾಗಿ ಬದುಕಲು ಈ ಕೃತಿ ಉಪಯುಕ್ತವಾಗಲೆಂದು ಹಾರೈಸುತ್ತೇನೆ ಹಾಗೂ ಎಲ್ಲಾ ವಿಧದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅಲ್ಲಾಹನು ಅವರ ಪಾರತ್ರಿಕ ಜೀವನ ಸಂತೋಷಮಯಗೊಳಿಸಲಿ, ಅವರು ತೋರಿಸಿ ಕೊಟ್ಟ ದಾರಿಯಲ್ಲಿ ಚಲಿಸಲು ಅಲ್ಲಾಹನು ನಮಗೆಲ್ಲರಿಗೂ ತೌಫೀಕನ್ನು ನೀಡಲಿ. ಆಮೀನ್.

# ಶುಭ ಸಂದೇಶ


**ಕೆ. ಅಹ್ಮದ್ ಬಾವ ಅಯ್ಯೂಬ್**

ಅಧ್ಯಕ್ಷರು, ಪಣಂಬೂರ್ ಮುಸ್ಲಿಂ ಜಮಾಅತ್, ಕಾಟಿಪಳ್ಳ


ಪಣಂಬೂರ್ ಮುಸ್ಲಿಂ ಜಮಾಅತ್ ಕಾಟಿಪಳ್ಳ ಇಲ್ಲಿ ದೀರ್ಘಕಾಲ ಖತೀಬರಾಗಿ ಸೇವೆ ಸಲ್ಲಿಸಿದ್ದ ಗೌರವಾನ್ವಿತ ಉಸ್ತಾದರಾದ ಮರ್ಹೂಂ ಸ್ವಾಲಿಹ್ ಉಸ್ತಾದರ ಇಪ್ಪತ್ತೈದನೇಯ ಅನುಸ್ಮರಣೆಯ ಪ್ರಯುಕ್ತ ಉಸ್ತಾದರ ನಡೆ- ನುಡಿಗಳ ಬಗೆಗಿನ ಸ್ಮರಣ ಸಂಚಿಕೆಯೊಂದನ್ನು ಹೊರ ತರಲು ಉದ್ದೇಶಿಸಿರುವ ವಿಷಯ ತಿಳಿದು ಸಂತೋಷವಾಯಿತು.

ಸ್ವಾಲಿಹ್ ಉಸ್ತಾದರು ಕಾಟಿಪಳ್ಳ ಜಮಾಅತರ ಪಾಲಿಗೆ ನ್ಯಾಯ ನೀಡುವ ಸುಪ್ರೀಂ ಕೋರ್ಟ್ ಆಗಿದ್ದರು. ಜನನದಿಂದ ಹಿಡಿದು ಮರಣ ತನಕದ ಸರ್ವ ಕಾರ್ಯಗಳಿಗೂ ಉಸ್ತಾದರನ್ನೇ ಜಮಾಅತ್ ಬಾಂಧವರು ಆಶ್ರಯಿಸುತ್ತಿದ್ದರು. ಉಸ್ತಾದರ ಜೀವನ ಮತ್ತು ಬದುಕು ಇಂದಿನ ಬಹುತೇಕ ಯುವಕರಿಗೆ ತಿಳಿದಿಲ್ಲ. ಅವರ ಜೀವನದ ಸಾರಗಳನ್ನು ಇಂದಿನ ಮತ್ತು ಮುಂದಿನ ತಲೆಮಾರುಗಳಿಗೆ ತಲುಪಿಸಿ ಉಸ್ತಾದರ ಹಾದಿಯಲ್ಲಿ ಯುವಕರು ಸಾಗುವಂತೆ ಮಾಡುವ ಜವಾಬ್ದಾರಿ ನಮಗಿದೆ. ಅದನ್ನು ನಿರ್ವಹಿಸಲು ತಡವಾಗಿಯಾದರೂ ಮುಂದೆ ಬಂದಿರುವುದು ಅಭಿನಂದನಾರ್ಹ. ಅಲ್ಲಾಹನು ಇದನ್ನು ಒಂದು ಸತ್ಕರ್ಮವಾಗಿ ಸ್ವೀಕರಿಸಲಿ.



# ಶುಭ ಸಂದೇಶ

**ಬದ್ರುದ್ದೀನ್ ಪಣಂಬೂರ್**
ಚೆಯರ್‌ಮ್ಯಾನ್, ನೂರುಲ್ ಹುದಾ
ಎಜ್ಯುಕೇಶನ್ ಟ್ರಸ್ಟ್ ಕಾಟಿಪಳ್ಳ

ಪಣಂಬೂರ್ ಮುಸ್ಲಿಂ ಜಮಾಅತಿನ 'ಅಮರ ದೀಪ' ದಂತಿದ್ದ ಖತೀಬ್ ಉಸ್ತಾದ್ ಮರ್ಹೂಮ್ ಎಂ. ಮುಹಮ್ಮದ್ ಸ್ವಾಲಿಹ್ ಮುಸ್ಲಿಯಾರ್‌ರವರ ನೆನಪಿನಲ್ಲಿ 'ನಮ್ಮೂರ ಹೆಮ್ಮೆ ಬೆಲಿಯೊ ಉಸ್ತಾದ್' ಎಂಬ ದಿವ್ಯ ಸಂಸ್ಮರಣಾ ಸ್ಮರಣ ಸಂಚಿಕೆಯನ್ನು ಅವರ ವಿದ್ಯಾರ್ಥಿ ಬಳಗದ ಜನಾಬ್ ಅನ್ಸಾರ್ ಕಾಟಿಪಳ್ಳ (ಮಸ್ಕತ್) ಇವರ ಮುಂದಾಳುತ್ವದಲ್ಲಿ ಹೊರತರುತ್ತಿರುವ ವಿಚಾರ ತಿಳಿದು ತುಂಬಾ ಸಂತೋಷವಾಯ್ತು.

ಅಲ್ಲಾಹು ನಿಮ್ಮೆಲ್ಲರ ಈ ಸತ್ಕಾರ್ಯವನ್ನು ಸ್ವೀಕರಿಸಿ ಸತ್ಫಲ ವನ್ನು ನೀಡಲಿ, ನೀವು ಹೊರತರಲಿಚ್ಚಿಸಿರುವ ಕಾಟಿಪಳ್ಳದ ಕಣ್ಮಣಿ ಬೆಲಿಯೊ ಉಸ್ತಾದರ ಸ್ಮರಣ ಸಂಚಿಕೆಯು ಅವಿಸ್ಮರಣೀಯ ಸಂಚಿಕೆಯಾಗಿ ಹೊರಬರಲಿ ಎಂದು ಹಾರೈಸುತ್ತೇನೆ.




# ಶುಭ ಸಂದೇಶ

ಅಧ್ಯಕ್ಷರು ಮತ್ತು ಸದಸ್ಯರು,
**ಸುನ್ನಿ ಯುವಜನ ಸಂಘ ಹಾಗೂ ಸುನ್ನಿ ಸ್ಟೂಡೆಂಟ್ ಫೆಡರೇಶನ್**
(ಎಸ್.ವೈ.ಯಸ್., ಎಸ್.ಎಸ್.ಎಫ್., ಕಾಟಿಪಳ್ಳ).

ಬೆಲಿಯೊ ಉಸ್ತಾದ್.... ಹೆಸರೇ ಹೇಳುವಂತೆ ಅವರು ನಮ್ಮ ಊರಿಗೆ ದೊಡ್ಡವರಾಗಿದ್ದರು..

ನಮ್ಮೆಲ್ಲರ ನೆಚ್ಚಿನ ಗುರುವರ್ಯರಾದ ಬೆಲಿಯೊ ಉಸ್ತಾದರ ಇಪ್ಪತ್ತೈದನೇ ವರ್ಷದ ಅನುಸ್ಮರಣಾರ್ಥ ಸ್ಮರಣಿಕೆ ಪ್ರಕಟಿಸುವ ವಾರ್ತೆ ತಿಳಿದು ಅತೀವ ಸಂತೋಷವಾಯಿತು.

ಎಸ್.ವೈ.ಎಸ್., ಎಸ್.ಎಸ್.ಎಫ್.ನ ಆರಂಭ ಕಾಲದಲ್ಲಿ ಸಂಘಟನೆಗೆ ಬೇಕಾಗಿ ಬಹಳ ಶ್ರಮ ವಹಿಸಿದ್ದರು. ಈ ಭಾಗ ದಲ್ಲಿ ಸುನ್ನತ್ ಜಮಾಅತಿನ ತತ್ವಾದರ್ಶಗಳನ್ನು ಜನರಿಗೆ ಬೋಧಿಸುವಲ್ಲಿ ಯಶಸ್ವಿಯಾಗಿದ್ದರು.

ಅಲ್ಲಾಹು ಉಸ್ತಾದರ ದರ್ಜೆ ಉನ್ನತಿಗೇರಿಸಲಿ, ಉಸ್ತಾದ ರೊಂದಿಗೆ ನಮ್ಮನ್ನು ಅಲ್ಲಾಹು ಸ್ವರ್ಗದಲ್ಲಿ ಒಂದುಗೂಡಿಸಲಿ, ಆಮೀನ್ ಯಾ ರಬ್ಬಲ್ ಆಲಮೀನ್...

ಮುಖಪುಟ ಲೇಖನ

# ನಮ್ಮೂರ ಹೆಮ್ಮೆ ಬೆಲಿಯೊ ಉಸ್ತಾದ್

ಅನ್ಸಾರ್ ಕಾಟಿಪಳ್ಳ

ಎಂ. ಮುಹಮ್ಮದ್ ಸ್ವಾಲಿಹ್ ಬೆಲಿಯೊ ಉಸ್ತಾದ್, ದಿನಾಂಕ 14-07-1934ರಂದು ಮಂಗಳೂರು ಬಂದರಿನಲ್ಲಿ ಹಾಜಿ ಫಕ್ರುದ್ದೀನ್ ಫಾತಿಮಾ ದಂಪತಿಗಳ ಮಗನಾಗಿ ಜನಿಸಿದರು. ಮಂಗಳೂರಿನ ಕಸಾಯಿಗಲ್ಲಿಯಲ್ಲಿ ಬೆಲಪಲ್ಲಿ ಖತೀಬರೆಂದೇ ಖ್ಯಾತರಾದ ಸಿ. ಕುಂಞ ಅಹ್ಮದ್ ಮುಸ್ಲಿಯಾರರಲ್ಲಿ ಸುದೀರ್ಘ ಕಾಲ ಧಾರ್ಮಿಕ ವಿದ್ಯೆಯನ್ನು ಕಲಿತರು.

1955 ರಿಂದ 1960ರವರೆಗೆ ಸುಮಾರು ಐದು ವರ್ಷ ಬಂದರ್ ಪ್ರದೇಶದ ಬೂಕುರೊ ಪಳ್ಳಿ (ಬೂಬುಕಾನ್ ಮಸ್ಜಿದ್)ಯಲ್ಲಿ ಸೇವೆ ಸಲ್ಲಿಸಿದ್ದ ಉಸ್ತಾದರು ಅಂದಿನ ಬಂದರು ಬ್ಯಾರಿಗಳ ಹೆಸರು ವಾಸಿಯಾದ ಹದಿನಾರು ಮನೆಯ (ಪೊವುನಾರ್ ಔತುರೊ) ಜನರಿಗೆ ಪ್ರೀತಿಯ ಉಸ್ತಾದರಾಗಿದ್ದರು ನಮ್ಮ ಬೆಲಿಯೊ ಉಸ್ತಾದ್, ಅರ್ಥಾತ್ ಹಾಜಿ ಎಂ. ಮುಹಮ್ಮದ್ ಸ್ವಾಲಿಹ್ ಉಸ್ತಾದ್.

ನಂತರ 1960 ರಲ್ಲಿ ಪಣಂಬೂರು ಬಂದರು ಮಸೀದಿಯಲ್ಲಿ ಸುಮಾರು ನಾಲ್ಕು ವರ್ಷಗಳ ಕಾಲ ಖತೀಬ್ ಆಗಿ ಕಾರ್ಯನಿರ್ವಹಿಸಿ 1964 ಪಣಂಬೂರಿನಿಂದ ಕಾಟಿಪಳ್ಳಕ್ಕೆ ಬಂದು ತನ್ನ ಸೇವೆಯನ್ನು ಮುಂದುವರಿಸಿದರು. ಅಂದಿನಿಂದ 19 ಫೆಬ್ರವರಿ 1998ರ ಗುರುವಾರ ಮರಣದ ದಿನದವರೆಗೆ ಪಣಂಬೂರು ಮುಸ್ಲಿಂ ಜಮಾಅತ್ ಕಾಟಿಪಳ್ಳ ಇದರ ಖತೀಬ್ ಆಗಿ ಸೇವೆ ಸಲ್ಲಿಸಿದ್ದರು, ಅಂದರೆ ಬರೋಬ್ಬರಿ ಮೂವತ್ತೆಂಟು (38) ವರ್ಷ ಖತೀಬ್ ಆಗಿಯೂ, ಮುದರ್ರಿಸ್‌ರವರ ಅನುಪಸ್ಥಿತಿಯಲ್ಲಿ ಮುದರ್ರಿಸ್ ಆಗಿಯೂ ತನ್ನ ಜವಾಬ್ದಾರಿಯನ್ನು ನಿರ್ವಹಿಸುವುದರ ಜೊತೆಗೆ ಅಂದಿನ ವಯಸ್ಕರಿಗೂ ಧಾರ್ಮಿಕ, ಲೌಕಿಕ, ಸಾಮಾಜಿಕ ವಿದ್ಯೆ ಕಲಿಸಿದ ಕೀರ್ತಿ ಇವರಿಗಿದೆ. ಒಟ್ಟಾರೆ ಸುಮಾರು 43 ವರ್ಷಗಳಷ್ಟು ದೀರ್ಘ ಕಾಲ ಸೇವೆಗೈದಿರುವ ಬೆಲಿಯೊ ಉಸ್ತಾದ್ ನಮ್ಮೂರ ಹೆಮ್ಮೆ.





ಅವಿಭಜಿತ ಸುನ್ನೀ ಸಂಘಟನೆಯಲ್ಲಿ ಜಂ–ಇಯ್ಯತುಲ್ ಮುಅಲ್ಲಿಮೀನ್ ದ.ಕ. ಜಿಲ್ಲೆಯ ಸಲಹಾ ಸಮಿತಿಯಲ್ಲಿ ಹಲವು ವರ್ಷಗಳ ಕಾಲ ಸೇವೆಗೈದ ಉಸ್ತಾದರು ಆ ಸಮಯದಲ್ಲಿ ಕೇರಳದ ಉಸ್ತಾದು ಗಳವರನ್ನು ದೀನಿ ಪ್ರಭಾಷಣಕ್ಕಾಗಿ ಕರೆತರುವ ಅನಿವಾರ್ಯ ಪರಿಸ್ಥಿತಿಯೆಡೆಯಲ್ಲಿಯೂ ಬೆಲಿಯೊ ಉಸ್ತಾದ್‌ರ ಪ್ರಭಾಷಣ (ವಅಲ್) ಹತ್ತೂರು ಸುತ್ತ ಮನೆಮಾತಾಗಿತ್ತು. ಅದಕ್ಕೆ ಬಹುಮುಖ್ಯ ಕಾರಣ ಅವರ ಭಾಷಾ ಪಾಂಡಿತ್ಯವೂ, ಆಕರ್ಷಣೀಯ ಉಚ್ಚಾರವೂ, ಕೇಳುಗರ ಕಿವಿಯವರೆಗಷ್ಟೇ ತಲುಪದೆ ಹೃದಯಕ್ಕೂ ನಾಟಿಸುವ ಶೈಲಿ ಅವರಲ್ಲಡಗಿತ್ತು. ಅಲ್ಲದೆ ಇವರು ಅರಬಿಕ್, ಉರ್ದು, ಮತ್ತು ಕನ್ನಡ ಭಾಷೆಯಲ್ಲಿ ನಿರರ್ಗಳವಾಗಿ ಭಾಷಣ ಮಾಡುತ್ತಿದ್ದರು. ಆ ಸಮಯದಲ್ಲಿನ ಬೆರಳೆಣಿಕೆಯ ಪಾಂಡಿತ್ಯ ಪ್ರಭಾಷಣಕಾರರಲ್ಲಿ 'ಬೆಲಿಯೊ ಉಸ್ತಾದ್' ಮೊದಲಿಗರೆಂದರೆ ಅಚ್ಚರಿಯೇನಲ್ಲ.

ಆ ಜೀವವೇ ಹಾಗೆ, ಪ್ರೀತಿಯ ಕಡಲು, ಸಣ್ಣ ಪುಟ್ಟ ಸಾಧಾರಣ ಆಹ್ವಾನಕ್ಕೂ ತಲೆಯಾಡಿಸಿ ಅಂದಿನ ಹಂಚುಗಳಿಲ್ಲದ ಮುಳಿಯ ಮನೆಯಡಿಯಲ್ಲಿ ಮಣ್ಣು ಗೋಡೆಗಂಟಿ ಕುಳಿತವರು. ಬಡಿಸಿದ ಬಡವನ ಕಣ್ಣಂಚಿನಲ್ಲಡಗಿದ ಬೇಡಿಕೆಯನ್ನು ಕಣ್ಣೋಟದಿಂದಲೇ ಅರಿತು ಹೃದಯಾಂತರಾಳದಲ್ಲಿ ಸೃಷ್ಟಿಕರ್ತನೊಂದಿಗೆ ಬೇಡಿದವರು. ಹಾಗೆಂದು ಎಲ್ಲಿಯೂ ಅತೀ ಸಲುಗೆಯಿಂದಿದ್ದವರಲ್ಲ, ಗಾಂಭೀರ್ಯತೆ ಅವರ ಮುಖದಲ್ಲಿ ಅಚ್ಚೊತ್ತಿರುವ ಹಾಗೆ ಕಂಡಿರುವುದು ಕೇವಲ ವಿದ್ಯಾರ್ಥಿಗಳಿಗೆ ಮಾತ್ರವಲ್ಲ, ಉಸ್ತಾದರ ಆಗಮನ ಕಂಡು ಊರ ಧೂಮಪಾನಿಗಳೂ ಆಗಷ್ಟೇ ಅಲ್ಪ ಸುಟ್ಟ ಬೀಡಿಯನ್ನು ಚಪ್ಪಲಿಯಡಿಗೆ ತುರುಕಿ ಕಾಲ್ಕಿತ್ತವರು ಕೂಡ ಈಗಲೂ ಆ ಮೊಗದ, ಆ ನಡೆಯ ಗಾಂಭೀರ್ಯವನ್ನು ನೆನೆಯುತ್ತಾರೆ. ಇದು ಆ ಗಾಂಭೀರ್ಯಕ್ಕೆ ಸಿಕ್ಕ ಹೆದರಿಕೆಗಿಂತಲೂ ಉಸ್ತಾದರಿಗೆ ಊರವರಿಂದ ಸಿಕ್ಕ ಗೌರವವೆಂಬುದಂತೂ ಸತ್ಯ. ಬೆಲಿಯೊ ಉಸ್ತಾದ್ ಆ ಗೌರವವನ್ನು ಪಡೆಯಲು ಅವರ ದಾರಿಯಲ್ಲಿ ಊರ ಏಳಿಗೆಗಾಗಿರುವ ತ್ಯಾಗವಿತ್ತು, ತನಗೆ ನೀಡಿದ ಜವಾಬ್ದಾರಿಯಲ್ಲಿ ಸಂಪೂರ್ಣ ಸಮರ್ಪಣೆಯಿತ್ತು. ಹೊಗಳಿಕೆಗೆ ಯತೇಚ್ಚ ಅರ್ಹರಾಗಿದ್ದರೂ ಮೆಚ್ಚಿಸಿಕೊಳ್ಳುವ ಪರಿವೆಯ ಗೊಡವೆಗೆ ಬೀಗದೆ, ಚಪ್ಪಾಳೆ ಗಿಟ್ಟಿಸಿಕೊಳ್ಳುವ ಗೋಜಿಗೆ ಸುಳಿಯದೆ ತನ್ನತನವನ್ನು ಉಳಿಸಿಕೊಂಡವರು.

"ಸಬ್ಬಿ ಹಿಸ್ಮ ಲಬ್ಬಿಕಲ್... ನಿಂದ ಸುಹುಫಿ ಇಬ್‌ರಾಹೀಮ ವ ಮೂಸಾ ದವರೆಗಿನ ಅಲ್ ಅಅಲಾ ಸೂರ ಮತ್ತು ಅಲ್ ಅತಾಕ ಹದೀಸುಲ್...ನಿಂದ ಸುಮ್ಮ ಇನ್ನ ಅಲಯಿನಾ ಹಿಸಾಬಹುಂ" ವರೆಗಿನ ಅಲ್ ಘಾಶಿಯ" ಸೂರ, ಜುಮಾ ನಮಾಝಿನಲ್ಲಿ ಆ ಸೂರಾದ ಸ್ವಾದದ ಏರಿಳಿತಗಳಿಂದ ಉಚ್ಚರಿಸುವ ರೀತಿಯು ಅವರ ಹಿಂದಿನ ಸಾಲುಗಳಲ್ಲಿದ್ದವರಿಗೆ ನೆನಪಿನಿಂದ ಮಾಸದು. ಆ ಎರಡು ಸೂರಾಗಳನ್ನೂ ನಾನು ದರ್ಸಿನ ಎರಡನೆಯ ತರಗತಿಯ ಸಮಯದಲ್ಲಿ ಜುಮಾ ನಮಾಝಿನಲ್ಲಿಯೇ ಕೇಳಿ ಕಲಿತದ್ದು, ಅದು ಜುಮಾ ನಮಾಝಿನ ಉಸ್ತಾದರ ಆ ಮಧುರ ಧ್ವನಿಯಿಂದ ನೇರ ನನ್ನ ಹೃದಯಕ್ಕೆ ಸ್ಪರ್ಷಿಸಿದ ಆ ಚಲನೆ ಈಗಲೂ ಮೈ ಜುಮ್ಮೆನ್ನುತ್ತಿದೆ. ಅದು ಆ ಧ್ವನಿಯ ತಾಕತ್ತು. ನನ್ನ ಹಾಗೆ ಅದೆಷ್ಟೋ ಜಮಾತಿನ ಊರ ಹಿರಿಕಿರಿಯರು ಆ ಧ್ವನಿಯ ಸ್ಪರ್ಷವನ್ನು ತಮ್ಮ ಹೃದಯಕ್ಕೆ ಭಟ್ಟಿ ಇಳಿಸಿರಬಹುದು. ಇನ್ನು ಜುಮಾ ಖುತುಬಾದಲ್ಲಿಯೂ ಹಾಗೆಯೇ ಆ ಮೂರು ಬಾರಿ ಪುನರಾವರ್ತನೆಗೊಳ್ಳುವ "ಅಲ್ಲಾಹುಮ್ಮ ಅಜಿರ್‌ನಾ ಮಿನನ್ನಾರ್"....ಅವರ ಖುತುಬಾವನ್ನು ಆಲಿಸಿದವರಿಗೆ ಮರೆಯಲು ಸಾಧ್ಯವೇ? ಇನ್ನು ರಮಳಾನ್ ತಿಂಗಳ ತರಾವೀಹನ್ನು ಅವರ ಮಅಮೂಮಿನ ಸಾಲಿನಿಂದ ಹಿಡಿದು ಕೊನೆಯ ಸಾಲಿನವರೆಗಿದ್ದವರೆಲ್ಲರಿಗೂ ಆ ತರಾವೀಹ್ ಮರೆಯಲು ಅಸಾಧ್ಯವೇ ಸರಿ, ಇನ್ನು



ರಮಳಾನ್ ತಿಂಗಳ ಪ್ರತೀ ಶುಕ್ರವಾರದ ಜುಮಾ ನಮಾಝಿನ ಬಳಿಕದ ತೌಬಾ ಹೇಳಿಕೊಡುವ ಧ್ವನಿ ಮಸೀದಿಯಲ್ಲಿ ಕರ್ತನೊಂದಿಗೆ ಕೋರಿಕೆಯಲ್ಲಿ ಮಘ್ನರಾದವರ ಜೊತೆಗೆ ಆ ಮೈಕಿನ ಮೂಲಕ ಉಸ್ತಾದರ ಧ್ವನಿ ತಲುಪುವ ಮನೆಯವರೆಗೆ ಅದೆಷ್ಟೋ ಮನೆಯಲ್ಲಿ ತಲೆಗೆ ಶಾಲು ಹೊದಿಸಿ ಅವರ ತೌಬಾದ ಧ್ವನಿಗೆ ದನಿಗೂಡಿಸಿದ ಆ ಮಹಿಳೆಯರೂ ಬೆಲಿಯೊ ಉಸ್ತಾದ್‌ರವರನ್ನು ಮರೆಯಲು ಅಸಾಧ್ಯವಷ್ಟೆ. ಅವರ ಖುತುಬಾದ ಶಬ್ದ, ಶೈಲಿಯನ್ನಾಲಿಸಲು ಹತ್ತಿರದ ಊರಾದ ಕೈಕಂಬ, ಮಂಗಳಪೇಟೆ, ಕೃಷ್ಣಾಪುರದಿಂದಲೂ ಜನ ಬರುತ್ತಿದ್ದರಲ್ಲದೆ, ಊರಿಂದ ಮಂಗಳೂರಿನ ಸುತ್ತ ಮುತ್ತ ವಾಸ್ತವ್ಯ ಬದಲಾಯಿಸಿದ್ದವರೂ ಜುಮಾ ದಿನದಂದು ಕಾಟಿಪಳ್ಳ ಮಸೀದಿಗೆ ಹಾಜರಾಗುತ್ತಿದ್ದದ್ದು ಉಸ್ತಾದರ ಖುತುಬಾ ಪಾರಾಯಣವನ್ನಾಲಿಸಲು ಎಂಬುವುದು ನಾ ಕೇಳಿ ತಿಳಿದ ವರದಿ.

ಅವರ ವಿದ್ಯಾರ್ಥಿ ಎನ್ನಲು ನನಗಂತೂ ಹೆಮ್ಮೆಯಿದೆ, ನನ್ನ ಬೆಲಿಯೊ ಉಸ್ತಾದರನ್ನು ನಾ ಕಂಡ ಬೆತ್ತದ ರುಚಿಯ ಜೊತೆಗೆ ಮಕ್ಕಳ ಜೊತೆಯಲ್ಲಿ ಉಸ್ತಾದರವರಿಗಿದ್ದ ಕಾಳಜಿ ಮನದ ಮೂಲೆಯಲ್ಲಿ ಇನ್ನೂ ಅಚ್ಚಳಿಯದೆ ಉಳಿದಿರುವುದೇ ಈ ಅಕ್ಷರ ಜೋಡನೆಯ ಪ್ರಯತ್ನ. ನಾನು ಅವರ ವಿದ್ಯಾರ್ಥಿಯಾಗಿ ಮದರಸಾದಲ್ಲಿ ಕಲಿಯುವ ಸಮಯ ಉಸ್ತಾದರು ಕೈಯಲ್ಲೊಂದಿಷ್ಟು ನಾಣ್ಯವನ್ನು ಹಿಡಿದು ನಾವು ಕುಳಿತುಕೊಳ್ಳುತ್ತಿದ್ದ ಬೆಂಚಿನ ಬಳಿಗೆ ಬಂದು ಆಯ್ದ ಕೆಲವು ಮಕ್ಕಳಿಗೆ ಒಂದು ರೂಪಾಯಿ ನೀಡುತ್ತಿದ್ದರು. ಆದರೆ ಆ ನಾಣ್ಯಕ್ಕೆ ಹಾತೊರೆಯುತ್ತಿದ್ದ ನನಗೆ ಅವರ ನಾಣ್ಯಗಳು ನನ್ನ ಕೈ ಸೇರಲೇ ಇಲ್ಲ. ಅಂದೊಮ್ಮೆ ನನ್ನ ತಂದೆಯವರಿಗೆ ಉಸ್ತಾದರ ಈ ತಾರತಮ್ಯದ ಬಗ್ಗೆ ದೂರು ನೀಡಿದ್ದೆ. ಮರುದಿನ ತಂದೆಯವರಿಂದ ಸಿಕ್ಕಿದ ಉತ್ತರಕ್ಕೆ ಸ್ಥಬ್ದನಾಗಿದ್ದೆ. ಅವರು ಆಯ್ದು ನೀಡುತ್ತಿದ್ದ ವಿದ್ಯಾರ್ಥಿ ಕೈಗಳು ಒಂದೋ ಯತೀಂ ಮಕ್ಕಳು ಅಥವಾ ಉಸ್ತಾದರು ಅರಿತ ಇನ್ನಿತರ ಕಾರಣಗಳು, ಅಂದರೆ ಉಸ್ತಾದರು ಪ್ರತಿಯೊಂದು ಮಕ್ಕಳನ್ನು ಅರಿಯುವ ಜೊತೆ ಜೊತೆಗೆ ಮಕ್ಕಳ ಕುಟುಂಬವನ್ನೂ ಅರಿತ ಜಮಾಅತಿನ ಯಶಸ್ವೀ ನಾಯಕನೆಂದೇ ಹೇಳಬಹುದು. ಈಗ ಅದೆಷ್ಟು ಉಸ್ತಾದರು ಮಕ್ಕಳಿಗೆ ಪಠಿಸುವುದರೊಂದಿಗೆ ಮಕ್ಕಳನ್ನು ಸಂಪೂರ್ಣ ಅರಿಯುವ ಮಟ್ಟಿಗೆ ಪ್ರಯತ್ನಿಸುತ್ತಿದ್ದಾರೆಂಬುವುದು ಇಂದಿನ ಉಸ್ತಾದರುಗಳೇ ಅವಲೋಕಿಸಬೇಕು. ಬೆಲಿಯೊ ಉಸ್ತಾದರು ಈ ರೀತಿಯಲ್ಲಿ ಆಯ್ದ ಮಕ್ಕಳಿಗೆ ಮಾತ್ರ ಕೊಡುತ್ತಿದ್ದ ರೂಪಾಯಿಯ ಮೌಲ್ಯವಷ್ಟೇ ಅರಿತಿದ್ದ ನನಗೆ ಅದರ ಆಳ ಅರಿಯುವಾಗ ತಡವಾಗಿತ್ತು. ಅಂತೂ ತಂದೆಯವರಿಂದ ಉಸ್ತಾದರಿಗೂ ನಾ ಕೊಟ್ಟ ದೂರು ಹೋಯಿತೋ ಗೊತ್ತಿಲ್ಲ ನಂತರ ಉಸ್ತಾದರ ಕೈಯಿಂದ ನನಗೂ ಒಂದೆರಡು ಬಾರಿ ನಾಣ್ಯವಂತೂ ಸಿಗುವಾಗ ಆ ಖುಷಿಗಂದು ಪಾರವೇ ಇರಲಿಲ್ಲ.

ಇನ್ನು ಊರಿನ ಬಹುತೇಕ 'ಮದುವೆ ದಿನ ನಿಗದಿ'ಯ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಾ, ಜಮಾಅತಿನ ಮನೆಗಳಲ್ಲಿ ಸಿಹಿಸುದ್ದಿ, ಕಹಿ ಸುದ್ದಿಗಳಲ್ಲಿ ತನ್ನ ಇರುವಿಕೆಯನ್ನು ಖಾತ್ರಿಪಡಿಸುತ್ತಾ, ಮರಣ ನಡೆದ ಮನೆಯಲ್ಲಿ ಬಹಳಷ್ಟು ಸಮಯ ವಹಿಸಿ ಆ ಕುಂಟುಂಬವನ್ನು ಸಾಂತ್ವನಿಸುತ್ತಾ, ಊರ ಏಳಿಗೆಯನ್ನೇ ಬಯಸಿದ ಉಸ್ತಾದರು ಹೊಗಳಿಕೆಗೆ ಅರ್ಹರಲ್ಲವೇ? ಮದ್ರಸಾದಲ್ಲಿ ಅನಿವಾರ್ಯವಾಗಿ ಯಾವುದಾದರೂ ಉಸ್ತಾದರ ಅನುಪಸ್ಥಿತಿಯಲ್ಲಿ ತರಗತಿಯನ್ನು ನಡೆಸುತ್ತಾ, ಮಸೀದಿಯಲ್ಲಿ ಮುಕ್ರಿಕರವರ ಅನುಪಸ್ಥಿತಿಯಲ್ಲಿ ಬಾಂಗ್ ಕೊಡುತ್ತಾ, ಅಂದಿನ ಸಮಯದಲ್ಲಿ ಜಮಾಅತಿನ ಬಾಡಿಗೆ ಪಾತ್ರೆಗಳನ್ನು ಬಾಡಿಗೆದಾರರಿಗೆ ನೀಡುವ ಮುಕ್ರಿಕರವರ ಅನುಪಸ್ಥಿತಿಯಲ್ಲಿ ಆ ಕೆಲಸವನ್ನು ತಾನೇ ನಿರ್ವಹಿಸುತ್ತಾ, ಕಾಟಿಪಳ್ಳದ ಜಮಾಅತಿನೊಳಗೆ, ಮದ್ರಸದ ಸುಪರ್ದಿಯೊಳಗೆ, ಜಮಾಅತಿನ ಸದಸ್ಯರ ಏಳಿಗೆಯಲ್ಲೂ ತನ್ನ ಪ್ರೇರಣೆಯ ಸಾಲಿನೊಂದಿಗಿನ ಜಮಾತಿನ ಸದಸ್ಯರೆಲ್ಲರನ್ನೂ ಹುರಿ

ದುಂಬಿಸುತ್ತಾ ಸಂಪೂರ್ಣ ಆಲ್‌ರೌಂಡರ್ ಆಗಿದ್ದರೂ ತನಗಾಗಿಟ್ಟ ವೇತನವನ್ನಷ್ಟೆ ಸ್ವೀಕರಿಸುತ್ತಿದ್ದರು. ಎಲ್ಲಿಯೂ ಉಸ್ತುವಾರಿಗಳ ಜೊತೆಗೆ ತನ್ನದಲ್ಲದ ಕೆಲಸಕ್ಕೆ ಸೇರಿಸಿಕೊಡುವ ವೇತನಕ್ಕೆಂದೂ ಕೈ ಚಾಚಲಿಲ್ಲವೆನ್ನುವುದು ಅಂದಿನ ಆಡಳಿತ ಮಂಡಳಿಯ ಸದಸ್ಯರ ಮಾಸದ ನೆನಪುಗಳು.

ಇನ್ನು ಮುಹಮ್ಮದ್ ಸ್ವಾಲಿಹ್ ಉಸ್ತಾದರ ಮನೆಯು ದಾಖಲು (ರಿಜಿಸ್ಟ್ರೇಷನ್) ಕಛೇರಿಯಂತೆ ಮಾರ್ಪಡಿಸಿದ್ದರು. ಊರಿನ ಜಮಾಅತಿನಲ್ಲಿ ಜನನವಾದರೂ, ಮರಣವಾದರೂ ಇವರ ಮನೆಗೆ ಹೋಗಿ ಎಲ್ಲರೂ ದಾಖಲು ಮಾಡುತ್ತಿದ್ದರು. ನನ್ನ ಜನ್ಮದಿನಾಂಕ ಇಂದಿಗೂ ದರ್ಸಿನಲ್ಲಿ ಮತ್ತು ಶಾಲೆಯಲ್ಲಿ ವ್ಯತ್ಯಾಸವಿದೆ. ನನ್ನ ಜನ್ಮದಿನಾಂಕದ ಈ ಬದಲಾವಣೆಯನ್ನು ನನ್ನ ಅರಿವಿಗೆ ಬಂದ ಪ್ರಾಯದಲ್ಲಿ ತಂದೆಯೊಡನೆ ಕೇಳಿದಾಗ ದರ್ಸಿನಲ್ಲಿರುವ ಜನ್ಮದಿನಾಂಕವೇ ಸರಿಯಾದ ದಿನಾಂಕವೆಂದೂ ಹುಟ್ಟಿದ ದಿನದಂದೇ ಬೆಲಿಯೊ ಉಸ್ತಾದರ ದಾಖಲು ಪುಸ್ತಕದಲ್ಲಿ ಹೋಗಿ ದಾಖಲು ಮಾಡಿದ್ದೆಂದೂ ಮತ್ತು ಆ ಸಮಯದಲ್ಲಿ ಹುಟ್ಟು ಮರಣದ ದಾಖಲೆ ಮಾಡಲು ಅವರ ಆದೇಶವಿತ್ತೆಂದೂ ನೆನಪಿಸಿದ್ದರು.

ಊರಿನ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಸಮದ್ ಮಾಸ್ಟರ್ ರವರು ಅದೊಂದು ಸಮಯದಲ್ಲಿ ಶಾಲಾ ವಾರ್ಷಿಕ ದಿನದಂದು ಇವರ ಬಗ್ಗೆ ಮನ ತುಂಬಿ ಮಾತಾಡಿದ್ದರು. ಏಕೆಂದರೆ ಆ ಸಮಯದಲ್ಲಿ ಮಕ್ಕಳನ್ನು ಶಾಲೆಗೆ ಸೇರಿಸುವಾಗ ಎಡಕೈಯು ಬಲಕಿವಿಗೂ ಬಲ ಕೈಯು ಎಡ ಕಿವಿಗೂ ತಾಗುವ ಅಂದಾಜಿನೊಂದಿಗೆ ಇದ್ದಿತ್ತೆಂಬುವುದು ಕೇಳಿದ ನೆನಪಿದೆ. ಇನ್ನು ಸಮದ್ ಮಾಸ್ಟರರು ಶಾಲಾ ವಾರ್ಷಿಕ ದಿನದ ಕಾರ್ಯಕ್ರಮದ ತನ್ನ ಭಾಷಣದಲ್ಲಿ ಹೇಳಿರುವಂತೆ ಮಕ್ಕಳ ಜನ್ಮದಿನದ ಸರಿಯಾದ ಮಾಹಿತಿಯು ಮಕ್ಕಳ ರಕ್ಷಕರ ಜೊತೆ ಇರದಿದ್ದರೂ ಬೆಲಿಯೊ ಉಸ್ತಾದರ ರಿಜಿಸ್ಟರ್ ಫೈಲ್‌ನಲ್ಲಿ ಭದ್ರವಾಗಿರುತ್ತಿತ್ತು. ಅನಿವಾರ್ಯವಿದ್ದಾಗ ಉಸ್ತಾದರ ಮನೆಯ ದಾಖಲು ಪುಸ್ತಕದ ಮೂಲಕವೇ ಶಾಲೆಯ ರಿಜಿಸ್ಟಾರಿಗೆ ಅದೆಷ್ಟೋ ಮಕ್ಕಳ ಜನ್ಮದಿನಾಂಕವು ಹೋಗುತ್ತಿತ್ತು. ಅಲ್ಲದೆ ಉಸ್ತಾದರ ಈ ಸೇವೆಯೆಲ್ಲವೂ ಸಂಪೂರ್ಣ ಉಚಿತವಾಗಿದ್ದು ಅದು ಉಸ್ತಾದರ ಸ್ವಾರ್ಥವಿಲ್ಲದ ಊರಿನ ಸಾರ್ಥಕತೆ ಎಂದೇ ಹೇಳಬಹುದು.

ಇನ್ನು ಉಸ್ತಾದರ ಬಗೆಗಿನ ಈ ಕೃತಿಯ ಬಯಕೆಗಾಗಿ ಊರ ಮಹನೀಯರೊಂದಿಗೆ, ಅಂದಿನ ಅವರ ವಿದ್ಯಾರ್ಥಿಗಳೊಂದಿಗೆ ಚರ್ಚೆ ನಡೆಸಿ ಅವರ ಅನುಭವವನ್ನು ಮೆಲುಕು ಹಾಕಿದಾಗ ಬಹಳಷ್ಟು ವಿಷಯಗಳು ನನ್ನ ಸ್ಮೃತಿ ಪಟಲದಲ್ಲಿ ಅಚ್ಚೊತ್ತಿದ್ದರೂ ಎಲ್ಲವನ್ನೂ ಇಲ್ಲಿ ತುಂಬಿಸಲು ಅಸಾಧ್ಯ, ಸಂಪಾದಕೀಯದಲ್ಲಿ ಹೇಳಿದಂತೆ ನನ್ನ ಕಿವಿಗೆ ಬಿದ್ದ ಅವರ ಮತ್ತೊಂದು ಮೈಲಿಗಲ್ಲು ಅಂದೊಮ್ಮೆ ಮಂಗಳೂರು ಜೈಲ್ ಅಧಿಕಾರಿಗಳು ಖೈದಿಗಳ ಮನಪರಿವರ್ತಿಸಲು ಮಂಗಳೂರಿನ ಬೆಲಪಳ್ಳಿಯ ಹಿರಿಯ ಉಸ್ತಾದರುಗಳಾದ ಹಾಜಿ. ಸಿ. ಕುಂಞ ಅಹ್ಮದ್ ಮುಸ್ಲಿಯಾರ್‌ರವರಲ್ಲಿ ಕುರ್‌ಆನ್'ನಿನ ಮೂಲಕ ಬಹುಭಾಷೆಯಲ್ಲಿ ಸುಲಲಿತವಾಗಿ ವಿವರಿಸಲು (ಖೈದಿಗಳಲ್ಲಿ ವಿವಿಧ ಭಾಷೆಯವರಿರುವುದು ಸಾಮಾನ್ಯ) ಸಾಧ್ಯವಿರುವ ವಿದ್ವಾಂಸನನ್ನು ಅಪೇಕ್ಷಿಸಿದಾಗ ಉಸ್ತಾದರು ಕನ್ನಡ, ಉರ್ದು, ಹಿಂದಿ, ಅರೆಬಿಕ್, ಬ್ಯಾರಿ, ತುಳುವಿನ ಜೊತೆ ಸಾಧಾರಣವಾಗಿ ಆಂಗ್ಲ ಭಾಷೆಯ ಪಾಂಡಿತ್ಯವುಳ್ಳ ತನ್ನ ಸಕ್ರಿಯ ಶಿಷ್ಯ ಮುಹಮ್ಮದ್ ಸ್ವಾಲಿಹ್ ಬೆಲಿಯೊ ಉಸ್ತಾದರನ್ನು ನೇಮಿಸಿದರು. ಅದೇ ರೀತಿ ಖೈದಿಗಳಿಗೆ ಕುರ್‌ಆನಿನ ಅರ್ಥದೊಂದಿಗೆ ಇಹಲೋಕದ ಕ್ಷಣಿಕ ಖುಷಿಗಾಗಿ ನಡೆಯುವ ತಪ್ಪುಗಳನ್ನೂ ಅದನ್ನು ಸರಿಪಡಿಸಿ ತಿದ್ದಿ ಬಾಳುವ ಮನೋಸ್ಥೈರ್ಯವನ್ನೂ ಕೆಲವು ಸಮಯದವರೆಗೆ

ಬೋಧಿಸಿರುವುದು ಇವರ ಹಿರಿಮೆ. ಮತ್ತು ಇವರು ನಮ್ಮ ಉಸ್ತಾದರೆಂಬುವುದಕ್ಕಿರುವ ಹೆಮ್ಮೆ.

ಉಸ್ತಾದರು ಸಾಹಿತ್ಯ ಪ್ರೇಮಿಯಾಗಿದ್ದರಲ್ಲದೆ ಬಹಳಷ್ಟು ಮದ್‌ಹ್ ಗೀತೆಯನ್ನೂ, ನಾಥ್‌ಗಳನ್ನೂ, ದಫ್ ಹಾಡುಗಳನ್ನೂ ಬರೆದಿದ್ದರು. ಊರಿನಲ್ಲಿ ನಡೆಯುವ ಧಾರ್ಮಿಕ,ಸಾಮಾಜಿಕ, ಮತ್ತು ಮಕ್ಕಳ ಕಾರ್ಯಕ್ರಮಕ್ಕಾಗಿ ಕನ್ನಡ, ಬ್ಯಾರಿ, ಉರ್ದು, ಅರೆಬಿಕ್ ಭಾಷೆಯಲ್ಲಿ ರಚಿಸಿದ ಬೈತ್‌ಗಳನ್ನೆಲ್ಲ ಅಚ್ಚಾಗಿಸಿ ದರ್ಸಿನ ಹಿರಿಯ ವಿದ್ಯಾರ್ಥಿಗಳಿಗೆ ನೀಡುತ್ತಿದ್ದರು. ವಿದ್ಯಾರ್ಥಿಗಳು ಅದನ್ನು ಇಪ್ಪತ್ತೈದು ಪೈಸೆಗೆ ಮಾರುತ್ತಿದ್ದರು. ಬಂದ ಹಣವನ್ನು ಬಳಿಯಿರಿಸದೆ ವಿದ್ಯಾರ್ಥಿಗಳ ಕ್ಷೇಮಕ್ಕೆ ಉಪಯೋಗಿಸುತ್ತಿದ್ದರಲ್ಲದೆ ಉಸ್ತಾದರು ತನಗೆ ಬರುತ್ತಿದ್ದ ತಿಂಗಳ ಅಲ್ಪ ಸಂಪಾದನೆಯಲ್ಲೂ ಇಂತಿಷ್ಟನ್ನು ಯತೀಂ ಮಕ್ಕಳಿಗೆ ನೀಡುತ್ತಿದ್ದರು. ಒಟ್ಟಿನಲ್ಲಿ ಬಹುಮುಖ ಪ್ರತಿಭೆಯೂ ಊರ ಮನ ಮನೆಗಳಲ್ಲಿ ಇಂದಿಗೂ ಇನ್ನೆಂದಿಗೂ ತನ್ನ ನೆನಪನ್ನು ಅಚ್ಚೊತ್ತಿ ಇಹವನ್ನು ವಿರಮಿಸಿದ ಎಂ. ಮುಹಮ್ಮದ್ ಸ್ವಾಲಿಹ್ ಬೆಲಿಯೊ ಉಸ್ತಾದ್ ಇಂದಿನ ವಿದ್ವಾಂಸರಿಗೆ ಮಾದರಿ.

ಜ್ಞಾನದ ಸರ್ವ ಮಜಲುಗಳಲ್ಲೂ ತನ್ನ ಪಾಂಡಿತ್ಯದ ಪ್ರಭಾಕಿರಣಗಳನ್ನು ನನ್ನೂರ ಉದ್ದಗಲಕ್ಕೂ ಹಂಚಿದ ಉಸ್ತಾದರ ಜೀವನವು ಸಂಪೂರ್ಣವಾಗಿ ಅಲ್ಲಾಹನ ಇಷ್ಟದಾಸನ ಜೀವಿತ ಮಾದರಿಯಲ್ಲೇ ಸಾಗಿತ್ತು. ದೀನೀ ವಿಧಿ-ವಿಧಾನದ ಜೊತೆಗೆ ಸಾಮಾಜಿಕವಾಗಿಯೂ, ದೈನಂದಿನ ಜೀವನಕ್ಕಾಗಿಯೂ ಬೇಕಾಗುವ ಗುಣ-ನಡತೆಗಳನ್ನೂ ತನ್ನ ವಿದ್ಯಾರ್ಥಿಗಳ ಜ್ಞಾನ ಭಂಡಾರಕ್ಕೆ ಅಳವಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿ ಸತ್ಯ, ವಿನಯ, ಸೂಕ್ಷ್ಮತೆ ಮತ್ತು ಸರಳತೆಗೆ ಒತ್ತು ಕೊಟ್ಟ ನನ್ನ ಉಸ್ತಾದ್ ಇಂದಿನ ಉಸ್ತಾದರುಗಳಿಗೆ ಮಾದರಿ. ಇತ್ತೀಚಿನ ದಿನಗಳಲ್ಲಿ ಕಾಣಸಿಗುವಂತೆ, ಸ್ವಾರ್ಥ ಲಾಭಕ್ಕಾಗಿ ದೀನಿನ ಹೆಸರಿನಲ್ಲಿ ಸಮುದಾಯದ ಅಸ್ತಿತ್ವವನ್ನೇ ಪಣಕ್ಕಿಡುವ, ನೀಚ ಸಿದ್ಧಾಂತಗಳಿಗೆ ತಲೆಬಾಗಿ ತನ್ನತನವನ್ನು ಮಾರಿಕೊಂಡವರು ನನ್ನ ಬೆಲಿಯೊ ಉಸ್ತಾದರ ವಿದ್ಯಾರ್ಥಿಗಳಾಗಿದ್ದಿದ್ದರೆ ಖಂಡಿತವಾಗಲೂ ವಿಷದಾರಿ ಹಿಡಿಯುತ್ತಿರಲಿಲ್ಲ, ಕೊನೆಗೂ ನನಗನಿಸುವುದಿಷ್ಟೆ ಆ ಮಾರಿಕೊಂಡ ಜೀವಗಳಿಗೆ ನನ್ನ ಬೆಲಿಯೊ ಉಸ್ತಾದರ ಬೆತ್ತದ ರುಚಿ ಸಿಕ್ಕಿದ್ದಿದ್ದರೆ?

ಕೇವಲ ದೀನೀ ಕಾರ್ಯಕ್ಕೆ ಸೀಮಿತವಾಗದ ಬೆಲಿಯೊ ಉಸ್ತಾದ್‌ರ ಸಾಮಾಜಿಕ ಕಾರ್ಯವನ್ನು ಊರಿನ ಜನ ಈಗಲೂ ನೆನಪಿಸುತ್ತಿದ್ದಾರೆ.ಉಸ್ತಾದರ ಮರಣ ವಾರ್ತೆಯನ್ನು ಕೇಳಿ ಹಿಂದೂ ಮುಸ್ಲಿಂ ಕ್ರೈಸ್ತರ ಮುಖಂಡರುಗಳು ಸಂತಾಪ ಸೂಚಿಸಿದ್ದರು ಮತ್ತು ಆ ದಿನ ಎಲ್ಲಾ ಧರ್ಮಗಳ ಜನರು ತಮ್ಮ ಅಂಗಡಿ ಮುಂಗಟ್ಟುಗಳನ್ನು ಮುಚ್ಚಿ ಸಂತಾಪ ಸೂಚಿಸಿರುವುದು ಇವರ ಕೋಮು ಸಾಮರಸ್ಯದ ಪ್ರೀತಿಯನ್ನು ಡಾಕ್ಟರ್ ಅಶೋಕ್ ಕುಮಾರ್, ದಂತ ವೈದ್ಯರಾದ ಅರವಿಂದ್ ಭಟ್‌ರಂತವರು ಈಗಲೂ ನೆನಪಿಸುತ್ತಾರೆ.

ಇತ್ತೀಚೆಗೆ ಕರ್ನಾಟಕ ಸರಕಾರದ ಬ್ಯಾರಿ ಸಾಹಿತ್ಯ ಅಕಾಡೆಮಿ ಹೊರತಂದ 'ಮರಕೊಗಾವಾತೊ ಮರ್‌ಹೂಂ ಬ್ಯಾರಿಙ' ಎಂಬ ಪುಸ್ತಕದಲ್ಲಿ ಬೆಲಿಯೊ ಉಸ್ತಾದರ ಲೇಖನವು ಅಚ್ಚಾಗಿದೆ. ಹತ್ತೂರ ಸುತ್ತ ಹೆಕ್ಕಿ ತೆಗೆದ ಮರಕೊಗಾವಾತೊ ಮರ್ಹೂಂ ಬ್ಯಾರಿಯಾಗಿ ನನ್ನ ಉಸ್ತಾದರ ಲೇಖನ ಬರೆದು ಅದನ್ನು ಪ್ರಕಟಿಸಲು ಯಶಸ್ವಿಯಾಗಿರುವುದಕ್ಕೆ ನನಗೆ ತೃಪ್ತಿಯಿದೆ. ಆ ಕೃತಿಯು ಪ್ರಕಟವಾಗುವ ಸಮಯದಲ್ಲಿ ಉಸ್ತಾರ ಬಗ್ಗೆ ನಾ ಬರೆದ ಲೇಖನವನ್ನು ಓದಿ ತಿಳಿದ ಕೂಡಲೇ ಸಂಪಾದಕರ ತಂಡ ಹಸಿರು ನಿಶಾನೆ ತೋರಿಸಿದ್ದರು. ಹತ್ತೂರ ಸುತ್ತ ಹುಡುಕಿ ತೆಗೆಯುವ ಸಮಯದಲ್ಲಿ ಬಹಳಷ್ಟು ಹೆಸರುಗಳು ಆ ಕೃತಿಯಲ್ಲಿ ಪ್ರಕಟಿಸುವಷ್ಟರ ಮಟ್ಟಿಗೆ ಆರೋಗ್ಯಪೂರ್ಣವಾಗಿಲ್ಲವೆಂದು ಕೈ ಬಿಟ್ಟಿದ್ದರೂ ಉಸ್ತಾದರ

ಬಗೆಗಿನ ಲೇಖನ ಪ್ರಕಟಿಸಲು ಅಲ್ಪವೂ ಹಿಂಜರಿಯಲಿಲ್ಲ. ಅಲ್ ಹಂದುಲಿಲ್ಲಾಹ್, ಕರ್ನಾಟಕ ಸರಕಾರದ ಬಹುತೇಕ ಗ್ರಂಥಾಲಯಗಳಲ್ಲಿ ಈ ಪುಸ್ತಕ ಲಭ್ಯವಿರಲಿದೆ.

ಊರು ಕಂಡ ಈ ಮೇರು ಜೀವದ ಉಸಿರಿನಿಂದ ಕರ್ತನ ಗೆರಗಳನ್ನೋದಿ ಊದಿದ ಪಾಸ್ಪೋರ್ಟ್‌ಗಳು ಅದೆಷ್ಟೋ ಯಶಸ್ವಿಯ ತುತ್ತ ತುದಿಯಲ್ಲಿದೆ, ಅದೆಷ್ಟೋ ಊರ ವ್ಯಾಪಾರಿಗಳ ಮನ ಇಂದಿಗೂ ಮುದವಾಗಿದೆ. ಅದೆಷ್ಟೋ ಹೆಜ್ಜೆ ತಪ್ಪಿದ ಕುಟುಂಬಗಳು ಬಣ್ಣ ಕಂಡಿದೆ, ವೈದ್ಯರಲ್ಲದಿದ್ದರೂ ಅದೆಷ್ಟೋ ರೋಗಿಗಳು ಅವರ ಬಳಿ ಹೋದರೂ ಸಾಕು ಅದೇನೋ ಆಕರ್ಷಣೆ. ಮನಸ್ಸುಗಳೆಂಬುವುದೇ ಹಾಗೆ ತನ್ನ ಏಳಿಗೆಯ ಚೈತನ್ಯಕ್ಕೊಂದಿಷ್ಟು ಭಾವ ತುಂಬಿ ಹುರಿದುಂಬಿಸುವವರು ಬೇಕು, ತನ್ನ ಗೊಂದಲದ ಗೂಡಿಗೆ ಆತ್ಮ ಸ್ಥೈರ್ಯವನ್ನು ನೀಡಿ ಮನಸ್ಸು ಹಗುರವಾಗಿಸುವ ಗುರುಗಳು ಬೇಕು. ಅದನ್ನು ಬೆಲಿಯೊ ಉಸ್ತಾದ್ ಪೂರ್ತಿಗೊಳಿಸಿದ್ದಾರೆ.

ಮದ್ರಸದಲ್ಲಿ ವಿದ್ಯಾರ್ಥಿಗಳ ಸಾಲಿನಿಂದ ದಿನಕ್ಕೊಬ್ಬರಂತೆ ಹೆಕ್ಕಿ ತೆಗೆದು ದೀನೀ ವಸ್ತುಗಳನ್ನು ಕೊಟ್ಟು ಉಳಿದ ವಿದ್ಯಾರ್ಥಿಗಳೆದುರು ಪ್ರಸ್ತುತಪಡಿಸುವ ಕಲೆಯನ್ನೂ ಹೇಳಿಕೊಡುತ್ತಾ ವೇದಿಕೆಯ ಭಯವನ್ನು ಹೋಗಲಾಡಿಸುವುದರೊಂದಿಗೆ ಕಲಿಕೆಯ ಮತ್ತೊಂದು ಮಜಲಿಗೆ ತನ್ನ ಶಿಷ್ಯವೃಂದವನ್ನು ತಲುಪಿಸಿದ್ದರು. ಹೀಗೆ ಉಸ್ತಾದರಿಂದ ವಿದ್ಯಾರ್ಜನೆಗೈದ ಶಿಷ್ಯರು ದೇಶವಿದೇಶಗಳ ವಿವಿಧ ಕ್ಷೇತ್ರಗಳಲ್ಲಿ ಮಿಂಚಿದ್ದಾರೆ, ವೇದಿಕೆಯ ಮೇಲೆ ನಿರರ್ಗಳವಾಗಿ ಮಾತನಾಡಿದ್ದಾರೆ, ಈಗಲೂ ಮಾತನಾಡುತ್ತಿದ್ದಾರೆ, ಇದೆಲ್ಲ ಅವರ ಬೆತ್ತದ ಫಲ. ಅಗಾಧ ಪಾಂಡಿತ್ಯದಲ್ಲಿ ಧಾರ್ಮಿಕ ವಿಷಯವಷ್ಟೇ ಅಲ್ಲದೆ ಸಾಮಾಜಿಕ ಕಾಳಜಿ, ನಡೆ ನುಡಿಗಳ ಪ್ರೇರಣೆಯಿಂದ ಕಾಟಿಪಳ್ಳದ ಅದೆಷ್ಟೋ ಪ್ರತಿಭೆಗಳು ಹೆಸರುಗಳಿಸಿದ್ದಾರೆ. ತಪ್ಪು ಕಂಡಲ್ಲಿ ರಾಜಿಯಾಗದೆ, ನೇರ ನುಡಿಗೆಂದೂ ಸಮಯ ಮೀರಿಸದೆ ತನ್ನ ಕರ್ತವ್ಯವನ್ನು ಪಾಲಿಸಿದ ಬೆಲಿಯೊ ಉಸ್ತಾದರಂತಹ ಉಸ್ತಾದರು ಇಂದಿನ ಅನಿವಾರ್ಯ, ಸುತ್ತ ನಡೆಯುತ್ತಿರುವ ಹತ್ತು ಕೊರತೆಗೆ ಊರಿಗೊಂದು ಉಸ್ತಾದರಂತಹ ನಾಯಕನನ್ನು ಊರು ಬಯಸುತ್ತಿದೆಯಷ್ಟೆ. ಇವರ ಅಗಲುವಿಕೆಯ 25 ವರ್ಷವಾದರೂ ಆ ಸ್ಥಾನವನ್ನು ಅಷ್ಟೇ ನಿಖರವಾಗಿ ಯಾರೂ ತುಂಬಿಲ್ಲವೆನ್ನುವುದು ಊರ ಮೇರು ಧ್ವನಿಗಳ ಅಂಬೋಣ. ಅವರೀಗ ನಮ್ಮ ಬಳಿಯಿಲ್ಲ, ಬಹಳಷ್ಟು ನೆನಪುಗಳನ್ನು ಉಳಿಸಿ, ಬಹುತೇಕ ಪ್ರತಿಭೆಗಳನ್ನು ಬೆಳೆಸಿ ನಮ್ಮಿಂದ ಅಗಲಿದ್ದಾರೆ, ಅಲ್ಲಾಹನು ಅವರ ಖಬರನ್ನು ವಿಶಾಲಗೊಳಿಸಲಿ, ನನ್ನ ಬೆಲಿಯೊ ಉಸ್ತಾದ್ ಕರ್ತನ ನೆರಳಲ್ಲಿ ಅಮರವಾಗಿರಲಿ ಎಂಬ ದುಆದೊಂದಿಗೆ.....

# ಸಾತ್ವಿಕ ಸ್ವಾಲಿಹ್ ಉಸ್ತಾದರೊಂದಿಗೆ ಸಾರ್ಥಕ ಸಹ ವರ್ತಿತ್ವ

ಅಬೂಸುಫ್ಯಾನ್ ಮದನಿ
ಮಸ್ದರ್ ಎಜು-ಚಾರಿಟಿ ಉತ್ತರ ಕರ್ನಾಟಕ

ಜಿಲ್ಲೆಯ ಪ್ರತಿಷ್ಠಿತ ಮೊಹಲ್ಲಾಗಳಲ್ಲೊಂದಾದ ಪಣಂಬೂರ್ ಮುಸ್ಲಿಂ ಜಮಾಅತ್ ಕಾಟಿಪಳ್ಳದಲ್ಲಿ ಗರಿಷ್ಠ ಕಾಲ ಖತೀಬರಾಗಿದ್ದು ತನ್ನ ಸೇವಾ ಅವಧಿಯಲ್ಲಿಯೇ ವಫಾತಾದ ಸಾತ್ವಿಕ, ಮೌಲಾನ ಮುಹಮ್ಮದ್ ಸ್ವಾಲಿಹ್ ಉಸ್ತಾದ್ (ನ.ಮ).

ಉಸ್ತಾದರೊಂದಿಗೆ ಓರ್ವ ವಿಧೇಯ ಶಿಷ್ಯನಂತೆ ಜೊತೆಯಾಗಿ ಕಾರ್ಯ ನಿರ್ವಹಿಸಲು ಸೃಷ್ಟಿಕರ್ತನು ಅವಕಾಶ ಕಲ್ಪಿಸಿದ್ದು ನನ್ನ ಪಾಲಿನ ಬಹು ದೊಡ್ಡ ಭಾಗ್ಯ ಅಲ್ ಹಂದುಲಿಲ್ಲಾಹ್. ಸುಮಾರು ಐದಾರು ವರ್ಷಗಳ ನಮ್ಮೆಡೆಯಲ್ಲಿನ ನಿಕಟ ಸಂಬಂಧವು ನಿಜಕ್ಕೂ ಅತ್ಯಂತ ಆತ್ಮೀಯತೆಯಿಂದ ಕೂಡಿತ್ತು. ಗುರು ಶಿಷ್ಯ ಸಂಬಂಧದಂತೆ, ಅಥವಾ ತಂದೆ ಮಗನ ಸಂಬಂಧದಂತೆ, ಹೀಗೆ ಹೇಗೆ ಬೇಕಾದರೂ ನಮ್ಮೊಳಗಿನ ಬಾಂಧವ್ಯವನ್ನು ಅತೀ ಹತ್ತಿರದಿಂದ ಬಣ್ಣಿಸಬಹುದು. ಹಲವು ಬಾರಿ ನನಗೆ ವಾತ್ಸಲ್ಯಪೂರ್ವಕವಾಗಿ ಉಪದೇಶಿಸುತ್ತಾ ನನ್ನಲ್ಲಿ ಕಂಡ ತಪ್ಪುಗಳನ್ನು ತಿಳಿ ಹೇಳಿ ಸರಿಪಡಿಸಿದ್ದರು. ನನ್ನಲ್ಲಿದ್ದ ಸರಿಗಳಿಗೆ ಬೆನ್ನು ತಟ್ಟಿದ್ದರು. ಒಟ್ಟಿನಲ್ಲಿ ಹೃತ್ಪೂರ್ವಕವಾಗಿ ಮನದಾಳದಿಂದ ಪ್ರೀತಿಸಿದ್ದರು.

ಅಂದಿನ ಕಾಲದಲ್ಲಿ ಜುಮಾ ನಮಾಜ್ ಮುಗಿದ ತಕ್ಷಣ ಎದ್ದು ನಿಂತು ಉಪದೇಶ ನೀಡುವಂತೆ ಜಮಾಅತಿನ ಹಿರಿಯರ ಅಪೇಕ್ಷೆಯ ಮೇರೆಗೆ ನಾನು ಮುಂದಾಗುತ್ತಿದ್ದೆ. ಆದರೆ ನನ್ನ ಈ ಅಭ್ಯಾಸವು ಉಸ್ತಾದರಿಗೆ ಪೂರ್ಣ ತೃಪ್ತಿ ತಂದಿರಲಿಲ್ಲ. ಅನಂತರದ ಕಾಲದಲ್ಲಿ ನಮ್ಮ ವಿದ್ವಾಂಸರು ದಿಕ್ರ್, ದುಆ ಕ್ಕೆ ಮುಂಚಿತವಾಗಿ ಉಪದೇಶ ನೀಡುವುದನ್ನು ಸಂಪೂರ್ಣ ವಿರೋಧಿಸಿದರು. ಇದು ಉಸ್ತಾದರ ಸೂಕ್ಷ್ಮತೆಗೆ ಸಾಕ್ಷಿ.

ಉಸ್ತಾದರು ತನ್ನ ಮೊಹಲ್ಲಾದ ನಿವಾಸಿಗಳೊಂದಿಗೆ ಅಪಾರ ಪ್ರೀತಿ ಗೌರವ ತೋರಿಸುತ್ತಿದ್ದರು. ಎಲ್ಲರಂತೆ ತಾನೂ ಒಬ್ಬ ಮೊಹಲ್ಲಾದ ಕುಟುಂಬ ಸದಸ್ಯನಂತೆ ಸರಳವಾಗಿ ಸಹ ಜೀವನ ಸಾಗಿಸಿದರು. ತಾನು ಪ್ರತಿನಿಧಿಸಿದ ಮೊಹಲ್ಲಾದಲ್ಲಿ ಎಳ್ಳಷ್ಟೂ ಸಮಸ್ಯೆಗೆ ಅವಕಾಶ ನೀಡಿಲ್ಲ.

ಯಾವುದೇ ಸಂಘರ್ಷಕ್ಕೆ ಎಡೆಮಾಡಿ ಕೊಟ್ಟಿಲ್ಲ. ಜಮಾಅತಿನಲ್ಲಿ ಶೇಖಡಾ ನೂರರಷ್ಟು ಪಕ್ಷ ಪಾತ ರಹಿತ (ಇಮಾಮುನ್ ಆದಿಲ್) ಆಗಿ ಕಾರ್ಯ ನಿರ್ವಹಿಸಿದ್ದರು. ಸ್ಪಷ್ಟ ಬ್ಯಾರಿ ಭಾಷೆಯಲ್ಲಿ ಉಪದೇಶ, ಭಾಷಣ ನೀಡುತ್ತಿದ್ದರು. ತನ್ನ ಪಾಲಿನ ಕರ್ತವ್ಯವನ್ನು ಶ್ರದ್ಧೆಯಿಂದ ಅಚ್ಚುಕಟ್ಟಾಗಿ ನಿರ್ವಹಿಸಿದ್ದರು. ಸದ್ಗುಣ, ಸರಳತೆ, ಸ್ನೇಹ ಅವರ ಮುಖ ಮುದ್ರೆಯಾಗಿತ್ತು.

ಅಂದೊಮ್ಮೆ ಜಮಾಅತಿನ ಹಿರಿಯ ಸದಸ್ಯರಾಗಿದ್ದ ಇದ್ದಿನಬ್ಬ (ಇದ್ದಿಯಾಕ) ರವರ ಮನೆಯ ಮೌಲಿದ್ ಮಜ್ಲಿಸ್‌ನಲ್ಲಿ ನನ್ನೊಂದಿಗೆ ವಿನಯ ಪೂರ್ವಕ ಹೇಳಿದರು 'ಕ್ಷಮಿಸಬೇಕು ನಾನು ನನ್ನ ಕಾಲುಗಳನ್ನು ಮಡಚಿ (ಪಟ್ಟ ಇಟ್ಟು) ಕುಳಿತು ಕೊಳ್ಳುವೆ ನಿಮ್ಮ ಹಾಗೆ ತವರ್‍ರುಕಿನ (ಕೊನೆಯ ಅತ್ತಹಿಯಾತ್‌ನಲ್ಲಿ ಕುಳಿತುಕೊಳ್ಳುವಂತೆ) ಕೂರಲು ನನಗೆ ಸ್ವಲ್ಪ ಕಷ್ಟವಾಗುತ್ತೆ' ಎಂದು ನನ್ನೊಂದಿಗೆ ಕೇಳುವಾಗ ನಾನು ಅವಾಕ್ಕಾಗಿದ್ದೆ. ಹಾಗೆ ಅವರು ನನ್ನಲ್ಲಿ ಕೇಳುವ ಅಗತ್ಯತೆಯೇ ಇರಲಿಲ್ಲವಾದರೂ ಇದು ಅವರ ವಿನಯತ್ವಕ್ಕೊಂದು ಪುಟ್ಟ ಉದಾಹರಣೆಯಷ್ಟೆ.

ವಿದ್ವಾಂಸರ ನಡುವಿನ ಸಾಂಘಿಕ ಭಿನ್ನತೆ ಪರಾಕಾಷ್ಠೆಗೆ ತಲುಪಿದ ಸಂದರ್ಭದಲ್ಲಿ ಉಭಯ ಕಡೆಯ ವಿದ್ವಾಂಸರೊಂದಿಗೆ ಅತ್ಯಂತ ಆತ್ಮೀಯತೆಯಿಂದ ಸಂಬಂಧ ಬೆಳೆಸಿ ಆದರ್ಶ ಮೆರೆದ ಮುಹಮ್ಮದ್ ಸ್ವಾಲಿಹ್ ಉಸ್ತಾದರನ್ನು ನೆನೆಯುತ್ತಾ ಅವರ ಆದರ್ಶಗಳಲ್ಲಿ ಮುಂದುವರಿಯುವುದು ನಾವು ಅವರಿಗೆ ನೀಡುವ ಗೌರವ.

ಪಣಂಬೂರಿನಿಂದ ಕಾಟಿಪಳ್ಳದವರೆಗಿನ ತನ್ನ ವಿದ್ವಾಂಸ ಜೀವನದ ಬಹುಭಾಗವನ್ನು ಅಲ್ಲಾಹನ ಭವನದಲ್ಲಿ ಮತ್ತು ಅವನ ಇಷ್ಟದಾಸನ ನಡೆಯಲ್ಲಿ ಕಳೆದ ಉಸ್ತಾದರಿಗೆ ತನ್ನ ಇಹ ಜೀವನದ ಕೊನೆಯ ಅವಕಾಶವೂ ಓರ್ವ ಹುತಾತ್ಮನಂತೆ ಅಂಗ ಶುದ್ಧಿಯೊಂದಿಗೆ ಅಲ್ಲಾಹನ ಭವನದಲ್ಲಿ ನಡೆದಿರುವ ಆ ದುಃಖ ವಾರ್ತೆಯು ನಿಜಕ್ಕೂ ನನ್ನಲ್ಲಿ ಆತ್ಮಸ್ಥೈರ್ಯ ಹೆಚ್ಚಿಸಿತ್ತು. ಸತ್ಯ ವಿಶ್ವಾಸಿಗಳಿಗೆ ಅದೊಂದು ಶುಭ ಸೂಚನೆಯೂ ಕೂಡ ಹೌದು. ಸರ್ವಶಕ್ತನು ನಮ್ಮೆಲ್ಲರನ್ನೂ ಆ ಮಹಾನ್ ಸಾತ್ವಿಕರ ಜೊತೆ ಜನ್ನಾತುಲ್ ಫಿರ್ದೌಸಿನಲ್ಲಿ ಜೊತೆಯಾಗಿಸಲಿ ಎಂಬ ಪ್ರಾರ್ಥನೆಯೊಂದಿಗೆ.....

**ಪ್ರವಾದಿ ವಚನ**

ಪ್ರವಾದಿ (ಸ.ಅ) ಹೇಳಿದರು. ಯಾರಲ್ಲಿ ಈ ಮೂರು ಗುಣಗಳಿವೆಯೋ ಅಲ್ಲಾಹನು ಅವನ ಮರಣವನ್ನು ಸುಲಭಗೊಳಿಸುವನು ಮತ್ತು ಅವನನ್ನು ಸ್ವರ್ಗದಲ್ಲಿ ಪ್ರವೇಶಗೊಳಿಸುವನು. ದುರ್ಬಲರೊಂದಿಗೆ ಮೃದು ನೀತಿ, ಹೆತ್ತರವರೊಂದಿಗೆ ಪ್ರೀತಿ ಮತ್ತು ಸೇವಕರೊಂದಿಗೆ ಉತ್ತಮ ವರ್ತನೆ.



# ನಾ ಕಂಡಂತೆ ನನ್ನ ತಂದೆ

ಎಂ. ಇಸ್ಮಾಯಿಲ್ ಬಿನ್ ಮುಹಮ್ಮದ್ ಸ್ವಾಲಿಹ್ ಉಸ್ತಾದ್ ಕಾಟಿಪಳ್ಳ
ಪ್ರಧಾನ ಕಾರ್ಯದರ್ಶಿ, ಕಾಟಿಪಳ್ಳ ಮುಸ್ಲಿಂ ಯೂತ್ ಅಸೋಸಿಯೇಶನ್
(KMYA) ದಮಾಮ್, ಈಸ್ಟರ್ನ್ ಪ್ರೊವಿನ್ಸ್, ಸೌದಿ ಅರಬಿಯಾ

ಜೀವನ ನಶ್ವರ, ಪರಲೋಕ ಶಾಶ್ವತ ಎಂಬ ನುಡಿಯನ್ನು ಅನುಸರಿಸಿದರೆ ಇಹಲೋಕ ಮಾರ್ಪಡಬಹುದು. ಇಹಲೋಕದಲ್ಲಿ ಉತ್ತೀರ್ಣರಾದರೆ ಪರಲೋಕವೂ ವಿಜಯವನ್ನು ಸಾಧಿಸಬಹುದು. ಇಹಲೋಕವು ಪರಲೋಕದ ವ್ಯವಸಾಯ ಕ್ಷೇತ್ರ. 3 ದಿನಗಳ ಕ್ಷಣಿಕ ಜೀವನಕ್ಕೆ ಮನಸೋತರೆ ಇಹ-ಪರ ಗಳೆರಡರಲ್ಲೂ ನಷ್ಟ ಹೊಂದಬಹುದು.

ತಂದೆಯು ಜೀವನವೆಂಬ ನೌಕೆಯನ್ನು ಸಾಗಿಸುವ ಸಲುವಾಗಿ ಆಹೋರಾತ್ರಿ ಕಷ್ಟ ಪಡುತ್ತಾರೆ. ತಾಯಿಯಾದವರು ಪತಿಗೆ ಆಸರೆಯಾಗಿ ನಿಂತು ಮಕ್ಕಳನ್ನು ಸಾಕಿ ಸಲುಹಿ ದೊಡ್ಡವರನ್ನಾಗಿ ಮಾಡುತ್ತಾಳೆ. ಹಲಾಲ್ ಸಂಪಾದನೆಯಿಂದ ಜೀವನವನ್ನು ಸಾಗಿಸುತ್ತಾ ಮುಂದೆ ಸಾಗಿ ತಂದೆಯು ತೀರಿ ಹೋದ ಬಳಿಕ ತಾಯಿಯು ಮಕ್ಕಳ ರಕ್ಷಣೆಯನ್ನು ಕೈಗೆತ್ತಿ ಮಕ್ಕಳನ್ನು ಉನ್ನತ ಸ್ಥಾನಕ್ಕೆ ಏರಿಸುವಲ್ಲಿ ಪಣ ತೊಟ್ಟು ಸಂತುಷ್ಟಳಾಗುತ್ತಾರೆ.

ಮಕ್ಕಳು ದೊಡ್ಡವರಾದ ಮೇಲೆ ಅವರಿಗೆ ಧಾರ್ಮಿಕ ಜ್ಞಾನವಿದ್ದಲ್ಲಿ ತಂದೆ ಹಾಗೂ ತಾಯಿಯ ಸ್ಥಾನದಲ್ಲಿ ನಿಂತು ರಕ್ಷಕರ ಪರಲೋಕ ಯಶಸ್ವಿಗೂ ಕಾರಣಕರ್ತರಾಗುತ್ತಾರೆ.

ತಂದೆ ಧಾರ್ಮಿಕ ಜ್ಞಾನಿಯಾಗಿ ಮಕ್ಕಳನ್ನು ಧಾರ್ಮಿಕ ಹಾಗೂ ಲೌಕಿಕ ಶಿಕ್ಷಣದ ಮಹತ್ವವನ್ನರಿತು ಉನ್ನತ ಹಾಗೂ ಉತ್ತಮ ಪ್ರಜೆಯನ್ನಾಗಿಸಲು ತೊಡುವ ಪಣ ಅಷ್ಟಿಷ್ಟಲ್ಲ. ಸಮಾಜದಲ್ಲಿ ನನ್ನ ಮಕ್ಕಳು ಮಾದರಿಯಾಗಬೇಕು, ಉನ್ನತ ಶಿಕ್ಷಣ ಪಡೆದು ಇತರರಿಗೆ ಅದನ್ನು ತಿಳಿಸಿಕೊಡುವ ಉತ್ತಮ ಮನಸ್ಸು ಅವರಲ್ಲಿರಬೇಕು. ಇಹ ಪರ ಯಶಸ್ವಿಯನ್ನು ಮಾತ್ರ ಮನಗಂಡು ಅವರು ಮುಂದುವರಿಯಬೇಕು ಎಂಬ ಛಲ ಅವರಲ್ಲಿರುತ್ತದೆ.

ನನ್ನ ತಂದೆಯವರು ನನಗೆ ಬಾಲ್ಯದಲ್ಲಿ ನೀಡಿದ ಶಿಕ್ಷಣ ಇಂದಿಗೂ ಅಜರಾಮರವಾಗಿ ನನ್ನ ಮನಸ್ಸಿನಲ್ಲಿ ಅಚ್ಚುಕಟ್ಟಾಗಿ ಉಳಿದಿದೆ. ಶಾಲಾ ಹಾಗೂ ಮದ್ರಸ ಶಿಕ್ಷಣ ಸಂದರ್ಭ ಬೇರೆ ಊರಿನಲ್ಲಿ ಭಾಷಣ ಸ್ಪರ್ಧೆ, ಪ್ರಬಂಧ ಸ್ಪರ್ಧೆಗಳಲ್ಲಿ ಭಾಗವಹಿಸಲು ಉತ್ತೇಜನ ನೀಡುತ್ತಿದ್ದರು. ನಮಾಝ್, ಅಝಾನ್ ಕರೆ, ಖುತುಬಾದ ಮೊದಲ 'ಯಾ ಮಅಶರಲ್ ಮುಸ್ಲಿಮೀನ್',

ನಿಕಾಹ್‌ಗೆ ಮೊದಲ ಖುತುಬಾ, ವಿದ್ಯಾರ್ಥಿಗಳಿಗೆ ನೀಡುವ ಶಿಕ್ಷಣದ ಬಗ್ಗೆ ಹೀಗೆ ಹಲವಾರು ಕಾರ್ಯಕ್ರಮಗಳಲ್ಲಿ ಶ್ರದ್ಧೆವಹಿಸಿ ಕಾರ್ಯ ನಿರ್ವಹಿಸುವಂತೆ ಕಿವಿ ಮಾತು ಹೇಳುತ್ತಿದ್ದರು.

ಮಂಗಳೂರು ನ್ಯಾಯಾಲಯದಲ್ಲಿ 25 ವರ್ಷಗಳ ಮೊದಲು ಟೈಪಿಸ್ಟ್ ಹುದ್ದೆಗೆ ಆಹ್ವಾನ ಬಂದಾಗ ನಾನು ಅರ್ಜಿಯನ್ನು ನೀಡಿ ಹುದ್ದೆಗೆ ಅರ್ಹನಾಗಿದ್ದರೂ ಅದಕ್ಕೆ ಪ್ರಭಾವವಿರುವ ಸರ್ಕಾರಿ ಉದ್ಯೋಗಸ್ಥರ ಸಾಕ್ಷಿ ಬೇಕೆಂದಾಗ ಶಿಷ್ಯಂದಿರ, ಕ್ಲಾಸ್‌ಮೇಟ್‌ಗಳನ್ನು ಮೀಟ್ ಮಾಡಿದರೂ ಪ್ರಯೋಜನಕಾರಿಯಾಗಲಿಲ್ಲ. ಆ ಒಂದು ವಿಷಯದಿಂದ ಅವರು ಅತೃಪ್ತಿಯಾಗಿದ್ದರೂ ಅಲ್ಲಾಹನು ನೀಡಿಯಾನು ಎಂದು ತೃಪ್ತಿಯಾಗಿದ್ದರು.

1970 ರ ಆ ಕಾಲ ಘಟ್ಟದಲ್ಲಿ ನಮ್ಮನ್ನು ಸಾಕಿ ಸಲಹಿದ ಕಷ್ಟ ಅಷ್ಟಿಷ್ಟಲ್ಲ. ಮಾಸಿಕವಾಗಿ ಸಿಗುವ 3 ಅಂಕೆಯ ಅಂದಿನ ಸಂಬಳದಿಂದ ಸಂಸಾರ ಸಾಗಿಸುವುದು ಸುಲಭ ಅಸಾಧ್ಯವಾದ ಮಾತು. ಹೊಟ್ಟೆಗೆ ಸರಿಯಾಗಿ ತಿನ್ನಲು ಕೂಡಾ ಸಿಗದಿದ್ದ ಆ ಸಮಯದಲ್ಲಿ ಸ್ವಂತ ಸೂರು ಕಟ್ಟಲೂ ಬಹಳ ಕಷ್ಟಪಟ್ಟಿದ್ದರು. ಯಾರೊಂದಿಗಾದರೂ ಸಾಲ ಕೇಳಿದರೆ ತಂದೆಯವರಿಗೆ ಯಾರೂ ಸಾಲಕೊಡಲು ಮುಂದೆ ಬಂದಿರಲಿಲ್ಲ. ಅಂದರೆ ಎಲ್ಲರೂ ದಾನವಾಗಿ ಕೊಟ್ಟು ಸಹಕರಿಸಿದ್ದರು.

ನನ್ನ ಹುದ್ದೆ ಕೇವಲ ಮಸೀದಿ ಮದ್ರಸಕ್ಕೆ ಮಾತ್ರ ಎಂಬುವುದಕ್ಕೆ ಸೀಮಿತಗೊಳಿಸದೇ ಊರ ಪರವೂರ ಜಮಾಅತ್ ನ ಅಭಿವೃದ್ಧಿಗಾಗಿ ಹೆಚ್ಚಿನ ಮುತುವರ್ಜಿ ವಹಿಸಿದ್ದರು.

ನಮಾಜಿಗೆ ಇಮಾಮತ್ ನಿಲ್ಲುವ ಸಂದರ್ಭದಲ್ಲೂ ತನಗೆ ಸ್ವರದ ಕೊರತೆ ಇದ್ದರೂ ಬೇರೆಯವರನ್ನು ನಿಲ್ಲಿಸದೇ ತನ್ನ ಕಾರ್ಯವನ್ನು ಪೂರ್ತೀಕರಿಸುತ್ತಿದ್ದರು. ಈ ವಿಷಯದಲ್ಲಿ ಅವರ ಉಸ್ತಾದರ ಹೇಳಿಕೆಯನ್ನೇ ಅವಲಂಭಿಸುತ್ತಿದ್ದರು.

ಖತೀಬರ ಕೆಲಸ ಕಾರ್ಯ ನಿರ್ವಹಿಸುವ ಸಂದರ್ಭ ತನಗೆ ಅಸಿಸ್ಟೆಂಟ್ ಆಗಿ ಒಬ್ಬರನ್ನೂ ಅವರು ಆಯ್ಕೆ ಮಾಡಿರಲಿಲ್ಲ ಮಾತ್ರವಲ್ಲದೇ ಜಮಾಅತ್ ನೀಡುವ ಸಂಬಳವು ಅಲ್ಲಾಹನ ಮುಂದೆ ಉತ್ತರ ಹೇಳಲಿಕ್ಕಿರುವುದಕ್ಕಾಗಿದೆ ಎಂಬ ವಿಷಯವನ್ನು ನಮಗೆ ಮನವರಿಕೆ ಮಾಡುತ್ತಿದ್ದರು. ಪಣಂಬೂರಿನಿಂದ ಕಾಟಿಪಳ್ಳಕ್ಕೆ ಬಂದ ಸಂದರ್ಭ ಅವರಿಗಿದ್ದ ಕೆಲಸ ಕಾರ್ಯಗಳ ಪಟ್ಟಿ ನೋಡಿದರೆ ಅಲ್ಪ ವಿಶ್ರಾಂತಿಯೂ ಅವರಿಗೆ ಇರುತ್ತಿರಲಿಲ್ಲ. ಮದುವೆಗಾಗಿ ಬೇಕಾದ ಸಾಮಗ್ರಿಗಳನ್ನು ಬಾಡಿಗೆಗೆ ಕೊಡುವ ಕಾರ್ಯ ಮಸೀದಿಯಲ್ಲಿತ್ತು. ಮರಣ ಹೊಂದಿದರೆ ಪಿಕ್ಕಾಸುಗಳಂತಹ ಸಾಮಾನುಗಳನ್ನು ಕೊಡುವುದು, ಜನನ, ಮರಣ ರಿಜಿಸ್ಟಿ ರೆಡಿ ಮಾಡುವುದು, ನಿಖಾಹ್ ಹಾಗೂ ಇನ್ನಿತರ ಶುಭ ಕಾರ್ಯಗಳಲ್ಲಿ ಮನೆಗಳಿಗೆ ಹಾಗೂ ಶಾದಿ ಮಹಲ್‌ಗೆ ಭೇಟಿ ಇನ್ನಿತರ ಹಲವಾರು ಕೆಲಸ ಕಾರ್ಯಗಳಲ್ಲಿ ಮುತುವರ್ಜಿ ವಹಿಸಿ ತನ್ನ ಕೆಲಸ ಅಲ್ಲಾಹನಿಗಾಗಿ ಪರಲೋಕ ಯಶಸ್ವಿಗಾಗಿ ಮಾಡುವ ಕಾರ್ಯ ಎಂಬ ಒಂದೇ ಮನಸ್ಸಿನಿಂದ ದುಡಿದವರು.

ರಾತ್ರಿ ಸಮಯ ಪುರುಷರಿಗೆ ಹಾಗೂ ಬೆಳಿಗ್ಗೆ 10 ಗಂಟೆಗೆ ಸ್ತ್ರೀಯರಿಗೆ ದೀನೀ ಕ್ಲಾಸ್ ನಡೆಸುತ್ತಿದ್ದು ವಯಸ್ಕರ ಶಿಕ್ಷಣವನ್ನೂ ನಡೆಸುತ್ತಿದ್ದರು.

ಧಾರ್ಮಿಕ ಶಿಕ್ಷಣದಿಂದ ಕೇವಲ ಪರಲೋಕಕ್ಕೆ ಮಾತ್ರ ಪ್ರಯೋಜನವೆಂದರಿತ ಅವರು ಇಹಲೋಕದ ಸೌಕರ್ಯಕ್ಕಾಗಿ ಲೌಕಿಕ ಶಿಕ್ಷಣವೂ ಅತ್ಯಗತ್ಯ ಎಂಬುವುದನ್ನು ಮನಗಂಡು ಇಂಗ್ಲೀಷ್ ವಿದ್ಯಾಭ್ಯಾಸದ ಮಹತ್ವವನ್ನು ಅರಿತು ಅದಕ್ಕೆ ಪ್ರೋತ್ಸಾಹ ನೀಡಿದ್ದರು. 1989ರಲ್ಲಿ ಕಾಟಿಪಳ್ಳದಲ್ಲಿ ವಿದ್ಯಾ ಸಮುಚ್ಚಯಕ್ಕೆ ಚಾಲನೆ ನೀಡಲಾಯಿತು.

1989ರಲ್ಲಿ ಅದಿನ ಸಮಾರಂಭಕ್ಕೆ ಆಗಮಿಸಿದ ಸುತ್ತಮುತ್ತಲ ಜಮಾಅತ್ ಅಧ್ಯಕ್ಷರೂ, ರಾಜಕೀಯ ಧುರೀಣರೂ ಈ ವಿದ್ಯಾಲಯ ಎಲ್ಲಾ ಸಮುದಾಯಕ್ಕೆ ಹಾಗೂ ಪರ ಊರ ಜಮಾಅತ್‌ಗೂ ಮಾದರಿ ಯಾಗಲಿ ಎಂದು ಹಾರೈಸಿದ್ದರು. ಇಂದು ಪ್ರತಿಯೊಂದು ಜಮಾಅತ್‌ನಲ್ಲೂ ಇಂಗ್ಲೀಷ್ ಮಾಧ್ಯಮ ಶಾಲಾ ಕಾಲೇಜ್‌ಗಳೂ ನಡೆಯುತ್ತಿವೆ. ಇದೆಲ್ಲವೂ ಅವರ ದೂರ ದೃಷ್ಟಿಯ ವಿಶೇಷ.

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಜಮಾಅತ್‌ನ ಪ್ರಥಮ ಕನ್ನಡ ಹಾಗೂ ಇಂಗ್ಲೀಷ್ ಮಾಧ್ಯಮ ಶಾಲೆ ಎಂಬುದಕ್ಕೆ ನೂರುಲ್ ಹುದಾ ಶಾಲೆ ಮಾದರಿಯಾಗಿದ್ದು ಸುರತ್ಕಲ್ ಮುಕ್ಕ ಸೂರಿಂಜೆ, ಮಂಗಳಪೇಟೆ ಹಾಗೂ ಕಾಟಿಪಳ್ಳ ಪ್ರದೇಶದಲ್ಲಿರುವ 10 ಬ್ಲಾಕ್‌ನ ನಿವಾಸಿಗಳು ಇದರ ಶಿಕ್ಷಣದ ಸಂಪೂರ್ಣ ಪ್ರಯೋಜನ ಪಡೆದಿದ್ದು ಇಂದು ಈ ಶಿಕ್ಷಣ ಕೇಂದ್ರದಲ್ಲಿ ವಿದ್ಯೆ ಪಡೆದ ವಿದ್ಯಾರ್ಥಿಗಳು ಗಲ್ಫ್ ರಾಷ್ಟ್ರಗಳಲ್ಲಿ ಅಂದರೆ ಸೌದಿ ಅರೇಬಿಯಾ, ಯುಎಇ, ಕುವೈಟ್, ಬಹರೈನ್, ಒಮಾನ್, ಖತಾರ್ ಮಾತ್ರವಲ್ಲದೇ ಲಂಡನ್, ಮಲೇಷ್ಯಾ ಹಾಗೂ ಭಾರತದ ಬೆಂಗಳೂರು, ಮುಂಬೈಗಳಲ್ಲಿ ಉನ್ನತ ಹುದ್ದೆಯಲ್ಲಿದ್ದಾರೆ ಎಂಬುವುದು ಸಂತೋಷದಾಯಕ ವಿಷಯ. ಅಲ್ಲಾಹು ಸ್ವೀಕರಿಸಲಿ ಆಮೀನ್.

ಅವರು ರಮಳಾನ್‌ನಲ್ಲಿ ಹೇಳಿಕೊಡುತ್ತಿರುವ ತೌಬಾವನ್ನು ಅದೇ ರೀತಿ ಅವರದೇ ಸ್ವರದಲ್ಲಿ ಅವರ ಶಿಷ್ಯರಲ್ಲೊಬ್ಬರಾದ ಮರ್ಹೂಮ್ ಪಿ. ಅಬ್ದುಲ್ ಅಝೀಝ್ ಇಬ್ನ್ ಹುಸೈನಾಕ ರವರು ಹೇಳಿ ಕೇಳಿಸುತ್ತಿದ್ದರು. ಆ ಸಮಯದಲ್ಲಿ ಸಿಗುತ್ತಿದ್ದ ಟೇಪ್ ರೆಕಾರ್ಡರ್ ಮತ್ತು ಕ್ಯಾಸೆಟ್‌ನಲ್ಲಿ ರೆಕಾರ್ಡ್ ಮಾಡಿ ನಾವೂ ಕೂಡಾ ಆಲಿಸುತ್ತಿದ್ದೆವು. ರಮಳಾನ್ ಪ್ರತೀ ದಿನ ತರಾವೀಹ್ ಬಳಿಕ ದೀನೀ ಪ್ರವಚನ ರಾತ್ರಿ 10 ಗಂಟೆ ತನಕ ಮುಂದುವರಿಯುತ್ತಿತ್ತು.

## ತಂದೆಯವರ ಸಲಹೆಗಳು:

- ರಾತ್ರಿ 10 ಗಂಟೆಗೆ ಮಲಗಬೇಕು ಹಾಗೂ ಸುಬ್‌ಹಿ ಅಝಾನ್‌ಗಿಂತ ಮೊದಲು ಏಳಬೇಕು. ಹಾಗೂ ಮನೆಯವರು ಅದನ್ನು ಪಾಲಿಸಬೇಕು.
- ಮಾರ್ಕೆಟ್‌ಗೆ ಅತ್ಯವಶ್ಯ ಕಾರ್ಯಗಳಿಗೆ ಮಾತ್ರ ಹೋಗಬೇಕು ಹಾಗೂ ಉಳಿದ ಸಮಯ ಶಿಕ್ಷಣಕ್ಕಾಗಿ ಮೀಸಲಿಡಬೇಕು.
- 5 ವಕ್ತ್ ನಮಾಜ್ ಮಸೀದಿಯಲ್ಲಿರಬೇಕು. ತಂದೆಯವರು ಅಝಾನ್‌ಗಿಂತ ಅರ್ಧ ತಾಸು ಮೊದಲೇ ಮಸೀದಿಯಲ್ಲಿರುತ್ತಿದ್ದರು.
- ಅಹ್ಲುಸ್ಸುನ್ನತ್ ವಲ್ ಜಮಾಅತ್‌ನ ವಿಷಯಗಳಿಗೆ ಮಾತ್ರ ಗಮನ ಕೊಡಬೇಕು. ಸರ್ವರೊಂದಿಗೆ ಒಳ್ಳೆಯ ಗುಣ ನಡತೆಯಿಂದ ಸಹಕರಿಸಬೇಕು.

40 ವರ್ಷಗಳ ಮುಂಚೆ ತಂದೆ ಹಾಗೂ ಮಂಗಳೂರು ಪೊಲೀಸ್ ಲೈನ್ ಜುಮಾ ಮಸೀದಿ ಖತೀಬ್ ಮರ್ಹೂಂ ಮುಹ್ಯಿದ್ದಿನಬ್ಬ ಅಹ್ಮದ್ ಮುಸ್ಲಿಯಾರ್ ಸ್ಟೇಟ್ ಬ್ಯಾಂಕ್ ಬಸ್ ನಿಲ್ದಾಣದಲ್ಲಿ ನಿಂತಿರುವ ಸಂದರ್ಭ ಅವರ ಶಿಷ್ಯರಲ್ಲೊಬ್ಬರಾದ ಮರ್ಹೂಂ ಇಬ್ರಾಹೀಮ್ ಸಯೀದ್ ರವರು ಬಂದು ನಾವು ಇಸ್ಲಾಮಿಕ್ ವಾರ ಪತ್ರಿಕೆ ಪ್ರಾರಂಭಿಸುತ್ತೇವೆ ಅದಕ್ಕೆ ಸನ್ಮಾರ್ಗ ಎಂದು ಹೆಸರಿಡುತ್ತೇವೆ ಎಂದಾಗ ಜನರನ್ನು ಸನ್ಮಾರ್ಗಕ್ಕಾಗಿ ಕೊಂಡೊಯ್ಯಲು ಶ್ರಮಿಸಿರಿ ಎಂದು ಬಹಳ ಗಾಂಭೀರ್ಯತೆಯಿಂದ ನುಡಿದಿದ್ದರು.




## ವಿಶೇಷತೆಗಳು:

- ಖತೀಬರಾಗಿ ಕೆಲಸ ನಿರ್ವಹಿಸುತ್ತಿದ್ದ ಸಮಯದಲ್ಲಿ ಮಸೀದಿಯ ಕಾಮಗಾರಿ ಕೆಲಸಕ್ಕೆ ಪ್ರತಿಯೊಂದು ಮನೆಗೆ ಭೇಟಿ ನೀಡಿ ಸಹಾಯ ಹಸ್ತ ಸಂಗ್ರಹಿಸುವ ಕಾರ್ಯದಲ್ಲಿ ಜಮಾಅತ್‌ನವರೊಂದಿಗೆ ಸಹಕರಿಸಿದ್ದರು.
- ಶಾಲೆಗಳಿಗೆ ಪ್ರತೀ ತಿಂಗಳಿಗೊಮ್ಮೆ ಭೇಟಿ ನೀಡಿ ತನ್ನ ಮಕ್ಕಳ ಮಾತ್ರವಲ್ಲದೇ ಎಲ್ಲಾ ಮಕ್ಕಳ ಬಗ್ಗೆ ಪ್ರಾಂಶುಪಾಲರಲ್ಲಿ ಚರ್ಚಿಸುತ್ತಿದ್ದರು. (ಸರಕಾರೀ ಜೂನಿಯರ್ ಕಾಲೇಜ್‌ನಲ್ಲಿ ಆ ಸಂದರ್ಭದಲ್ಲಿ ಗದಗ ಊರಿನ ಬಿ. ಸಯ್ಯದ್ ಗಫೂರ್ ಪ್ರಾಂಶುಪಾಲರಾಗಿದ್ದರು.)
- ಅನ್ಯ ಮತಸ್ಥರು ಯಾರಾದರೂ ಕಾಯಿಲೆಯಿಂದ ಬಳಲುತ್ತಿದ್ದರೆ ತಂದೆಯವರೊಂದಿಗೆ ಬಂದು ಶೀಘ್ರ ಶಮನವಾಗಲು ಪ್ರಾರ್ಥಿಸಲು ಹೇಳುತ್ತಿದ್ದರು.
- ಬಹು ಭಾಷಾ ಪಂಡಿತರಾದ ಅವರು ಹನಫಿ ಬಾಂಧವರಿಗೆ ಉರ್ದು ಭಾಷೆಯಲ್ಲಿಯೇ ನಿಕಾಹ್ ಹೇಳಿ ಕೊಡುತ್ತಿದ್ದರು.
- ಮಲಯಾಳಂ, ಕನ್ನಡ, ಉರ್ದು, ಅರೇಬಿಕ್, ತುಳು, ಬ್ಯಾರಿ ಹೀಗೆ ಹಲವಾರು ಭಾಷೆಗಳಲ್ಲಿ ಓದು, ಬರಹ, ಮಾತುಗಳಲ್ಲಿ ಅತ್ಯುತ್ತಮ ಹಾಗೂ ಅತ್ಯುನ್ನತವಾಗಿ ವ್ಯವಹರಿಸುವ ವಿಶೇಷತೆ ಅವರಿಗಿತ್ತು.
- ರಮಳಾನ್ ಸಮಯದಲ್ಲಿ ತರಾವೀಹ್ ಸಮಯ ಮಸೀದಿಯಲ್ಲಿ ಜನರು ಕಡಿಮೆ ಇರುವ ಸಂದರ್ಭ ಅಂಗಡಿ, ಮಾರ್ಕೆಟ್ ಹಾಗೂ ಸರ್ಕಲ್‌ಗೆ ಹೋಗಿ ಯಾರಾದರೂ ಟೈಮ್ ಪಾಸ್ ಮಾಡುತ್ತಿದ್ದಾರಾ ಎಂದು ತರಾವೀಹ್‌ನ ಮಧ್ಯದಲ್ಲೇ ನೋಡಿಕೊಂಡು ಬರುತ್ತಿದ್ದರು.
- ಮಜ್ಲಿಸ್ ಅಥವಾ ಇನ್ನಾವುದೇ ಕಾರ್ಯಕ್ರಮಗಳಿದ್ದಲ್ಲಿ ಕುಳಿತುಕೊಳ್ಳುವಾಗ ಯಾರ ಎದುರಿನಲ್ಲಿಯೂ ಅಹಂಭಾವದಿಂದ ಕುಳಿತುಕೊಂಡವರಲ್ಲ. ಅನಾರೋಗ್ಯದಿಂದಿದ್ದರೆ ಹತ್ತಿರ ಇರುವವರಲ್ಲಿ ಕೇಳಿ ಅವರ ಅನುಮತಿ ಪಡೆದೇ ಕುಳಿತುಕೊಳ್ಳುತ್ತಿದ್ದರು. (ಇದನ್ನು ಕಾಟಿಪಳ್ಳದಲ್ಲಿ ಮುದರ್ರಿಸರಾಗಿದ್ದ ಅಬೂ ಸುಫ್ಯಾನ್ ಉಸ್ತಾದ್ ನೆನಪಿಸುತ್ತಿದ್ದರು)ಮಜ್ಲಿಸ್‌ನ ಗೌರವವನ್ನು ಕಾಪಾಡುತ್ತಿದ್ದರು.
- ಕಾಟಿಪಳ್ಳ ಪರಿಸರ, ಮುಕ್ಕ, ಮಂಗಳೂರು ಪ್ರದೇಶಗಳಲ್ಲಿ ಬ್ಯಾರಿ ಭಾಷೆಯಲ್ಲಿ ಉತ್ತಮ ವಾಗ್ಮಿಯಾಗಿ ಭಾಷಣ ಮಾಡುತ್ತಿದ್ದರು.
- ಉನ್ನತ ವ್ಯಾಸಂಗ ಮಾಡಿಬಂದ ಬಿರುದು ದಾರಿ ಉಸ್ತಾದರೊಂದಿಗೆ ತಜ್ವೀದ್ ವಿಷಯವಾಗಿ ಹಾಗೂ ಉಚ್ಚಾರಣೆ ವಿಷಯದಲ್ಲಿ ಬಹಳ ಜಾಗರೂಕತೆ ವಹಿಸಬೇಕೇಂದು ಮನವರಿಕೆ ಮಾಡುತ್ತಿದ್ದರು.
- ದಾನ ಧರ್ಮಕ್ಕೆ ಹೆಚ್ಚು ಪ್ರಾಧಾನ್ಯತೆ ನೀಡುತ್ತಿದ್ದರು. ಹಾಗೂ ಫಿತ್ರ್ ಝಕಾತ್‌ನ ಅಕ್ಕಿಯನ್ನು ರಮಳಾನ್‌ನಲ್ಲೇ ತೆಗೆದಿಡುತ್ತಿದ್ದರು.

ಅವರ ಖುರ್‌ಆನ್‌ನ ಸ್ವರ ಮರಣದ ತನಕವೂ ಒಂದೇ ರೀತಿಯಾಗಿತ್ತು. 1990 ರ ಕಾಲಘಟ್ಟದಲ್ಲಿ ಚುನಾವಣಾ ಸಂದರ್ಭ ರಾಜ್ಯ ಹಾಗೂ ರಾಷ್ಟ್ರೀಯ ಅಧಿಕಾರಿಗಳು ಮಗ್ರಿಬ್ ನಮಾಜಿಗೆ ಕಾಟಿಪಳ್ಳ ಮಸೀದಿಗೆ ಬಂದ ಸಂದರ್ಭ ಜಮಾಅತ್ ಪ್ರತಿನಿಧಿಗಳು ತಂದೆ ಯವರನ್ನು ಅವರಿಗೆ ಪರಿಚಯಿಸುವ ಅಧಿಕಾರಿಗಳಲ್ಲಿ ಒಬ್ಬರಾದ ಲೋಕ ಸಭಾ ಸ್ಪೀಕರ್ ಆಗಿದ್ದ ಮರ್ಹೂಂ ಪಿ.ಎಂ. ಸಯೀದ್ ರವರು

ತಾವುಗಳು ಯಾರೂ ಉಸ್ತಾದರನ್ನು ಪರಿಚಯಿಸಬೇಕಾದ ಅಗತ್ಯವಿಲ್ಲ ಅವರು ನನ್ನ ಉಸ್ತಾದರು. ಅವರೊಂದಿಗೆ ನಾನು ಬಾಲ್ಯ ಕಾಲದಲ್ಲಿ ಓದಿದ ಅದೇ ಖುರ್‌ಆನ್‌ನ ಸ್ವರ ನನ್ನಲ್ಲಿ ಮರುಕಳಿಸಿ ಇದು ನನ್ನ ಉಸ್ತಾದ್ ಎಂದು ನಾನು ಅರಿತೆ ಎಂದಾಗ ಸುತ್ತಲಿದ್ದ ಜಮಾಅತ್ ಸದಸ್ಯರು ಒಂದು ಕ್ಷಣ ಸ್ತಬ್ದರಾಗಿದ್ದರು.

ಮಂಗಳೂರಿನ ಹೆಸರಾಂತ ಝೀನತ್ ಭಕ್ಷ್ ಜುಮ್ಮಾ ಮಸೀದಿಯ ಖತೀಬ್ ಮರ್ಹೂಮ್ ಸಿ. ಕುಂಞ ಅಹ್ಮದ್ ಉಸ್ತಾದ್‌ರವರ ಅತ್ಯುತ್ತಮ ಶಿಷ್ಯವೃಂದದವರಲ್ಲೊಬ್ಬರಾದ ತಂದೆಯವರು ಮಂಗಳೂರಿನಿಂದ ಪಣಂಬೂರು ಹಾಗೂ ಕಾಟಿಪಳ್ಳ ಪ್ರದೇಶಗಳಲ್ಲಿ ನಾಲ್ಕು ದಶಕಗಳ ಕಾಲ ದೀನೀ ಸೇವೆ ಮಾತ್ರವಲ್ಲದೆ ಸಾಮಾಜಿಕ, ಶೈಕ್ಷಣಿಕ ಕ್ಷೇತ್ರಗಳಲ್ಲೂ ಕಾರ್ಯ ನಿರ್ವಹಿಸಿ ಮುಂದಿನ ಯುವ ಪೀಳಿಗೆಗೆ ಮಾದರಿಯಾಗಿದ್ದರು.

ತನ್ನ ಶಿಷ್ಯಂದಿರಲ್ಲಿ ಮದುವೆ ಅಥವಾ ಇನ್ನಾವುದೇ ಕಾರ್ಯ ಕ್ರಮಗಳಿದ್ದರೂ ಮಂಗಳೂರಿನಿಂದ ಆಮಂತ್ರಣ ಪತ್ರವು ತಪ್ಪದೇ ಬರುತ್ತಿತ್ತು. ಅದಕ್ಕೆ ಎಲ್ಲದಕ್ಕೂ ಭಾಗಿಯಾಗಿ ಶುಭ ಹಾರೈಸುತ್ತಿದ್ದರು. ಹಜ್ ಕರ್ಮ ನಿರ್ವಹಿಸಲು ನಮ್ಮೊಂದಿಗೆ ಬನ್ನಿ ಎಂದು ಭಿನ್ನವಿಸುತ್ತಿದ್ದರೂ ತನ್ನದೇ ಸಮಯ ಹಾಗೂ ಆರ್ಥಿಕ ವ್ಯವಸ್ಥೆಯನ್ನು ನೋಡಿ ಹಜ್‌ಗೆ ಹೊರಟವರು. ಆ ಸಂದರ್ಭದಲ್ಲಿ ಅರಗ ಮುಸ್ತಫಾ, ಜಮಾಅತ್‌ನ ಮಾಜಿ ಅಧ್ಯಕ್ಷರಾದ ಪಿ.ಎಂ. ಸಲೀಂ ರಫಿ, ಜಿ. ಹಂಝು ಮತ್ತಿತರ ಆತ್ಮೀಯ ಶಿಷ್ಯಂದಿರು ಅವರಿಗೆ ಹಜ್‌ಗೆ ತೆರಳಲು ಎಲ್ಲಾ ರೀತಿಯ ಪ್ರೋತ್ಸಾಹವನ್ನು ನೀಡಿದ್ದರು. ಅವರು ಧಾರೆ ಎರೆದ ಶಿಕ್ಷಣ 25 ವರ್ಷ ಕಳೆದರೂ ಶಿಷ್ಯಂದಿರ ಮನದಲ್ಲಿ ಅಜರಾಮರವಾಗಿ ಉಳಿದಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ. 1996ರಲ್ಲಿ ಅವರು ಹಜ್ಜ್‌ಗೆ ಹೋಗಿದ್ದಾಗ ಅಲ್ಲಿ ಕೃಷ್ಣಾಪುರ ಮಸೀದಿಯ ಈಗಿನ ಅಧ್ಯಕ್ಷ ಮುಮ್ತಾಝ್ ಅಲಿ ಹಾಗೂ ಝುಬೈರ್ ಬಿನ್ ಚೆರಿಯೊನಾಕನವರು ಎಲ್ಲಾ ರೀತಿಯ ಸೇವೆ ಮಾಡಿದ್ದರು.

ಮರಣಕ್ಕೆ 2 ವರ್ಷಗಳ ಮೊದಲು ಅಂದರೆ ಪವಿತ್ರ ಹಜ್ ನಿರ್ವಹಿಸಿ ಊರಿಗೆ ಮರಳಿದ ಬಳಿಕ ಇಹ ಲೋಕಕ್ಕೆ ಸಂಬಂಧಪಟ್ಟ ಕಾರ್ಯ ಚಟುವಟಿಕೆಗಳಲ್ಲಿ ಭಾಗಿಯಾಗದೇ ಹೆಚ್ಚಿನ ಮಾತನ್ನಾಡದೇ ಒಬ್ಬಂಟಿಯಾಗಿರುತ್ತಿದ್ದರು. ತನ್ನ ಮರಣದ ಸಮಯ ಹತ್ತಿರವಾಗಿದೆ ಎಂದು ಬಹುಷ ಅವರು ತಿಳಿದಿದ್ದಿರಬಹುದು.

ಸಣ್ಣ ಮಕ್ಕಳ ಪ್ರಾಯದಿಂದ ಹಿಡಿದು ವೃದ್ಧರ ತನಕ ಹಿರಿಯರೊಂದಿಗೆ ಹೇಗೆ ಗೌರವ ಕೊಡಬೇಕು ಕಿರಿಯವರೊಂದಿಗೆ ಹೇಗೆ ಅನುಕಂಪ ತೋರಿಸಬೇಕೆಂಬ ಪಾಠವನ್ನು ಅವರೊಂದಿಗೆ ಕಲಿಯಬೇಕು. ಒಟ್ಟಿನಲ್ಲಿ ಮರಣದ ತನಕ ವಿದ್ಯಾರ್ಥಿಯಾಗಿ, ಅಧ್ಯಾಪಕರಾಗಿ, ಖತೀಬರಾಗಿ, ಉತ್ತಮ ಬಹು ಭಾಷಾ ವಾಗ್ಮಿಯಾಗಿ, ತೀರ್ಪುಗಾರಾಗಿ, ಸಮಾಜ ಸೇವಕರಾಗಿ, ಹಿರಿಯ- ಕಿರಿಯ, ಜಾತಿ ಮತ ಭೇದವಿಲ್ಲದೇ ಸರ್ವರ ಮನಸ್ಸಿನಲ್ಲಿ ಇಂದಿಗೂ ಉಳಿದಿದ್ದಾರೆ.

## ಕೆಲವೊಂದು ಮಾಹಿತಿಗಳು

- ಅವರು ಖತೀಬರಾಗಿ ಕಾರ್ಯ ನಿರ್ವಹಿಸುತ್ತಿದ್ದ ಸಂದರ್ಭ ಮಸೀದಿ ಆಡಳಿತ ಸಮಿತಿಯಲ್ಲಿದ್ದ ಪ್ರಮುಖರು: ದಿ. ಹಾಜಿ ಪಿ. ಹಸನಬ್ಬ ಮಾಸ್ಟರ್, ದಿ. ಹಾಜಿ ಯಂ. ಎ. ಜಬ್ಬಾರ್, ದಿ. ಹಾಜಿ ಪಿ.ಇ. ಅಬ್ದುಲ್ ಖಾದರ್ (ಅರಗ), ದಿ. ಹಾಜಿ. ಪಿ.ಎ. ಬಾವುಂಞ, ದಿ. ಹಾಜಿ. ಪಿ.ಕೆ. ಅಬ್ದುಲ್ ರಹ್ಮಾನ್, ದಿ. ಪಿ.ಕೆ. ಇದ್ದಿನಬ್ಬ (ಇದ್ಯಾಕ), ದಿ. ಪಿ.ಕೆ. ಅಬ್ದುಲ್ ಖಾದರ್, ದಿ. ಪಿ.ಕೆ. ಅಬ್ಬು ಡೈಮಂಡ್, ದಿ. ಖಾದರ್ ಸಾಹೇಬ್ (ಖಾದುವಾಕ), ದಿ. ಕಾಟುಬಾವಾ ಹಾಜಿ,





ದಿ. ಹಸನಾಜಿ ಕಾನ, ದಿ. ಎಸ್. ಅರಬಿ, ದಿ. ಪಿ. ಅಬ್ದುಲ್ಲಾ, ದಿ. ಪಿ.ಕೆ. ಹುಸೈನಬ್ಬ.

- ಮಸೀದಿಯಲ್ಲಿ:
  - ಪಣಂಬೂರು ಖಾಜಿ ಮರ್ಹೂಮ್ ಝೈನುದ್ದೀನ್ ಇದ್ದಿನಬ್ಬ ಮುಸ್ಲಿಯಾರ್ (ನನ್ನ ತಾಯಿಯ ಅಜ್ಜ)
  - ಮರ್ಹೂಂ ಪಿ.ಎಂ. ಅಬ್ದುಲ್ ಖಾದರ್ ಮಾಸ್ಟರ್ (ಇವರು ಶಾಲೆಯಲ್ಲಿ ಶಿಕ್ಷಕರೂ ಆಗಿದ್ದರು, ನನ್ನ ತಾಯಿಯ ತಂದೆ)
  - ಮರ್ಹೂಂ ಅಬ್ದುಲ್ಲಾ ಕುಟ್ಟಿ ಮುಸ್ಲಿಯಾರ್
  - ಅಲ್ ಹಾಜ್ ಪಿ.ಎಂ. ಅಬ್ದುಲ್ ಖಾದರ್ ಉಸ್ತಾದ್
  - ಅಲ್ ಹಾಜ್ ಅಬೂ ಸುಫ್ಯಾನ್ ಎಚ್.ಐ. ಇಬ್ರಾಹೀಮ್ ಮದನಿ ಉಸ್ತಾದ್.
- ತಂದೆ : ಹಾಜಿ ಫಖ್ರುದ್ದೀನ್ ಇಬ್ನ್ ಇದ್ದಿನಬ್ಬ
- ತಾಯಿ : ಫಾತಿಮಾ
- ಜನನ : 14-ಜುಲೈ 1934 (1, ರಬೀಉಲ್ ಆಖರ್ 1353)
- ಸ್ಥಳ : ಚಕ್ಕರೆ ಮರ್ತಡಿ, ಬೂಬುಖಾನ್ ಮಸೀದಿ ಹಾಗೂ ಝೀನತ್ ಭಕ್ಷ್ ಯತೀಮ್ ಖಾನ ಹತ್ತಿರ, ಬಂದರ್ ಮಂಗಳೂರು.
- ಧಾರ್ಮಿಕ ಶಿಕ್ಷಣ : ಝೀನತ್ ಭಕ್ಷ್ ಕೇಂದ್ರ ಜುಮಾ ಮಸ್ಜಿದ್, ಬಂದರ್ ಮಂಗಳೂರು.
- ಉಸ್ತಾದರು: ಮರ್ಹೂಮ್ ಕುಟ್ಟಿಪ್ಪುರಂ ಅಬ್ದುಲ್ಲಾಹ್ ಮುಸ್ಲಿಯಾರ್, ಮರ್ಹೂಮ್ ಸಿ. ಕುಂಞಿ ಅಹ್ಮದ್ ಉಸ್ತಾದ್
- ಲೌಕಿಕ ಶಿಕ್ಷಣ: ಕಸಾಯಿಗಲ್ಲಿ ಉರ್ದು ಹೈಯರ್ ಪ್ರೈಮರಿ ಶಾಲೆ.
- ಮಾಸ್ಟರ್ : ಖಾಲಿದ್ ಮಾಸ್ಟರ್.
- ಸೇವೆ: ಬೂಬುಖಾನ್ ಮಸೀದಿ, ಮಂಗಳೂರು ಸೆಂಟ್ರಲ್ ಜೈಲ್ (ಕೈದಿಗಳಿಗೆ ಖುರ್ಆನ್ ಕಲಿಸಿಕೊಡುವ ಸೌಲಭ್ಯ) ಪಣಂಬೂರು ಹಾಗೂ ಕಾಟಿಪಳ್ಳ ಮಸೀದಿ.
- ಮರಣ: 19, ಫೆಬ್ರವರಿ 1998 (22, ಶವ್ವಾಲ್ 1418)
- ಮರಣ ಹೊಂದಿದ ಸ್ಥಳ : ಕಾಟಿಪಳ್ಳ 7ನೇ ಬ್ಲಾಕ್, ಬದ್ರಿಯಾ ಜುಮಾ ಮಸೀದಿಯಲ್ಲಿ ಲುಹ್ರ್ ನಮಾಜ್‌ನ ಸಂದರ್ಭ.
- ಉಪಸ್ಥಿತಿ: ಖಾಝಿ ಈ.ಕೆ. ಇಬ್ರಾಹೀಮ್ ಮದನಿ ಉಸ್ತಾದ್‌ರ ಮಡಿಲಲ್ಲಿ

ಅಲ್ಲಾಹುಮ್ಮಗ್ ಫಿರ್ ಲಹು ವರ್ ಹಮ್ ಹು. ಅಲ್ಲಾಹು ನಮ್ಮೆಲ್ಲರನ್ನೂ ತಂದೆಯವರೊಂದಿಗೆ ಜನ್ನಾತುಲ್ ಫಿರ್‌ದೌಸ್ ಅನುಗ್ರಹಿಸಲಿ ಹಾಗೂ ತಾಯಿಯವರಿಗೆ ಆಫಿಯತ್‌ನೊಂದಿಗಿನ ಆಯುರಾರೋಗ್ಯ ಕರುಣಿಸಲಿ. ಆಮೀನ್ ಯಾ ರಬ್ಬಲ್ ಆಲಮೀನ್.

# ನಾ ಕಂಡಂತೆ ನನ್ನ ಉಸ್ತಾದ್

ಇಲ್ಯಾಸ್ ಬಿನ್ ಅಬ್ದುಲ್ಲ ಪಣಂಬೂರ್

ಉಸ್ತಾದರನ್ನು ನಾನು ಪ್ರಥಮ ಬಾರಿಗೆ ಕಂಡದ್ದು ನನ್ನ ದೊಡ್ಡಮ್ಮನ ಮನೆಯಲ್ಲಿ ಮದುಮಗನಾಗಿ, ನಾವೆಲ್ಲರೂ ಪಣಂಬೂರ್‌ನಲ್ಲಿದ್ದ ಸಮಯ, ಆಗ ನನಗಿನ್ನೂ ಚಿಕ್ಕ ಪ್ರಾಯ, ಅಮ್ಮನ ಸೆರಗು ಹಿಡಿದು ಆಚೀಚೆ ಹೋಗುವ ನನ್ನ ಎಳಸು ಕಂಗಳಿಗೆ ರುಖಿಯಕ್ಕನ ಪುದಿಯಾಂಪುಳೆಯಾಗಿ ಬಂದ ಆ ವ್ಯಕ್ತಿಯ ತೇಜಪುಂಜವಾದ ಮುಖ, ಕಪ್ಪಗಿನ ಆಕರ್ಷಕ ಗಡ್ಡ, ನೆತ್ತಿಯಲ್ಲಿ ನಿಸ್ಕಾರದ ಕಲೆ, ಕುಟುಂಬದಲ್ಲಿ ಸಂಭ್ರಮವನ್ನೇ ತಂದಿರಿಸಿತ್ತು. ಆ ನೆನಪು ನನ್ನ ಮನದಲ್ಲಿ ಇನ್ನೂ ಚಿರಸ್ಥಾಯಿಯಾಗಿದೆ. ಮದುವೆಯಾದ ಕೆಲವೇ ದಿನಗಳ ನಂತರದಿಂದ ಪಣಂಬೂರಿನ ಮೇಲೊ ಪಳ್ಳಿ ಮತ್ತು ಕೀಲೊ ಪಳ್ಳಿ ಎಂಬ ಎರಡು ಮಸೀದಿಗಳಲ್ಲಿ ವಾರ ಬಿಟ್ಟು ವಾರ ಜುಮಾ ಖುತ್ಬಾ ನೆರವೇರಿಸುವ ಮಹತ್ತರ ಜವಾಬ್ದಾರಿಯನ್ನು ವಹಿಸಿ ತನ್ನ ಸುಶ್ರಾವ್ಯ ಕಂಠದ ಪಠಣದಿಂದ ಊರಿನವರೆಲ್ಲರ ಅಪಾರ ಮೆಚ್ಚುಗೆಯನ್ನು ಪಡೆದರು.

ಪಣಂಬೂರು ಎಂಬ ಊರಿನಿಂದ ಅನಿವಾರ್ಯವಾಗಿ ಕಾಟಿಪಳ್ಳಕ್ಕೆ ನಾವೆಲ್ಲರೂ ವಲಸೆ ಬಂದ ನಂತರ ದಶಕಗಳಿಂದ ಖತೀಬರಾಗಿ ಸೇವೆ ಸಲ್ಲಿಸುತ್ತಿದ್ದ ಪಣಂಬೂರಿನ ಖಾಝಿ ಆಗಿದ್ದ, ಪಣಂಬೂರಿನ ಜನತೆ ಆದರಿಸಿ ಗೌರವಿಸುತ್ತಿದ್ದ ನನ್ನಜ್ಜ ಮರ್ಹೂಮ್ ಪಿ.ಇದ್ದಿನಬ್ಬ ಮುಸ್ಲಿಯಾರ್ ರವರು ವಯೋಸಹಜ ಕಾರಣಗಳಿಂದ ಖತೀಬ್ ಸ್ಥಾನದಿಂದ ವಿರಮಿಸಿದರು. ತೆರವಾದ ಅವರ ಸ್ಥಾನಕ್ಕೆ ಮುಹಮ್ಮದ್ ಸ್ವಾಲಿಹ್ ಉಸ್ತಾದರನ್ನು ಸರ್ವಾನುಮತದಿಂದ ನೇಮಿಸಲಾಯ್ತು. ಅದರೊಂದಿಗೆ ಮದ್ರಸದ ಸಂಪೂರ್ಣ ಜವಾಬ್ದಾರಿಯನ್ನೂ ಉಸ್ತಾದರಿಗೆ ವಹಿಸಲಾಗಿತ್ತು.

ಬಲು ಚಿಕ್ಕಂದಿನಿಂದಲೇ ನಾನು ಉಸ್ತಾದರನ್ನು ನೋಡುತ್ತಾ ಕಲಿಯುತ್ತಾ ಬೆಳೆದು ಬಂದವನು. ಅರಬಿಕ್ ವರ್ಣಮಾಲೆಯನ್ನು ಅವರು ಕಲಿಸುವ ಸೊಬಗು ಅಮೋಘವಾಗಿತ್ತು. ಪದಗಳ ಉಚ್ಚಾರ, ಮನಮುಟ್ಟುವಂತೆ ಸುಂದರ ಶೈಲಿಯ ಪಾಠ ಈ ಪ್ರಾಯದಲ್ಲೂ ನನಗೆ ನೆನಪಾಗುತ್ತದೆ.ಅದರೊಂದಿಗೆ ಆ ಕಾಲದ ಪತ್ತ್ ಕಿತಾಬ್ ಅವರಿಂದ ಕಲಿತ ಶ್ರೇಯ ನನಗೆ ಲಭಿಸಿದೆ.





ಸುಮಾರು ಅರ್ಧ ಶತಮಾನಗಳ ಕಾಲ ತನ್ನ ಅಪೂರ್ವ ಪಾಂಡಿತ್ಯದಿಂದ ಜ್ಞಾನಾಮೃತವನ್ನು ಕಾಟಿಪಳ್ಳ ಪಣಂಬೂರ್ ಜಮಾತಿನ ಮಕ್ಕಳಿಗೂ ಹಿರಿಯರಿಗೂ ಧಾರೆಯೆರೆದ ನಮ್ಮ ಬೆಲಿಯೊ ಉಸ್ತಾದ್ ಕಲಿಕೆಯಲ್ಲಿ ಬಾಲ್ಯದಲ್ಲೇ ಕುಶಾಲಾಗ್ರತೆಯನ್ನು ಹೊಂದಿದ್ದು, ಮಂಗಳೂರಿನ ಕೇಂದ್ರ ಜುಮ್ಮಾ ಮಸೀದಿಯಲ್ಲಿ ಶೈಖುನಾ ಕುಂಞ್ ಅಹಮದ್ ಮುಸ್ಲಿಯಾರ್ ಎಂಬ ಮಹಾನ್ ಪಂಡಿತರ ಬಳಿ ಸಂಪೂರ್ಣ 'ಇಲ್ಮ್'ನ್ನು ಪಡೆದರು. ಎಲ್ಲಾ ವಿದ್ಯಾ ಪ್ರಕಾರಗಳಲ್ಲಿ ಅಗಾಧ ಪಾಂಡಿತ್ಯವನ್ನು ಹೊಂದಿದ್ದ ಬೆಲಿಯೊ ಉಸ್ತಾದರು ಅತ್ಯುತ್ತಮ ವಾಗ್ಮಿಯೂ ಜೊತೆಗೆ ಉತ್ತಮ ಬರಹಗಾರರೂ ಆಗಿದ್ದರು. ಪಾಂಡಿತ್ಯದ ಕೊಡ ತುಂಬಿದ್ದರೂ ಅವರ ಜೀವನ ಶೈಲಿಯು ಬಹಳ ಸರಳವಾಗಿತ್ತು. ಸರ್ವಜನರೊಂದಿಗೂ ಗೌರವಾದರಗಳೊಂದಿಗೆ ಬೆರೆಯುತ್ತಿದ್ದ ಆ ಮಹಾನರು ನಮ್ಮ ಜಮಾಅತ್‌ಗೆ ವಿಶೇಷ ಘನತೆಯನ್ನೂ ತಂದಿದ್ದರು. ಮಸೀದಿಯಲ್ಲಿ ತನ್ನ ಕರ್ತವ್ಯದಲ್ಲಿ ಎಳ್ಳಷ್ಟೂ ಕುಂದು ಕೊರತೆ ಬಾರದ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದರು.

ಉಸ್ತಾದರ ಇಮಾಮತ್‌ನಲ್ಲಿ ಮಅಮೂಮಾಗಿ ನಮಾಝ್ ನಿರ್ವಹಿಸಲು ಸಿಗುತ್ತಿದ್ದ ಹಿತಾನುಭವ ಮರೆಯಲಾಗದ್ದು. ತಕ್ಬೀರತುಲ್ ಇಹ್ರಾಮ್‌ನಿಂದ ಕೊನೆಯ ಸಲಾಮ್ ತನಕ ಅವರ ಪ್ರತೀ ಕ್ರಿಯೆಯು ಅನುಕರಣಾ ಯೋಗ್ಯವಾಗಿತ್ತು.ಅಲ್ಲದೆ ಜೀವನದ ಕೊನೆಯ ದಿನದವರೆಗೂ ಇಮಾಮತ್ ನಮಾಝ್ ನಿರ್ವಹಣೆಯಲ್ಲಿ ಏನೊಂದೂ ವ್ಯತ್ಯಾಸ ಅಥವಾ ಕ್ಷೀಣತೆ ಅವರಲ್ಲಿ ಕಂಡುಬಂದದ್ದಿಲ್ಲ.

1990ರಲ್ಲಿ ಮಸೀದಿಯ ಕಾರ್ಯದರ್ಶಿಯಾಗಿ ಸೇವೆಸಲ್ಲಿಸುವ ಯೋಗವು ನನಗೆ ಪ್ರಾಪ್ತಿಯಾಗಿತ್ತು, ಹಾಗಾಗಿ ನನಗೆ ಉಸ್ತಾದರ ದೈನಂದಿನ ಸೇವಾ ಕಾರ್ಯಗಳನ್ನು ಹತ್ತಿರದಲ್ಲಿ ನೋಡುವ ಅವಕಾಶ ಒದಗಿಬಂದಿತ್ತು. ಇಖಾಮತ್ ಕೊಡಲು ಸ್ವಲ್ಪ ವಿಳಂಬವಾದರೆ ಮುಅದ್ದಿನರನ್ನು ಸೌಮ್ಯವಾಗಿ ಗದರಿಸುವುದನ್ನು ನಾನು ಕಂಡಿದ್ದೇನೆ. ಮರ್ಹೂಂ ಹಾಜಿ ಪಿ.ಎಂ. ಅಬ್ದುಲ್ ಖಾದರ್ ಮುಸ್ಲಿಯಾರ್‌ರವರು ದೀರ್ಘ ಕಾಲ ಮುಅದ್ದಿನ್ ರಾಗಿ ಉಸ್ತಾದರಿಗೆ ಸಾರ್ಥಕ ಸಾಥ್ ನೀಡಿದ್ದರು. ಅವರಿಬ್ಬರ ಜೋಡಿ ನಮ್ಮ ಜಮಾಅತ್‌ನ ಚರಿತ್ರೆಯಲ್ಲಿ ಒಂದು ಅವಿಸ್ಮರಣೀಯವಾದುದು. ಬಹುಮಾನ್ಯ ಉಸ್ತಾದರು ಪ್ರತಿದಿನವೂ ತಪ್ಪದೆ ಕ್ಲಪ್ತ ಸಮಯಕ್ಕೆ ಮಸೀದಿಗೆ ಬಂದು ಐದು ಹೊತ್ತು ನಮಾಝಿಗೆ ನೇತೃತ್ವ ನೀಡುತ್ತಿದ್ದ ಆ ಪ್ರಕ್ರಿಯೆ ಸೂರ್ಯ-ಚಂದ್ರರ ನಡಿಗೆಯಂತೆ ಕರಾರುವಕ್ಕಾಗಿತ್ತು.

ಪ್ರತೀ ಜುಮ್ಅಃ ರಾತ್ರಿಯ ಇಶಾ ನಮಾಝ್ ಹಾಗೂ ಸುಬಹ್ ನಮಾಝಿನಲ್ಲಿ ತಪ್ಪದೆ ಅವರು ಪಠಿಸುತ್ತಿದ್ದ ಸೂರಃ ಜುಮ್ಅಃ, ಸೂರಃ ಮುನಾಫಿಖೂನ್ ಮತ್ತು ಸೂರಃ ಸಜದ್ಧ ಕೇಳುಗರ ಹೃದಯದಲ್ಲಿ ಅಚ್ಚೊತ್ತಿದಂತಾಗುತ್ತಿತ್ತು, ನನಗಂತೂ ಬಾಲ್ಯದಲ್ಲಿ ಅದನ್ನು ಕೇಳುತ್ತಾ 'ಬಾಯಿಪಾಠ' ವಾಗಿತ್ತು. ನಮಾಝ್‌ನಲ್ಲಿ ಅವರ ಖುರ್‌ಆನ್ ಪಠಣಕ್ಕೆ ನಮ್ಮ ಜಮಾಅತ್‌ನವರಷ್ಟೇ ಅಲ್ಲದೆ ಹೊರಗಿನ ಜಮಾಅತ್‌ನವರೂ ಫಿದಾ ಆಗುತ್ತಿದ್ದರು. ವಾರದ ಬೇರೆ ದಿನಗಳಲ್ಲೂ ದೀರ್ಘ ಸೂರತ್‌ಗಳನ್ನು ಪಠಿಸುವ ಪರಿಪಾಠ ಉಸ್ತಾದರದ್ದಾಗಿತ್ತು. ಇದರಿಂದ ಮಅಮೂಮ್‌ಗಳ ಹೃದಯ ಖುರ್‌ಆನಿನ ವೈವಿಧ್ಯಮಯ ಅಧ್ಯಾಯಗಳ ಆಲಿಸುವಿಕೆಯಿಂದ ಅಲ್ಲಾಹನಲ್ಲಿ ಭಯಭಕ್ತಿ ವೃದ್ದಿಸುವಂತೆ ಮಾಡುತ್ತಿತ್ತು. ಅಲ್ಲದೆ ಮಾನ್ಯ ಉಸ್ತಾದರ ಎರಡು ಪೆರ್ನಾಳ್‌ಗಳಲ್ಲಿ ನಿರ್ವಹಿಸುತ್ತಿದ್ದ ಈದ್ ಖುತ್‌ಬಾ ಕೇಳುವಾಗ ಮೈ ನವಿರೇಳುತ್ತಿತ್ತು. ಮಲಯಾಳಂ ಮಿಶ್ರಿತ ಬ್ಯಾರಿ ಭಾಷೆಯಲ್ಲಿ ಅವರು ನೀಡುತ್ತಿದ್ದ ಖುತ್‌ಬಾ ಹಿರಿಯ ಕಿರಿಯರೆಲ್ಲರನ್ನೂ ಅಲ್ಲಾಹನ ಸಾಮಿಪ್ಯಕ್ಕೆ ಸೆಳೆಯುವಂತಿತ್ತು. ನಿತ್ಯದ ಧ್ಯಾನ

ಹಾಗೂ ದೀನೀ ಬೋಧನೆಗಳ ಆಳ-ಅಗಲವನ್ನು ಸಶಕ್ತವಾಗಿ ಹೇಳಿ ಕೊಡುತ್ತಿದ್ದ ಅವರ ಸಾಮರ್ಥ್ಯ ಅಪೂರ್ವವಾದದ್ದು.

## ನೆನಪಿನ ಕೆಲವು ತುಣುಕುಗಳು

**1970** ರ ದಶಕದ ಆದಿಯಲ್ಲಿ ಕಾಟಿಪಳ್ಳ ಕೈಕಂಬದ ಕೇಂದ್ರ ಮೈದಾನದಲ್ಲಿ ಒಂದು ಬೃಹತ್ ಮೀಲಾದ್ ಸಮಾವೇಶವನ್ನು ಹಮ್ಮಿಕೊಳ್ಳಲಾಗಿತ್ತು. ಸುತ್ತಮುತ್ತಲಿನ ಮಸೀದಿ ಮದ್ರಸಗಳ ಒಕ್ಕೂಟದಿಂದ ಏರ್ಪಡಿಸಿದ ಒಂದು ಅತ್ಯಮೋಘ ಸಮಾರಂಭವಾಗಿತ್ತು ಅದು. ಅದರ ಮುಖ್ಯ ಸಂಘಟಕರಲ್ಲಿ ನಮ್ಮ ಉಸ್ತಾದರೂ ಒಬ್ಬರಾಗಿದ್ದರು. ಶಾಮಿಯಾನಗಳಿಲ್ಲದ ಆ ಕಾಲದಲ್ಲಿ ತೆಂಗು-ಕಂಗಿನ ಕಂಬ ಮಡಲುಗಳಿಂದ ರಚಿಸಿದ ಅಲಂಕೃತ ಭವ್ಯ ತೋರಣದಡಿ ಉಲಮಾ ಉಮರಾಗಳ ಸಮಾಗಮದಿಂದ ಹಾಗೂ ಮದ್ರಸ ವಿದ್ಯಾರ್ಥಿಗಳ ಸ್ಪರ್ಧಾ ಕಾರ್ಯಕ್ರಮಗಳಿಂದ ನಡೆದ ಒಂದು ಅಮೋಘ ಕಾರ್ಯಕ್ರಮವಾಗಿತ್ತದು. ಆ ಸ್ಪರ್ಧಾ ಕಾರ್ಯಕ್ರಮದಲ್ಲಿ ಮದ್ರಸ ವಿದ್ಯಾರ್ಥಿಯಾಗಿದ್ದ ನನಗೂ ಉಸ್ತಾದರು ಭಾಷಣ ಕಲಿಸಿ ಸ್ಪರ್ಧೆಗಿಳಿಸಿ ಬಹುಮಾನ ಗಿಟ್ಟಿಸುವಂತೆ ಮಾಡಿದ್ದರು. ಮರ್ಹೂಂ ಟಿ.ಪಿ.ಮೊಹಿದಿನ್ ಕುಟ್ಟಿ ಉಸ್ತಾದರೂ ಅದರ ಒಬ್ಬ ಸಂಘಟಕರಾಗಿದ್ದರು.

ಕಾಟಿಪಳ್ಳ ಕೈಕಂಬದ ಸದ್ರಿ ಮೈದಾನದ ತುದಿಯಲ್ಲಿ ಕೆಲವು ಸಮಯದ ನಂತರ ಮಸೀದಿ ಆಡಳಿತದವರ ಪ್ರಯತ್ನದ ಫಲವಾಗಿ ಕೈಕಂಬದ ಮಕ್ಕಳಿಗೆ ಅನುಕೂಲವಾಗಲು ಮದ್ರಸ ನಿರ್ಮಾಣಕ್ಕೆ ಸರಕಾರ 10 ಸೆಂಟ್ಸ್ ಸ್ಥಳವನ್ನು ಮಂಜೂರು ಮಾಡಿ ಹಕ್ಕು ಪತ್ರವನ್ನೂ ನೀಡಿತ್ತು. ಮಂಜೂರಾದ ಆ ಸ್ಥಳದಲ್ಲಿ ನಮ್ಮ ಹಿರಿಯರು ಒಂದು ಜೋಪುಡಿಯನ್ನು ರಚಿಸಿದ್ದರೂ ಆ ಸ್ಥಳ ಉಳಿಯುತ್ತಿತ್ತು. ಆದರೆ ಆ ಸ್ಥಳದಲ್ಲಿ ಮದ್ರಸ ಕಟ್ಟಡ ನಿರ್ಮಿಸಿಲ್ಲ ಎಂಬ ಕಾರಣಕ್ಕೆ ಸರಕಾರವು ನಮಗೆ ಮಂಜೂರಾದ ಸ್ಥಳವನ್ನು ರದ್ದುಗೊಳಿಸಿತು. ಆ ನಂತರ ನಡೆದಿದ್ದೆಲ್ಲವೂ ಇತಿಹಾಸ. ಸಕಾಲದಲ್ಲಿ ಅಲ್ಲಿ ಒಂದು ಮದ್ರಸ ಕಟ್ಟಡ ನಿರ್ಮಿಸಿದ್ದೇ ಆಗಿದ್ದರೆ ಇಂದಿಗೂ ಆ ಮೈದಾನ ನಮ್ಮ ಕೇಂದ್ರ ಸ್ಥಾನವಾಗಿ ಇರುತ್ತಿತ್ತು. ಆ ಸ್ಥಳವು ನಮ್ಮ ಕೈ ಜಾರಿದ ಬಗ್ಗೆ ಬೆಲಿಯೊ ಉಸ್ತಾದರು ತುಂಬಾನೇ ನೊಂದುಕೊಂಡಿದ್ದರು.

## ಮದ್ರಸ ಪಠ್ಯ ಪುಸ್ತಕ ಬದಲಾವಣೆ

**1993-94** ರ ವರ್ಷ. ಆಗ ನಮ್ಮ ಮದ್ರಸತುನ್ನೂರಿಯ್ಯಃ ಕೇಂದ್ರ ಮದ್ರಸ ಹಾಗೂ ಕೈಕಂಬದ ಬ್ರಾಂಚ್ ನ ಮದ್ರಸದಲ್ಲೂ ಹಳೆಯ ಸಮಸ್ತ ಮಂಡಳಿಯಿಂದ ಪ್ರಕಟವಾಗುವ ಪಠ್ಯ ಪುಸ್ತಕಗಳನ್ನೇ ಬಳಸುತ್ತಿದ್ದೆವು. ಆದರೆ ಕೇರಳ ಸಮಸ್ತ ಸುನ್ನೀ ವಿದ್ಯಾಭ್ಯಾಸದ ಇನ್ನೊಂದು ಮಂಡಳಿಯವರು ಅದಾಗಲೇ ಮದ್ರಸ ಪಠ್ಯ ಪುಸ್ತಕಗಳ ಅಕ್ಷರ ಲಿಪಿಯನ್ನು ರಸ್ಮುಲ್ ಉಸ್ಮಾನಿಗೆ ಬದಲಾಯಿಸಿದ್ದರು. ಈ ಲಿಪಿಯು ಗಲ್ಫ್ ದೇಶಗಳ ಪ್ರಚಲಿತ ಲಿಪಿಯಂತಿತ್ತು. ಇದನ್ನು ಮನಗಂಡ ನಾವು (ಆಡಳಿತ ಸಮಿತಿ) ಈ ಲಿಪಿಯಿಂದ ಗಲ್ಫ್ ಗೆ ಹೋಗುವ ನಮ್ಮ ಮಕ್ಕಳಿಗೆ ಉಪಯೋಗ ಆಗಬಹುದು ಎಂದು ಭಾವಿಸಿದೆವು. ಆ ನಿಟ್ಟಿನಲ್ಲಿ ಸನ್ನದ್ಧರಾದ ನಾವು ಮೊದಲಿಗೆ ಖತೀಬ್ ಉಸ್ತಾದರನ್ನು ಕಂಡು ವಿಚಾರ ಮಂಡಿಸಿದಾಗ ಉಸ್ತಾದರು ಹಳೆಯ ಸಮಸ್ತ ವಿಭಾಗವನ್ನು ನೆಚ್ಚಿ ಕೊಂಡಿದ್ದರೂ ನನ್ನ ವಿವರಣೆಯ ನಂತರ ಬದಲಾವಣೆಗೆ ಒಪ್ಪಿಗೆ ಸೂಚಿಸಿದರು. ಉಸ್ತಾದರ ಹೃದಯ ವೈಶಾಲ್ಯದ ನಿಲುವು ಕಂಡು ನಾನು ಚಕಿತಗೊಂಡು ಅವರ ನಿಷ್ಕಲ್ಮಶ ವ್ಯಕ್ತಿತ್ವಕ್ಕೆ ಸೆಲ್ಯೂಟ್ ಕೊಡಬೇಕೆನಿಸಿತ್ತು. ಕೊನೆಗೆ ಉಸ್ತಾದರ ಸಮ್ಮತಿ





ಪಡೆದ ನಂತರವೇ ನಾವು ಕಮಿಟಿ ಮೀಟಿಂಗ್ ಕರೆದು ಪಠ್ಯಕ್ರಮವನ್ನು ಬದಲಾಯಿಸಲು ನಿರ್ಣಯ ಕೈಗೊಂಡೆವು. ಆವಾಗ ಮರ್ಹೂಂ ಪಿ.ಕೆ. ಅಬ್ದುಲ್ ರಹಿಮಾನ್‌ಜಮಾಅತ್ ಅಧ್ಯಕ್ಷರಾಗಿದ್ದರು.

## ಈದ್ಗಾದಲ್ಲಿ ಈದ್ ನಮಾಝ್

1994ರ ತನಕ ಈದ್ ಹಬ್ಬಗಳ ನಮಾಝುನ್ನು ಕೇಂದ್ರ ಮಸೀದಿಯಲ್ಲೇ ನಿರ್ವಹಿಸಿ ಖುತ್ಬಾ ಪಾರಾಯಣ ಆಲಿಸಲು ಮಾತ್ರ ಈದ್ಗಾಕ್ಕೆ ಹೋಗುತ್ತಿದ್ದೆವು. ಈ ಪರಿಪಾಠವನ್ನು ನಿಲ್ಲಿಸಿ ಈದ್ಗಾದಲ್ಲೇ ನಮಾಝ್ ಮತ್ತು ಖುತ್ಬಾ ಒಟ್ಟಿಗೆ ಮಾಡುವ ಪ್ರಸ್ತಾವನೆಯನ್ನು ಗೌರವಾನ್ವಿತ ಉಸ್ತಾದರ ಗಮನಕ್ಕೆ ತಂದಾಗ ಉಸ್ತಾದರು ನಜಸ್ ಇಲ್ಲದ ಹಾಗೇ ಖಾತ್ರಿ ಪಡಿಸಿ ಮಾಡಬಹುದು ಎಂಬ ಹುಕುಂ ನೀಡಿದರು. ಅಂದಿನಿಂದ ಇಂದಿನವರೆಗೂ ಮಳೆ ಇಲ್ಲದಿದ್ದರೆ ಈದ್ಗಾದಲ್ಲೇ ಜಂಟಿ ಪ್ರಾರ್ಥನೆಗಳು ನಡೆಯುತ್ತಿದೆ.

ಆದರಣೀಯ ಉಸ್ತಾದರು ನೂರುಲ್ ಹುದಾ ಶಾಲೆಯ ಬಗ್ಗೆ ಅಪಾರ ಅಭಿಮಾನ ಇಟ್ಟು ಕೊಂಡಿದ್ದರು. ಶಾಲೆಯ ಪ್ರಾರಂಭೋತ್ಸವದಿಂದ ಹಿಡಿದು ಪ್ರತಿಯೊಂದು ಕಾರ್ಯಕ್ರಮಗಳಲ್ಲೂ ಭಾಗವಹಿಸಿ ದುಆದೊಂದಿಗೆ ಆಶೀರ್ವದಿಸಿ ಹೋಗುತ್ತಿದ್ದರು. ಎಲ್ಲಾ ಈದ್ ಹಬ್ಬಗಳಲ್ಲಿ ಶಾಲಾ ಸಿಬ್ಬಂದಿಗಳಿಗೆ 'ಈದಿಯ'ವನ್ನು ಕೊಟ್ಟು ಅಭಿನಂದಿಸುತ್ತಿದ್ದರು. 1992 ರ ಕೋಮು ದಳ್ಳುರಿಯ ಸಂದರ್ಭದಲ್ಲಿ ಶಾಲಾ ಸಿಬ್ಬಂದಿಗಳಿಗೆ ಅವರು ನೀಡುತ್ತಿದ್ದ 'ಅಭಯ' ಹೃದಯಂಗಮಯವಾಗಿತ್ತು.

ಬಹುಮಾನ್ಯ ಉಸ್ತಾದ್‌ರವರ ಕೆಲವೊಂದು ಮಾನವೀಯ ಉದಾತ್ತ ಗುಣಗಳು ಅವರನ್ನು ಹೆಚ್ಚು ಎತ್ತರದ ಗೌರವದ ತುದಿಗೆ ತಂದು ನಿಲ್ಲಿಸುವಂತಿತ್ತು. ಉಸ್ತಾದರು ಹಜ್ ಯಾತ್ರೆಗೆ ತೆರಳುವಾಗ ತನ್ನ ಬಾಲ್ಯ ಸ್ನೇಹಿತ, ವಿಭಿನ್ನ ಆಶಯದ ಇಬ್ರಾಹೀಂ ಸಯೀದ್ ರವರನ್ನು ಕಾಣಲು ಅವರ ಪ್ರೆಸ್ ಗೆ ಹೋಗಿ ಹಸ್ತಲಾಘವದೊಂದಿಗೆ ದುಆಕ್ಕಾಗಿ ವಿನಂತಿಸಿದ್ದು ನಿಜಕ್ಕೂ ಅವರ ಉನ್ನತ ವ್ಯಕ್ತಿತ್ವವನ್ನು ನಮಗೆ ತೋರ್ಪಡಿಸಿದಂತಿತ್ತು. ತಮ್ಮ ಜೀವನದಲ್ಲಿ ಪಾಲಿಸಿದ ಧ್ಯೇಯ, ನಿಷ್ಠೆ, ಚಿಂತನೆ, ಮಾರ್ಗದರ್ಶನ ಮತ್ತು ಆಶೀರ್ವಾದ ನಮಗೆಲ್ಲರಿಗೂ ನಿತ್ಯ ದಾರಿದೀಪವಾಗಿರಲಿ. ಸದಾ ಮಮತೆ, ಪ್ರೀತಿ, ವಾತ್ಸಲ್ಯಗಳ ಚಿಲುಮೆಯಾಗಿದ್ದು, ಗೌರವ - ವಿಶ್ವಾಸಕ್ಕೆ ಪಾತ್ರರಾಗಿದ್ದ ಅವರ ವ್ಯಕ್ತಿತ್ವವನ್ನು ಹೆಮ್ಮೆಯಿಂದ ನೆನೆಸಿಕೊಳ್ಳುತ್ತಾ ಅವರ ತೋರಿದ ದಾರಿಯಲ್ಲಿ ಒಂದೆರಡು ಹೆಜ್ಜೆಗಳನ್ನಾದರೂ ಹಾಕುತ್ತಾ ಸಮಾಜಮುಖಿಗಳಾಗೋಣ.

ದಯೆ - ಮಾನವೀಯತೆಯನ್ನು ಮೈಗೂಡಿಸಿಕೊಂಡು ನಿಷ್ಕಲ್ಮಶ ಹೃದಯದ ಪ್ರೀತಿ ಮತ್ತು ವಾತ್ಸಲ್ಯದ ಪ್ರತಿರೂಪವಾಗಿ ಸದಾಕಾಲ ಎಲ್ಲರಿಗೂ ಒಳಿತನ್ನೇ ಬಯಸುತ್ತಾ ಬಂದಿದ್ದ ಅವರ ಸಂಸ್ಕಾರಯುತ ಸಾತ್ವಿಕ ಬದುಕನ್ನು ಸ್ಮರಿಸುವುದೇ ನನ್ನ ಸುಯೋಗ ಎಂದು ಭಾವಿಸುತ್ತೇನೆ. ಮತ್ತು ಹೇಗೆ ಬದುಕಿದರೆ ಹೇಗೆ ಜನರು ಸ್ಮರಿಸುತ್ತಾರೆ ಎನ್ನುವುದಕ್ಕೆ ಉಸ್ತಾದರ ಬದುಕೇ ಒಂದು ಉದಾಹರಣೆ. ಅವರು ನಮ್ಮಿಂದ ಅಗಲಿ ಇದೀಗ 25 ವರ್ಷವಾದರೂ ಅವರ ನೆನಪುಗಳೊಂದೂ ನಮ್ಮಿಂದ ಮಾಸಿಲ್ಲ, ನಮ್ಮೆಲ್ಲರ ಆದರಾಭಿಮಾನದ ಉಸ್ತಾದರ ದರ್ಜೆಯನ್ನು ಅಲ್ಲಾಹನು ಸ್ವರ್ಗೋದ್ಯಾನದಲ್ಲಿ ಉನ್ನತೀಕರಿಸಲಿ...ಆಮೀನ್

# ಜ್ಞಾನದೀಪ ಬೆಳಿಯೊ ಉಸ್ತಾದ್

ಪಿ.ಯಂ. ಝೈನುದ್ದೀನ್ ಕಾಟಿಪಳ್ಳ

ಉಲೇಮಾ ಶಿರೋಮಣಿಗಳ ಮರಣ ಲೋಕದ ಮರಣ ಎಂಬ ಪ್ರವಾದಿ ನುಡಿಯು ಸತ್ಯವಾಗಿದೆ. 1964ರಲ್ಲಿ ಮಂಗಳೂರಿನಿಂದ ಪಣಂಬೂರಿಗೆ ಬಂದು ಪಣಂಬೂರು ಮುಸ್ಲಿಂ ಜಮಾಅತಿಗೆ ಆಗಮಿಸಿ ಜ್ಞಾನದ ಪ್ರಕಾಶದಂತೆ ಬೆಳಕು ಬೀರಿದ ಬಹುಮಾನ್ಯ ಮುಹಮ್ಮದ್ ಸ್ವಾಲಿಹ್ ಉಸ್ತಾದ್ ಸುಮಾರು 33 ವರ್ಷಗಳ ಕಾಲ ಹೆಸರುವಾಸಿಯಾದ ಖತೀಬರಾಗಿಯೂ ಅಪಾರ ಸೇವೆ ಸಲ್ಲಿಸಿ ದೀನೀ ವಿಷಯದಲ್ಲಿ ಮಂಗಳೂರಿನಿಂದ ಪಣಂಬೂರು ಕಾಟಿಪಳ್ಳದ ತನಕ ಶೇ.80ರಷ್ಟು ಮುಸ್ಲಿಂ ಜನತೆಯನ್ನು ತನ್ನ ಶಿಷ್ಯವೃಂದವನ್ನಾಗಿ ಮಾಡಿದಂತಹ ಉಸ್ತಾದ್ ಮುಹಮ್ಮದ್ ಸ್ವಾಲಿಹ್. ಅವರ ಕಣ್ಮರೆ ಮುಸ್ಲಿಂ ಜಮಾಅತ್ ಕಾಟಿಪಳ್ಳದವರಿಗೆ ಮಾತ್ರವಲ್ಲ ಇಡೀ ಸಮುದಾಯಕ್ಕೆ ತುಂಬಲಾರದ ನಷ್ಟವಾಗಿದೆ. ತಮ್ಮ ಜೀವಿತಾದ್ಯಂತ ನಿಷ್ಕಳಂಕ ಚರಿತ್ರೆ, ಆತ್ಮೀಯ ಒಡನಾಟ, ಸೌಮ್ಯ ನಡವಳಿಕೆಯಿಂದ ಎಲ್ಲರ ಮನ ಗೆದ್ದಿದ್ದರು.

ಪವಿತ್ರ ಗ್ರಂಥದಲ್ಲಿ ಹೇಳಿದಂತೆ ಮಾನವ ಮೂಲತಃ ಮಾನ್ಯನು. ಅಲ್ಲಾಹು ಹೇಳುತ್ತಾನೆ ಆದಂ ಸಂತತಿಯನ್ನು (ಮನುಷ್ಯರನ್ನು) ನಾವು ಗೌರವಿಸುತ್ತಿರುವೆವು ಆದರೆ ಮಾನವ ಸಮಾನ ಗೌರವಿದರಲ್ಲ. ಪ್ರಪಂಚದ ಸಕಲ ವಸ್ತುಗಳಲ್ಲೂ ಉಚ್ಚ ನೀಚಗಳಿರುವಂತೆ ಮನುಷ್ಯ ವರ್ಗದಲ್ಲೂ ಇದೆ. ಕಲ್ಲುಗಳ ಜಾತಿಯಲ್ಲಿ ಕರಿಕಲ್ಲಿಗೂ ಮಾಣಿಕ್ಯಕ್ಕೂ ವ್ಯತ್ಯಾಸವಿರುವಂತೆ, ಮರಗಳಲ್ಲಿಯೂ ಕಾಟ್ ಮರಕ್ಕೂ ಗಂಧದ ಮರಕ್ಕೂ ವ್ಯತ್ಯಾಸವಿರುವಂತೆ ಮನುಷ್ಯರಲ್ಲಿಯೂ ವ್ಯತ್ಯಾಸವಿದೆ ಎಂಬುವುದಕ್ಕೆ ನಮ್ಮ ಮುಹಮ್ಮದ್ ಸ್ವಾಲಿಹ್ ಉಸ್ತಾದರೇ ಸಾಕ್ಷಿ. ಮನುಷ್ಯ ತನ್ನ ಜೀವನ ಕ್ರಮದಿಂದ ಉನ್ನತನೂ ನೀಚನೂ ಆಗುವನು. ಮನುಷ್ಯರು ಉನ್ನತಿಗೇರಿದರೆ ಮಲಕುಗಳಿಗಿಂತಲೂ ಉನ್ನತರಾಗುವರು ಹಾಗೆಯೇ ಅಧೋಗತಿಗಿಳಿದರೆ ಮೃಗಗಳಿಗಿಂತಲೂ ಕೀಳು ಮಟ್ಟಕ್ಕೆ ತಲುಪುವನು ಎಂಬುದಕ್ಕೆ ಇಂದಿನ ಕಾಲದ ಸಾಮಾಜಿಕ, ರಾಜಕೀಯ ಘಟನೆಗಳು ದಿನಂ ಪ್ರತಿ ನಡೆಯುತ್ತಿರುವ ದೌರ್ಜನ್ಯ ಮೋಸ ವಂಚನೆ ಅತ್ಯಾಚಾರದಂತಹ ಘಟನೆಗಳೇ ಸಾಕ್ಷಿ.

ಮಾನವನ ಮಾನದಂಡ ಬರೀ ದೇವಭಕ್ತಿ (ತಖ್ವಾ) ಮಾತ್ರವೆಂದು ನಮಗೆ ಉಸ್ತಾದ್ ಚಿಕ್ಕಂದಿನಲ್ಲಿಯೇ ಕಲಿಸಿಕೊಟ್ಟಿದ್ದಾರೆ. ದೇವಭಕ್ತಿಯ ಮೂಲಕ ದೇವನ ಸಾಮಿಪ್ಯಗೊಂಡಾಗ ಮನುಷ್ಯ ಉನ್ನತಿಗೇರುತ್ತಾನೆ ಮತ್ತು ಅವನ ಇಷ್ಟದಾಸರಾಗುತ್ತಾನೆ. ಅತ್ಯುನ್ನತರಾದವರು ಅಂಬಿಯಾಗಳಾಗಿದ್ದರೆ ನಂತರ ಸ್ವಹಾಬಿಗಳೂ, ಔಲಿಯಾಗಳು. ಅಲ್ಲಾಹು ಆಜ್ಞಾಪಿಸಿದ ನಿಶಿದ್ಧ ಕಾರ್ಯಗಳನ್ನು ಸಂಪೂರ್ಣ ತ್ಯಜಿಸಿ ದೇವನ ತೃಪ್ತಿಗಾಗಿ ಮಾತ್ರ ಜೀವಿಸುವುದೇ ತಖ್ವಾ,





ತಖ್ವಾ ಇಲ್ಲದ ಯಾರೊಬ್ಬರೂ ಮಹಾನ್ ಆಗಲಾರರು. ತಖ್ವಾ ಗರಿಷ್ಟವಿರುವವರನ್ನು ಅಲ್ಲಾಹನು ಉನ್ನತ ಸ್ಥಾನಕ್ಕೇರಿಸಬಹುದು, ತಖ್ವಾದ ಮೂಲಕ ಅಲ್ಲಾಹನಿಗೆ ಹತ್ತಿರವಾಗತೊಡಗಿದರೆ, ಅಲ್ಲಾಹನೂ ಒಂದು ಹೆಜ್ಜೆ ಹೆಚ್ಚಾಗಿ ಹತ್ತಿರವಾಗುವನು. ಇಂತಹ ಧಾರ್ಮಿಕ ವಿದ್ಯೆಯನ್ನು ನಮಗೆಲ್ಲರಿಗೂ ಕಲಿಸಿಕೊಟ್ಟ ನಮ್ಮ ಗುರುಗಳಾದ ಸ್ವಾಲಿಹ್ ಉಸ್ತಾದ್ ಇಹಲೋಕ ತ್ಯಜಿಸಿದರೂ ಅವರು ನಮಗೆ ಕಲಿಸಿಕೊಟ್ಟ ಶಿಕ್ಷಣ ನಮ್ಮೊಂದಿಗೆ ಭದ್ರವಾಗಿದೆ ಅಲ್ ಹಂದುಲಿಲ್ಲಾಹ್.

25 ವರ್ಷಗಳ ಮುಂಚೆಯೇ ಜ್ಞಾನ ದೀಪದಂತಿದ್ದ ಉಸ್ತಾದರರು ಅರೆಬಿಕ್, ಉರ್ದು, ಕನ್ನಡ, ಮಳಯಾಳಂ ಭಾಷೆಗಳಲ್ಲಿ ಉಪದೇಶಿಸುತ್ತಾ ಸರಳ ರೀತಿಯಲ್ಲಿ ಅರ್ಥಪೂರ್ಣವಾಗಿ ಶಾಂತ ಶೈಲಿಯಲ್ಲಿ ಇಂಪಾದ ವಿಶಿಷ್ಟ ಕಂಠದೊಂದಿಗೆ ಪವಿತ್ರ ಕುರ್‌ಆನನ್ನು ಸಮೂಹಕ್ಕೆ ಬೋಧಿಸುತ್ತಿದ್ದರು. ಅವರ ಉಪದೇಶ ಭೋರ್ಗರೆಯುವ ಜಲಪಾತವಾಗಿದೆ. ಇಬ್ಬನಿಯಂತೆ ಚೇತೋಹಾರಿಯಾಗಿ ಮನ ನೇವರಿಸಿದೆ. ಸಾಮಾಜಿಕ ಲೌಕಿಕ ಧಾರ್ಮಿಕ ವಿದ್ಯಾಭ್ಯಾಸಕ್ಕೆ ಬರುತ್ತಿದ್ದ ಮದ್ರಸ ವಿದ್ಯಾರ್ಥಿಗಳಿಗೂ ಅವರಲ್ಲಿ ಅಪಾರವಾದ ಅನುಕಂಪ, ಪ್ರೀತಿ, ಪ್ರೇಮ ಗೌರವಗಳಿದ್ದವು. ಜಮಾಅತ್ ಬಾಂಧವರ ಹಾಗೂ ವಿದ್ಯಾರ್ಥಿಗಳ ತಪ್ಪು ದೋಷಗಳನ್ನು ಮೃದು ಮಾತಿನಿಂದ ತಿದ್ದುವ ಸಾಮರ್ಥ್ಯ ಅವರಲ್ಲಿತ್ತು ಅದೇ ರೀತಿ ಅವರ ಭಯ ಪ್ರತೀ ಶಿಷ್ಯಂದಿರ ಹೃದಯದಲ್ಲಿ ನಡುಕವುಂಟು ಮಾಡುತ್ತಿತ್ತು. ಶಾಂತ ಸುಂದರವಾಗಿ ಇಂಪಾದ ಸ್ವರದೊಂದಿಗೆ ಅವರ ಕುರ್‌ಆನ್ ಪಠಣ, ನಮಾಝಿನಲ್ಲಿ ಅವರ ಓದುವ ಸೂರ ವಿದ್ಯಾರ್ಥಿಗಳಿಗೆ ಮಾತ್ರವಲ್ಲ ಜಮಾಅತಿನ ಪ್ರತಿಯೊಬ್ಬರಿಗೂ ಮನಃಶಾಂತಿ ನೀಡುತ್ತಿತ್ತು ಹಾಗೂ ಹೃದಯಕ್ಕೆ ಆತ್ಮ ವಿಶ್ವಾಸ ನೀಡುತ್ತಿತ್ತು. ಅಪಾರ ಶಿಷ್ಯವೃಂದ ಬೆಳೆಸಿ ಕಾಟಿಪಳ್ಳದ ಜನತೆಗೆ ಹಾಗೂ ಸಮುದಾಯಕ್ಕೆ ಉತ್ತಮ ಕೊಡುಗೆಯನ್ನಿತ್ತ ಉಸ್ತಾದರು ತಮ್ಮ ನೆನಪನ್ನು ನಮಗೆಲ್ಲರಿಗೂ ಧಾರೆಯೆರೆದುಕೊಟ್ಟು ಸಮುದಾಯಕ್ಕೆ ಅವರ ಶಿಕ್ಷಣವನ್ನು ಉಳಿಸಿ ನಮ್ಮೆಲ್ಲರನ್ನೂ ಅಗಲಿ ಹೋಗಿದ್ದಾರೆ. ಇಂದಿಗೂ ಅವರ ಸ್ಮರಣೆ ಅವರ ಉಪದೇಶ ಅವರ ಮಾರ್ಗದರ್ಶನ ಜನತೆಗೊಂದು ರೋಮಾಂಚನ.

ಬೆಲಿಯೊ ಉಸ್ತಾದರ ಧರ್ಮ ನಿಷ್ಠೆಯ ಬಗ್ಗೆ ಹೇಳುವುದಾದರೆ ಆ ಮಹನೀಯರು ಬಹಳ ಸೂಕ್ಷ್ಮತೆ ಉಳ್ಳವರಾಗಿದ್ದರು. ಲೌಖಿಕ ಪ್ರಸಿದ್ಧಿ, ಪ್ರಶಸ್ತಿ ಮತ್ತು ಫಲವನ್ನೆಂದೂ ಬಯಸದ ಆ ತ್ಯಾಗಮಯಿ ತನ್ನ ಜೀವನವನ್ನು ದೇವನ ಸಂಪ್ರೀತಿಗಾಗಿ ಮುಡಿಪಾಗಿಟ್ಟು ಪರಿಶುದ್ಧ ಸುನ್ನತ್ ಜಮಾಅತಿನಲ್ಲಿ ಮುನ್ನಡೆದು ಕತ್ತಲೆಯನ್ನು ತೊಲಗಿಸಿ ಸಮಾಜಕ್ಕೆ ಬೆಳಕು ಬೀರಿದ ವಿದ್ವಾಂಸರಾಗಿದ್ದರು. 1996ರಲ್ಲಿ ಉಸ್ತಾದರು ಪುಣ್ಯ ಕಾರ್ಯವಾದ ಪವಿತ್ರ ಹಜ್ ಯಾತ್ರೆಯನ್ನು ಕೈಗೊಂಡು ಜೀವನದಲ್ಲಿ ಕರ್ತವ್ಯವೆನಿಸಿದ ಇಸ್ಲಾಮಿನ ಪಂಚಮಕಾರ್ಯ ಪೂರ್ತಿಗೊಳಿಸಿ ದೇವನ ಪ್ರೀತಿಗೆ ಪಾತ್ರರಾಗಿದ್ದರು. ಓರ್ವ ಗುರುವರ್ಯರಲ್ಲಿಯೂ ಇಮಾಮರಲ್ಲಿ ಖತೀಬರಲ್ಲಿಯೂ ಕಾಣಬರುವ ಎಲ್ಲಾ ಗುಣ ವಿಶೇಷತೆಗಳು ಆ ಮಹಾನುಭಾವರಲ್ಲಿ ಅಡಕವಾಗಿತ್ತು. ಸತತ ಅಧ್ಯಯನ ಪರಿಶ್ರಮ ತ್ಯಾಗ ಭಕ್ತಿಗಳಲ್ಲಿ ಮುಂಚೂಣಿಯಲ್ಲಿದ್ದರು. ಐಹಿಕ ಸೊತ್ತು ಆಸ್ತಿಪಾಸ್ತಿಗಳಲ್ಲಿ ಮೋಹವನ್ನಿಡದೆ ಸರಳ ಜೀವನವನ್ನು ಮೈಗೂಡಿಸಿಕೊಂಡಿದ್ದರು.

ಪವಿತ್ರ ಇಸ್ಲಾಮಿನ ಸೇವೆಯಲ್ಲಿ ತನ್ನನ್ನು ಸುರಿಸಿ ಸತ್ಯ ವಿಶ್ವಾಸಿಗಳ ಅನುಸರಣೆಯಲ್ಲೇ ಜಮಾಅತಿ ನೊಳಗಿನ ಒಂದು ವಿವಾಹ ಕಾರ್ಯಕ್ಕೆ ಹೋಗಿ ನಿಖಾ ಮುಗಿಸಿ ಅಲ್ಪ ಹೊತ್ತಿನಲ್ಲಿ ತನ್ನ 63ವರ್ಷ ಪೂರ್ತಿ ಮಾಡಿಕೊಂಡು ತಾರೀಖು 19 ಫೆಬ್ರವರಿ 1998ನೇ ಗುರುವಾರ ಮಧ್ಯಾಹ್ನ ನಮಾಝಿನ ಸಿದ್ಧತೆಯಲ್ಲೇ ಅಲ್ಲಾಹನ ಸನ್ನಿಧಿ ಸೇರಿದರು. ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.

ಅವರು ತೋರಿಸಿಕೊಟ್ಟ ಉಪದೇಶ ನಮಗೆಲ್ಲರಿಗೂ ದಾರಿದೀಪವಾಗಿದೆ. ಅವರೊಬ್ಬ ಮೊಂಬತ್ತಿಯಂತಿದ್ದು ಉಳಿದವರಿಗೆ ಬೆಳಕು ಕೊಡುವಾಗ ತನ್ನನ್ನು ಕರಗಿಸಿದ ದಾರಿಯುದ್ದಕ್ಕೂ ಆದರ್ಶ

ಜೀವನ ಸಾಗಿಸಿ ನಮ್ಮನ್ನಗಲಿದ ಆದರಣೀಯ ಆಧ್ಯಾತ್ಮಿಕ ನೇತಾರರಾದ ಮರ್ಹೂಂ ಉಸ್ತಾದರು ಓರ್ವ ಅವಿಸ್ಮರಣೀಯ ವ್ಯಕ್ತಿ ಎಂಬುವುದಕ್ಕೆ ಅನುಮಾನವೇ ಇಲ್ಲ. ಅವರು ಅಂದು ನಮಗೆ ಕೊಟ್ಟ ಶಿಕ್ಷಣ ಇಡೀ ಜಮಾಅತಿನವರಿಗೆ ಆಕರ್ಷಿತವಾಗಿತ್ತು. ಆ ಆಕರ್ಷಣೆ ಸರ್ವ ಜಮಾಅತ್ ಬಾಂಧವರ ಮೆಚ್ಚುಗೆ ಗಳಿಸಿತ್ತು. ಆ ಮೆಚ್ಚುಗೆ ಸಾವಿರಾರು ವಿದ್ಯಾರ್ಥಿಗಳ ನಿರೀಕ್ಷೆಯಾಗಿತ್ತು. ಆ ನಿರೀಕ್ಷೆ ನಮ್ಮೆಲ್ಲರ ಬಾಲ್ಯ ಜೀವನವನ್ನು ಬೆಳಕಾಗಿ ಪ್ರಕಾಶಿಸುತ್ತಿತ್ತು. ಆ ಪ್ರಕಾಶ ನಮ್ಮೆಲ್ಲರ ನಡುವೆ ಇಂದಿಗೂ ಬೆಳಗುತ್ತಿದ್ದು ಇನ್ನು ಮುಂದಕ್ಕೂ ಬೆಳಗುತ್ತಿರಲಿ ಎಂದು ಹಾರೈಸುತ್ತಿದ್ದೇನೆ.

## ನಾನು ಮತ್ತು ಉಸ್ತಾದರ ಸಂಬಂಧ ಹಾಗೂ ಪರಿಚಯ

ನಾನು ಚಿಕ್ಕವನಿರುವಾಗಲೇ ಪಣಂಬೂರಿನಲ್ಲಿ ನನ್ನ ಅಕ್ಕಳನ್ನು ಮದುವೆಯಾಗಿ ಬಂದವರು ಈ ಉಸ್ತಾದರು. ನಾನು ಅಳಿಯಾಕ ಎಂದು ಕರೆಯುವುದಕ್ಕಿಂತಲೂ ಭಯ ಭಕ್ತಿಯೊಂದಿಗೆ ಉಸ್ತಾದ್ ಎಂದೇ ಕರೆಯುತ್ತಿದ್ದಾಗಲೇ ನನಗೇನೋ ಹೆಮ್ಮೆಯಾಗುತ್ತಿತ್ತು. ಅವರಿಂದ ಕಲಿತ ವಿದ್ಯೆ, ಮಾರ್ಗದರ್ಶನವೇ ಇಂದು ಈ ಲೇಖನ ಬರೆಯುವಷ್ಟರ ಮಟ್ಟಿಗೆ ತಲುಪಿದ್ದೇನೆ. ನಾನು ಹಲವಾರು ಲೇಖನ, ಭಾಷಣ, ಕಾರ್ಯಕ್ರಮ ನಿರೂಪಣೆ ಮಾಡಿರುವುದಕ್ಕೆ ನನ್ನ ಉಸ್ಥಾದರ ಧೈರ್ಯ ತುಂಬುವಿಕೆಗೆ ಆ ವಿದ್ಯೆಯೇ ಕಾರಣ ಎಂದು ಧೈರ್ಯದಿಂದಲೇ ಹೇಳಬಲ್ಲೆ. ಇನ್ನು ನನಗೆ ಮಂಗಳೂರು (ಮೈಕಾಲ) ತೋರಿಸಿದವರೂ ಉಸ್ತಾದರೇ, ಒಮ್ಮೆ ನಾನು ಅವರೊಂದಿಗೆ ಮಂಗಳೂರಿಗೆ ಹೋದಾಗ ಅವರ ಗುರುಗಳಾದ ಶೈಖುನಾ ಕುಂಞ್ ಅಹ್ಮದ್ ಮುಸ್ಲಿಯಾರರಲ್ಲಿಗೆ ಕರೆದುಕೊಂಡು ಹೋಗಿದ್ದರು. ಅಂದು ಆ ಗುರುಗಳ ಮನೆಯಲ್ಲಿ ಸಿಕ್ಕಿದ ಉಪಹಾರ, ಆ ಶೇಖುನಾರವರು ನನ್ನೊಂದಿಗೆ ಮಾಡಿದ ಸಂಭಾಷಣೆ ಇಂದಿಗೂ ನನ್ನ ಮನದಲ್ಲಿ ಅಚ್ಚಳಿಯದೆ ಉಳಿದಿದೆ. ಶೈಖುನಾರವರು ನನ್ನನ್ನು ಹತ್ತಿರ ಕೂರಿಸಿ ಮಾತನಾಡುತ್ತಿದ್ದಾಗ ನನ್ನ ಭಾವನವರಾದ ಉಸ್ತಾದರು ದೂರ ನಿಂತು ನೋಡುತ್ತಿದ್ದರು ಆಗ ಶೈಖುನಾರವರು ಮುಹಮ್ಮದ್ ಸ್ವಾಲಿಹ್ ಏಕೆ ದೂರ ನಿಂತು ನೋಡುತ್ತಿದ್ದೀರಿ ಉಪಹಾರ ತೆಗೆದುಕೊಳ್ಳಿ ಎಂದು ನನ್ನ ಉಸ್ತಾದರನ್ನು ಹತ್ತಿರ ಕರೆದ ಆ ಶಬ್ದ ಈಗಲೂ ನನ್ನ ಕಿವಿಗೆ ಅಪ್ಪಳಿಸುತ್ತಿದೆ. ಅಂದರೆ ಉಸ್ತಾದರು ಅವರ ಉಸ್ತಾದರಿಗೆ ನೀಡಿದ ಗುರು ಭಕ್ತಿ ಅವರು ತೋರಿಸಿದ ಭಯ, ನನಗೆ ಬಹಳಷ್ಟು ಪಾಠವನ್ನು ಕಲಿಸಿದೆ. ಇನ್ನೊಂದು ಸಂದರ್ಭದಲ್ಲಿ ಅವರ ಮಕ್ಕಳಾದ ಅಬ್ದುಲ್‌ಖಯ್ಯೂಂ, ಹಬೀಬ್ ಮದನಿ ಇವರಿಬ್ಬರ ನಿಖಾಹ್ ಸಂದರ್ಭದಲ್ಲಿ ಬೂಕರ ಪಳ್ಳಿಯಲ್ಲಿ ಮಂಗಳೂರು ಖಾಝಿ ಬಹು ಕೋಟಾ ಅಬ್ದುಲ್ ಖಾದರ್ ಮುಸ್ಲಿಯಾರ್ ಮತ್ತು ಉಳ್ಳಾಲ ಖಾಝಿ ಬಹು ಕುಂಞ್ ಕೋಯ ತಂಙಳ್ ನಿಖಾಹ್ ಕಾರ್ಯಕ್ಕೆ ಆಗಮಿಸಿದ್ದರು, ಆ ಎರಡು ಉಲಮಾಗಳ ಎದುರಿಗೆ ನನ್ನ ಭಾವನವರು ಅಂದರೆ ಸ್ವಾಲಿಹ್ ಉಸ್ತಾದರು ಬರಲು ಹೆದರಿ ಒಂದು ಮೂಲೆಯಲ್ಲಿ ನಿಂತಿದ್ದರು. ನಾನೇ ಹೋಗಿ ಒತ್ತಾಯ ಪೂರ್ವಕವಾಗಿ ನಿಖಾಹ್ ನೆರವೇರುವ ಸ್ಥಳಕ್ಕೆ ಕರೆದರೂ ಅವರು ಭಯದಿಂದ ಕಂಪಿಸುತ್ತಾ ನನ್ನಲ್ಲಿ ಹೇಳಿದ ಮಾತು 'ಆ ಎರಡು ಪ್ರಕಾಶದ ಎದುರಿಗೆ ನನಗೆ ಬರಲಾಗದು' ಎಂಬ ಹೇಳಿಕೆ ನನಗೆ ಮರೆಯಲಾಗದ ಕ್ಷಣಗಳು. ಉಸ್ತಾದರು ಬದುಕಿರುವಷ್ಟು ಕಾಲ ಉಲಮಾಗಳಿಗೂ, ಹಿರಿಯರಿಗೂ, ಕಿರಿಯರಿಗೂ ತೋರಿಸುತ್ತಿದ್ದ ಗೌರವ, ಅನುಕಂಪ, ಪ್ರೀತಿ, ದಯೆ ಕರುಣೆ ಕಾಟಿಪಳ್ಳ ಜಮಾಅತ್ ಬಾಂಧವರಿಗೆ ಮತ್ತು ಸುತ್ತಮುತ್ತಲ ನಾಗರಿಕರಿಗೆ ಉಸ್ತಾದ್ ಮರೆಯಲಾಗದ ಮಾಣಿಕ್ಯವಷ್ಟೇ. ಆ ಜ್ಞಾನದೀಪ ಕಣ್ಮರೆಯಾಗಿ 25 ವರ್ಷಗಳಾಗುತ್ತಿದ್ದರೂ ಕಾಟಿಪಳ್ಳದ ಮಸೀದಿ ವಠಾರದಲ್ಲಿ ಈಗಲೂ ಅವರನ್ನು ಕಂಡಂತೆ ಭಾಸವಾಗುತ್ತಿದೆ.

ಕವನ

# ಮರೆಯದ ಮಾಣಿಕ್ಯ

ಅಬ್ದುಲ್ ಸಮದ್ ಕಾಟಿಪಳ್ಳ

ಮರೆಯದ ಮಾಣಿಕ್ಯ ನಮ್ಮ ಬೆಲಿಯುಸ್ತ
ತಪ್ಪಿತಸ್ತರಿಗೆ ಅವರಲ್ಲಿತ್ತು 'ಬಾಕ್'ರೊ ಬೆತ್ತ
ಕೊರತೆಗಳ ಅರಿಯುತ್ತಲಿದ್ದರು ಸುತ್ತ ಮುತ್ತ
ಸನ್ಮಾರ್ಗ ತೋರಿಸುವುದೊಂದೇ ಅವರಲ್ಲಿನ ಚಿತ್ತ

ಬೆಲಿಯುಸ್ತ ನಮ್ಮೂರ ಬಲು ದೊಡ್ಡ ಆಸ್ತಿ
ಹುಲಿಯಂತ ಜನರಲ್ಲೂ ಅವರಿಗಿತ್ತು ದೋಸ್ತಿ
ದೀನೀ ವಿಷಯದಲಿ ಮಾಡಿರಲಿಲ್ಲವೆಂದೂ ಮಸ್ತಿ
ಹಾಗಾಗಿ ಮಸೀದಿಯಲ್ಲಿ ಆಗಲೇ ಇಲ್ಲ ಕುಸ್ತಿ

ಅಂದು ಮಸೀದಿ ಚಿಕ್ಕದಾಗಿತ್ತು
ಪ್ರೀತಿ ವಿಶ್ವಾಸ ಭರಪೂರ ತುಂಬಿತ್ತು
ಊರ ಜನರಿಂದ ಮಸೀದಿ ಬೆಳಕಾಗಿತ್ತು
ಇಂದು ಮಸೀದಿ ದೊಡ್ಡದಾಗಿದೆ
ಸಿರಿತನವಷ್ಟೇ ಹೆಚ್ಚಿದೆ
ಗೆಳೆತನವೆಲ್ಲೋ ಕುಂದಿದೆ

ಶಾಂತಿ ಪ್ರೀತಿ ನೆಮ್ಮದಿಯ ಜೀವನಕ್ಕೆ
ನಮ್ಮೂರು ಕಾಟಿಪಳ್ಳ ಎಂದೆಂದೂ ಮುಂದು
ಬೆಲಿಯುಸ್ತರ ಆದರ್ಶ, ಸಂದೇಶ
ನಮ್ಮಲ್ಲಿರಲಿ ಇಂದೂ ಎಂದೆಂದೂ
ಅವರ ಗುಣ ಸ್ವಭಾವ; ನಮಗೆಲ್ಲ ಮಾದರಿ
ಅಲ್ಲಾಹನೇ ತೋರಿಸು ನಮಗೆಲ್ಲರಿಗೂ ಸನ್ಮಾರ್ಗಕ್ಕೆ ದಾರಿ...




# ಮರೆಯಲಾರದ ನೆನಪು ಬೆಳಿಯೊ ಉಸ್ತಾದ್

ಅಬ್ದುಲ್ ಜಬ್ಬಾರ್ ಕಾಟಿಪಳ್ಳ

25 ವರ್ಷಗಳ ಹಿಂದೆ ತೀರಿಕೊಂಡ ನನ್ನ ಗುರು ಎಂ. ಮುಹಮ್ಮದ್ ಸಾಲಿಹ್ ಮೌಲವಿಯವರ ಬಗ್ಗೆ ಮಾತನಾಡುವುದೆಂದರೆ ಅದು ಕಾಟಿಪಳ್ಳ ಜಮಾಅತಿನ ಧಾರ್ಮಿಕತೆಯ ಕೆಲವು ಮುಖ್ಯ ಅಧ್ಯಾಯಗಳನ್ನು ನೆನಪಿಸಿಕೊಂಡಂತೆಯೇ ಸರಿ. ಆ ಕಾಲಘಟ್ಟದ ಜನರಲ್ಲಿ ಧಾರ್ಮಿಕ ಶಿಕ್ಷಣ ಕಡಿಮೆಯಿದ್ದರೂ, ಮಾಡುವ ಆರಾಧನೆ, ಭಕ್ತಿ ನಿರ್ಭರವಾಗಿತ್ತು. ಇಂದು ಸಾಮಾಜಿಕ ಜಾಲತಾಣಗಳು ಸೇರಿದಂತೆ ಪ್ರತಿಯೊಂದು ಮಾಧ್ಯಮ ಗಳಲ್ಲಿ ಧಾರ್ಮಿಕ ಶಿಕ್ಷಣ ಪ್ರಭಾವಗಳ ಹೆದ್ದಾರಿ ಭೋರ್ಗರೆಯುತ್ತಿದ್ದರೂ, ಅದನ್ನು ಶ್ರದ್ದೆಯಿಂದ ಅನುಷ್ಠಾನಕ್ಕೆ ತರುವಲ್ಲಿ ನಾವೆಷ್ಟು ಸಫಲರಾಗಿದ್ದೇವೆ ಎಂಬ ಆತ್ಮ ವಿಮರ್ಶನೆಯ ಅಗತ್ಯವಿದೆ. ಆಧ್ಯಾತ್ಮ ಎಂಬುದು ನಿಶ್ಯಬ್ದ, ನೀರವ ವಾತಾವರಣದಲ್ಲಿ ಒಬ್ಬಂಟಿಯಾಗಿ ಕುಳಿತು ಅಲ್ಲಾಹನನ್ನು ಧ್ಯಾನಿಸುವ ಅಂತರಂಗದ ಸಂಗಾತಿಯಾಗಿ ಉಳಿಯದೆ, ಮಾರುಕಟ್ಟೆಯಲ್ಲಿ ಮಾರಾಟಕ್ಕಿರುವ ಸರಕಿನಂತಾಗಿರುವ ಇಂದಿನ ದಿನಗಳಲ್ಲಿ ನಮಗೆ ಉಸ್ತಾದರ ಏಕಾಂತದ ತಸಬೀಹ್, ತಹ್ಲೀಲ್, ಧಿಕ್ರ್, ಳುಹಾ ನಮಾಜು, ತಹಜ್ಜುದ್ ನಮಾಜು ನೆನಪಾಗುತ್ತದೆ. ವಾದ - ವಾಗ್ವಾದಗಳ ಕೋಲಾಹಲಗಳು ಧರ್ಮದ ಪರಿವೇಷ ತೊಡುತ್ತಿರುವ ವಿದ್ಯಮಾನವನ್ನು ಗಮನಿಸುವಾಗ, ಗತಿಸಿ ಹೋದ ಎಂ. ಮುಹಮ್ಮದ್ ಸಾಲಿಹ್ ಉಸ್ತಾದರಂತಹ ಸಜ್ಜನ ವ್ಯಕ್ತಿಗಳ ಅಪರೂಪದ ಸರಳ ಭಾಷೆಯ ಬಾಷಣಗಳು, ಉಪದೇಶಗಳು ಯಾಕೆ ಫಲಪ್ರಧವಾಗುತ್ತಿತ್ತು ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬಹುದು. ಭಾಷಣದಿಂದ ಜನರಿಗೆ ಒಳಿತಾಗಬೇಕು ಎಂಬ ಸದ್ವಿಚಾರದ ಜಾಗದಲ್ಲಿ ಭಾಷಣದ ಶೈಲಿಗೆ ಜನರು ಮಾರುಹೋಗಬಾರದೆಂದು ಇರಾದೆ ಪ್ರತಿಷ್ಠಾನಗೊಂಡರೆ ಆ ಭೀಷಣ ಭಾಷಣ, ಫಲಪ್ರದವಾಗುವುದಾದರೂ ಹೇಗೆ ? ಇದರ ಅರ್ಥ ತಲೆಬುಡವಿಲ್ಲದೆ ಒಟ್ಟಾರೆ ಭಾಷಣ ಮಾಡಬೇಕೆಂದಲ್ಲ. ತಿರುಳಿಗೆ ನೀಡಬೇಕಾದ ಪ್ರಾಮುಖ್ಯತೆಯನ್ನು ಕಂಠಕ್ಕೆ ನೀಡಬಾರದು.





'ನೀ ನನಗಿದ್ದರೆ ನಾ ನಿನಗೆ' ಎಂಬ ಪೂರ್ವ ಯೋಜಿತ ಒಪ್ಪಂದ ಪ್ರಕಾರ ವೇದಿಕೆಯಲ್ಲಿ ಪರಸ್ಪರರನ್ನು ಹೊಗಳುವ ಅಥವಾ ಹುಣ್ಣಿನ ಕೆರತದಿಂದ ಉಂಟಾಗುವ ಸುಖದಂತೆ ಸ್ವಯಂ ಪ್ರಶಂಶೆಯಿಂದ ಆತ್ಮ ಸಂತೃಪ್ತಿ ಪಡೆಯುವ ಧಾರ್ಮಿಕ ವಿದ್ವಾಂಸರ ದಂಡಿನ ನಡುವೆ ಗತಿಸಿ ಹೋದ ಸಾಲಿಹ್ ಉಸ್ತಾದ ರಂತಹ ಸ್ಥಿತ ಪ್ರಜ್ಞರು ಅಪರೂಪವಾಗಿಯಾದರೂ ಇರುವುದು ವ್ಯಾಪಾರೀಕರಣಗೊಂಡ ಧಾರ್ಮಿಕ ಕ್ಷೇತ್ರದಲ್ಲಿ ಭರವಸೆಯ ಬೆಳಕು.

ಸಾಲಿಹ್ ಉಸ್ತಾದರು ಜ್ಞಾನ ದಾಹಿಗಳಾಗಿದ್ದರು. ಅವರ ಓದು ಧಾರ್ಮಿಕ ಕೃತಿಗಳ ಆಚೆಗೂ ವಿಸ್ತರಿಸಿತ್ತು. ಹಲವು ಪುಸ್ತಕಗಳು ಅವರ ಸಂಗ್ರಹದಲ್ಲಿತ್ತು. ಧಾರ್ಮಿಕ ಪುಸ್ತಕಗಳೊಂದಿಗೆ ಚಂದ ಮಾಮ ಬೊಂಬೆ ಮನೆ ಎಂಬ ಆ ಕಾಲದ, ಮಕ್ಕಳ ನೀತಿ ಬೋಧಕ ಮಾಸಿಕಗಳು ಅವರ ಅಚ್ಚು ಮೆಚ್ಚಿನ ಪುಸ್ತಕಗಳಾಗಿದ್ದವು.ಅದರಲ್ಲಿ ಧಾರಾವಾಹಿಯಾಗಿ ಬರುತ್ತಿದ್ದ ಬೇತಾಳನ ಕತೆಗಳು ಮತ್ತು ಅವಳಿ ಮಕ್ಕಳ ಕತೆಗಳನ್ನು ಅವರು ಕತ್ತರಿಸಿ ಬೈಂಡ್ ಮಾಡಿಸಿದ್ದರು. ಚಿಕ್ಕ ವಯಸ್ಸಿನಲ್ಲಿಯೇ ಅವರಿಂದ ಎರವಲು ಪಡೆದು ಒಂದೇ ಬಾರಿಗೆ ಓದುವ ಅವಕಾಶ ನನಗೆ ಲಭಿಸಿತ್ತು. ನನ್ನ ಓದಿನ ಹವ್ಯಾಸದಲ್ಲಿ ಉಸ್ತಾದರಿಂದ ಎರವಲು ಪಡೆದ ಇತರ ಪುಸ್ತಕಗಳು ಪ್ರಾಥಮಿಕ ಶಾಲೆಯ ಜಯಂತಿ ಟೀಚರ್ ರವರ ಪಾಠ ಹಾಗು ಪ್ರೌಢ ಶಾಲೆಯಲ್ಲಿ ಬಾಸ್ಕರ ಉಡುಪ ಅವರ ಕಾವ್ಯ ವಿವರಣೆ ಪ್ರಮುಖ ಪಾತ್ರ ವಹಿಸಿದೆ. ಮುಂದೆ ಈ ಓದು ನನ್ನ ಬರವಣಿಗೆಗೂ ನಾಂದಿಯಾಯಿತು.

ಉಸ್ತಾದರು ನನ್ನ ನೆರೆಹೊರೆಯವರಾಗಿದ್ದರು. ಇಸ್ಲಾಮ್ ಧರ್ಮವು ನೆರೆಹೊರೆಯವರ ಮೇಲೆ ಅರ್ಪಿಸಿದ ಭಾದ್ಯತೆಗಳನ್ನು ಅವರು ಚೆನ್ನಾಗಿ ನಿರ್ವಹಿಸಿದ್ದರು. ಬಡತನದಲ್ಲಿದ್ದ ಉಸ್ತಾದರಿಗೆ ಜಮಾತ್ ಆಡಳಿತ ಸಮಿತಿ ಕೊಡುವ ವೇತನವೇ ಜೀವನಾಧಾರವಾಗಿತ್ತು. ಆ ಸೀಮಿತ ವೇತನದ ಚೌಕಟ್ಟಿನಲ್ಲಿ ತನ್ನ ಎಂಟು ಮಕ್ಕಳನ್ನೊಳಗೊಂಡ ತುಂಬು ಸಂಸಾರದ ಅನ್ನ, ಬಟ್ಟೆ ಬರೆ, ಶಿಕ್ಷಣ ಖರ್ಚನ್ನು ಹೊಂದಿಸಬೇಕಿತ್ತು. ತಮ್ಮ ಕಷ್ಟ ಇನ್ನೊಬ್ಬರಿಗೆ ಗೊತ್ತಾಗದಂತೆ ಸ್ವಾಭಿಮಾನದಿಂದ ಜೀವಿಸಿದ್ದರು.

ಕ್ರೀಡೆಗೆ ಪ್ರೋತ್ಸಾಹಿಸುತ್ತಿದ್ದ ಉಸ್ತಾದರಿಗೆ ಕುಟ್ಟಿ ದೊಣ್ಣೆ ಮತ್ತು ಗೋಲಿಯಾಟವೆಂದರೆ ಅಲರ್ಜಿ. ಈ ಆಟದಲ್ಲಿ ನಿರತರಾದ ಮಕ್ಕಳು ಉಸ್ತಾದರನ್ನು ಕಂಡೊಡನೆಯೇ ಬಚ್ಚಿಟ್ಟುಕೊಳ್ಳುತ್ತಿದ್ದರು. ಇಂತವರಿಗೆ ಮದ್ರಸಾದಲ್ಲಿ ಪೆಟ್ಟು ಖಾತ್ರಿಯಾಗಿತ್ತು. ಪ್ರಾಯಶ ದೊಣ್ಣೆಯಿಂದ ಕುಟ್ಟಿ ಹೊಡೆಯುವಾಗ ಕಣ್ಣಿಗೆ ತಾಗುವ ಅಪಾಯ ಹಾಗು ಗೋಲಿಯಾಟದಿಂದ ಮೈ ಕೈಗಳಿಗೆ ಮಣ್ಣು ಮೆತ್ತಿ ಕೆಸರಾಗುವುದರಿಂದ ಉಸ್ತಾದರು ಈ ಎರಡು ಆಟಗಳನ್ನು ವಿರೋಧಿಸುತ್ತಿದ್ದರು ಎಂದೆನಿಸುತ್ತದೆ.

ಉಸ್ತಾದರು ವಿಶಾಲ ಮನೋಭಾವದ ವ್ಯಕ್ತಿಯಾಗಿದ್ದರು. ತಾವು ಖತೀಬರಾಗಿದ್ದ ಜಮಾತಿನಲ್ಲಿ ಜಮಾಅತೆ ಇಸ್ಲಾಮಿಯ ಮುಖವಾಣಿ ಸನ್ಮಾರ್ಗದ ಸಂಪಾದಕರೊಂದಿಗೆ ಈದ್ ಮಿಲಾದ್ ವೇದಿಕೆಯನ್ನು ಹಂಚಿ ಕೊಳ್ಳುವಂತಹ ಹೃದಯ ವೈಶಾಲ್ಯತೆ ಅವರಲ್ಲಿತ್ತು. ಮೊದಲು ಸನ್ಮಾರ್ಗ ಓದುತ್ತಿದ್ದ ನನ್ನಂತವರನ್ನು ಉಸ್ತಾದರು 'ಲಾಲ್ ಮುಲಿಲ್ಲ (ಸ್ವಯಂ ಪಥಭ್ರಷ್ಟರು ಮತ್ತು ಇತರರನ್ನು ಪಥಭ್ರಷ್ಟಗೊಳಿಸುವವರು )ಎಂದು ಕರೆದರೂ ಕ್ರಮೇಣ ಮೌನ ತಾಳಿದ್ದರು. ಆಗ ತಿಂಗಳು ಎರಡು ತಿಂಗಳಿಗೊಮ್ಮೆ ಬರುತ್ತಿದ್ದ ಮತ್ತು ಎಲ್ಲರಿಗೂ ಕ್ಲಪ್ತ ಸಮಯದಲ್ಲಿ ತಲುಪದಿದ್ದಂತಹ ತವ ನಿಧಿ ಅಲ್ ಮಿಫ್ತಾಹ್ ಪತ್ರಿಕೆಗಳನ್ನು ಬಿಟ್ಟರೆ ಬೇರೆ ಪತ್ರಿಕೆಗಳಿರಲಿಲ್ಲ.

ಸಾಲಿಹ್ ಉಸ್ತಾದರು ಕೇವಲ ಪುಸ್ತಕಗಳನ್ನೂ ಅಧ್ಯಯನ ಮಾಡುತ್ತಿದ್ದುದಲ್ಲದೆ ಸೃಜನ ಶೀಲತೆಯನ್ನು ಮೈಗೂಡಿಸಿ ಕೊಂಡಿದ್ದರು ಅವರು ಬರೆದ ಹಲವು ಇಸ್ಲಾಮಿಕ್ ಕೃತಿಗಳು ಮತ್ತು ರಚಿಸಿದ ಪದ್ಯಗಳು

ಅವರ ಸೃಜನ ಶೀಲತೆಗೆ ಸಾಕ್ಷಿಯಾಗಿದೆ. ಮಣಿ ಮುತ್ತು ಮದು ವರ್ನ ಪೂವಲ್ಲೇ.., ನಿಕಾಬೆ ರುಕ್.., ಮುಸ್ಲಿಂರೊ ಕಂಡೆನ್ಸ್ಗ ಚೆಲ್ಲೋರು ಸಲಾಂ..., ಝುಬ್ವಮೆ ನವ್ವರದೆ ಖರೂ..., ಮುಂತಾದ ಬ್ಯಾರಿ ಉರ್ದು ಮಲಯಾಳಂ ಕನ್ನಡ ಕವಿತೆಗಳು ಅವರಿಂದ ವಿರಚಿತಗೊಂಡಿದ್ದವು. ಈ ಕವಿತೆಗಳು ನಮ್ಮ ದರ್ಸ್ ಕಾಲದ ಬಾಲ್ಯದ ಜೀವನವನ್ನು ನೆನಪಿಸುತ್ತದೆ.

ಉಸ್ತಾದರು ಬಡವ ಬಲ್ಲಿದನೆಂಬ ತಾರತಮ್ಯವಿಲ್ಲದೆ ಎಲ್ಲರೊಡನೆ ಸಮಾನವಾಗಿ ಬೆರೆಯಬಲ್ಲವರಾಗಿದ್ದರು. ಎಲ್ಲಿ ಕಂಡರೂ ಸುಂದರ ಮುಗುಳ್ನಗೆಯೊಂದಿಗೆ ಮಾತು ಆರಂಭಿಸುವುದು ಅವರ ರೂಢಿ. ಮದ್ರಸಾ ವಿದ್ಯಾರ್ಥಿಗಳಿಗೆ ಕಲಿಸುವುದಕ್ಕೆ ತನ್ನ ಕರ್ತವ್ಯ ಮುಗಿಯಿತೆಂದು ಬಗೆಯದೆ, ಸ್ವಯಂ ಪ್ರೇರಿತರಾಗಿ ವಯಸ್ಕರಿಗೂ ಇಸ್ಲಾಮಿಕ್ ಶಿಕ್ಷಣವನ್ನು ನೀಡುತ್ತಿದ್ದರು. ಜೊತೆಗೆ ಪ್ರಾಯಕ್ಕೆ ಬಂದ ಯುವತಿಯರಿಗೆ ಪ್ರತ್ಯೇಕ ತರಗತಿಗಳನ್ನು ಏರ್ಪಡಿಸಿ, ಧಾರ್ಮಿಕ ಭೋದನೆ ಮಾಡುತ್ತಿದ್ದರು. ಎಲ್ಲಿಯೂ ತಮ್ಮ ಸಚ್ಚಾರಿತ್ಯಕ್ಕೆ ಭಂಗ ತಂದವರಲ್ಲ. ಇಂದಿನ ದಿನಗಳಲ್ಲಿ ಇದು ಸಾಧ್ಯವೇ ಎಂಬ ಪ್ರಶ್ನೆಯನ್ನು ಮುಂದಿಟ್ಟಾಗಲೇ ಮುಸ್ಲಿಂ ಸಮುದಾಯಕ್ಕೆ ಎಲ್ಲವೂ ಅರ್ಥವಾಗುದರಿಂದ ವಿವರಣೆ ಅನಗತ್ಯ. ಉಸ್ತಾದರ ಬಗ್ಗೆ ಮನಸ್ಸಿನಲ್ಲಿ ಅಚ್ಚು ಒತ್ತಿರುವ ಎಲ್ಲಾ ವಿಷಯಗಳಿಗೆ ಅಕ್ಷರ ರೂಪ ನೀಡುವುದು ಪುಟಗಳ ಮಿತಿಯಿಂದ ದುಸ್ತರ. ನಾವೆಲ್ಲಾ ಇಷ್ಟ ಪಡುತ್ತಿದ್ದ, ಪ್ರೀತಿಸುತ್ತಿದ್ದ ಉಸ್ತಾದರು ನಮ್ಮನ್ನಗಲಿ ಇಪ್ಪತ್ತೈದು ಸಂವತ್ಸರಗಳು ಕಳೆದರೂ ಆ ವ್ಯಕ್ತಿತ್ವ ಇಹದ ನಡಿಗೆಯಲ್ಲಿ ಕ್ರಮಿಸಿದ ಸತ್ಪಥ ಇಂದಿಗೂ ನಮಗೆ ಮಾರ್ಗದರ್ಶಿಯಾಗಿದೆ. ಅಲ್ಲಾಹನು ಅವರನ್ನು ತನ್ನ ಅಪ್ಪೆಷ್ಟ ದಾಸರ ಸಾಲಿನಲ್ಲಿ ಸೇರಿಸಿ ಅನುಗ್ರಹಿಸಲಿ ಆಮೀನ್.

### ಪ್ರವಾದಿ ವಚನ

ಪ್ರವಾದಿ (ಸ.ಅ) ಹೇಳಿದರು; 'ನಿಮ್ಮ ಸಹೋದರನಿಗೆ ನೆರವಾಗಿರಿ. ಅವನು ಅಕ್ರಮಿಯಾಗಿರಲಿ, ಮರ್ದಿತನಾಗಿರಲಿ. ಒಬ್ಬ ವ್ಯಕ್ತಿ ಕೇಳಿದರು ಮರ್ದಿತನಿಗೆ ಸಹಾಯ ಮಾಡಬಹುದು ಆದರೆ ಆತನು ಅಕ್ರಮಿಯಾದರೆ ಹೇಗೆ ನೆರವಾಗುವುದು? ಪ್ರವಾದಿ (ಸ.ಅ) ಹೇಳಿದರು. ನೀನು ಅವನನ್ನು ಅಕ್ರಮದಿಂದ ತಡೆಯುವುದು ಅವನಿಗೆ ಮಾಡುವ ಸಹಾಯ.

# ಬೆಲಿಯೊ ಉಸ್ತಾದ್ ಮರೆಯಲಾಗದ ವ್ಯಕ್ತಿತ್ವ

ಪಿ.ಎ. ಮಯ್ಯದ್ದಿ
ಶಂಸುದ್ದೀನ್ ಮಂಝಿಲ್, ಪಿ.ಕೆ. ಫ್ಯಾಮಿಲಿ, ಕಾಟಿಪಳ್ಳ,

ನನ್ನ ಉಸ್ತಾದ್ ಮರ್ಹೂಮ್ ಹಾಜಿ. ಎಮ್. ಮುಹಮ್ಮದ್ ಸ್ವಾಲಿಹ್ (ಬೆಲಿಯೊ ಉಸ್ತಾದ್) ರವರು ವಫಾತ್ ಆದ ಇಪ್ಪತ್ತೈದು (25) ವರ್ಷಗಳ ನಂತರ ಅವರ ನೆನಪು ಮಾಡಿ ಕೊಳ್ಳುವುದು ನನ್ನ ಅನಿಸಿಕೆ ಪ್ರಕಾರ ತುಂಬಾ ತಡವಾದರೂ, ಶ್ಲಾಘನೀಯ ಕಾರ್ಯ.

ಕಾಟಿಪಳ್ಳ ಜಮಾಅತ್‌ನ ಪ್ರತಿಯೊಂದು ಮನೆಯಲ್ಲಿ ಇಂದು ಇಸ್ಲಾಮಿನ ಕಂಪು ಹರಡುವಲ್ಲಿ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ 'ಬೆಲಿಯೊ ಉಸ್ತಾದ್' ರವರ ಪಾತ್ರವಿದೆ. ಒಂದೋ ಮನೆಯಲ್ಲಿರುವ ಸದಸ್ಯರಲ್ಲಿ ಹಲವರು ನೇರವಾಗಿ 'ಬೆಲಿಯೊ ಉಸ್ತಾದ್' ರವರಿಂದ ಧಾರ್ಮಿಕ ಶಿಕ್ಷಣ ಪಡೆದವರು ಅಥವಾ ಪಡೆದವರ ಮಕ್ಕಳಾಗಿರುವರು. 'ಬೆಲಿಯೊ ಉಸ್ತಾದ್' ರವರಿಂದ ಶಿಕ್ಷಣ ಪಡೆದವರು ಅದರಿಂದ ಪ್ರೇರಿತರಾಗಿ ತಮ್ಮ ಮಕ್ಕಳಿಗೂ ಧಾರ್ಮಿಕ ವಿದ್ಯೆ ನೀಡುವಾಗ ಪರೋಕ್ಷವಾಗಿ ಅದು 'ಬೆಲಿಯೊ ಉಸ್ತಾದ್' ರವರ ಕೊಡುಗೆಯೇ ಆಗುತ್ತದೆ. ಇಸ್ಲಾಮಿನ ಪ್ರಕಾರ ಒಬ್ಬನು ಒಂದು ಒಳಿತು ಮಾಡಿದರೆ, ಆ ಒಳಿತು ಎಷ್ಟು ತಲೆಮಾರಿನ ತನಕ ನೆಲೆ ನಿಲ್ಲುವುದೋ ಅಲ್ಲಿಯ ತನಕ ಅದನ್ನು ಆರಂಭಿಸಿದವರಿಗೆ ಪ್ರತಿಫಲ ಲಭ್ಯವಾಗುತ್ತಲೇ ಇರುತ್ತದೆ. ಈ ಅರ್ಥದಲ್ಲಿ 'ಬೆಲಿಯೊ ಉಸ್ತಾದ್' ರವರ ಧಾರ್ಮಿಕ ಸೇವೆ ನಿರಂತರ ಪ್ರತಿ ಫಲಾರ್ಹವಾಗಿದೆ.

'ಬೆಲಿಯೊ ಉಸ್ತಾದ್' ರವರು ಸರಳ ಸಜ್ಜನಿಕೆಯ ಸಾಕಾರಮೂರ್ತಿಯಾಗಿದ್ದರು. ಅವರು ಎಂದೂ ಇತರರ ಮನ ನೋಯಿಸಿದವರಲ್ಲ. ಅಂದಿನ ದಿನಗಳಲ್ಲಿ ಲಭ್ಯವಾಗುತ್ತಿದ್ದ ಸೀಮಿತ ವೇತನದಲ್ಲಿ ಸಂತೃಪ್ತ ಕುಟುಂಬ ಜೀವನ ನಡೆಸಿರುವುದು ಇದ್ದುದರಲ್ಲಿ ತೃಪ್ತಿಪಡುವ ಮುಅಮಿನ್ ಸ್ವಭಾವದ ಪ್ರತ್ಯಕ್ಷ ದರ್ಶನವಾಗಿತ್ತು. ಇಂದಿನ ಬಹುತೇಕ ಮತಪಂಡಿತರುಗಳ



ಜೀವನಶೈಲಿಯೊಂದಿಗೆ 'ಬೆಲಿಯೊ ಉಸ್ತಾದ್'ರಂತಹ ಸಾತ್ವಿಕ ಮನುಷ್ಯರ ಜೀವನ ಕ್ರಮವನ್ನು ಹೋಲಿಸಿದರೆ ಅದರ ನಡುವಿನ ವ್ಯತ್ಯಾಸ ಮೇಲ್ನೋಟಕ್ಕೇ ಗ್ರಾಹ್ಯವಾಗುವುದರಲ್ಲಿ ಅನುಮಾನವಿಲ್ಲ.

'ಬೆಲಿಯೊ ಉಸ್ತಾದ್' ರಂತಹ ಸಜ್ಜನ ಧರ್ಮಗುರುಗಳು ಕಾಪಾಡಿಕೊಂಡು ಬಂದಿದ್ದ ಪ್ರಾಮಾಣಿಕತೆ, ಸತ್ಯಸಂಧತೆ, ಕರ್ತವ್ಯ ನಿರ್ವಹಣೆಯಲ್ಲಿನ ಬದ್ಧತೆ, ಎಲ್ಲಕ್ಕಿಂತ ಮುಖ್ಯವಾಗಿ ಅವರಲ್ಲಿದ್ದ ನಿಷ್ಕಳಂಕತೆ (ಇಖ್ಲಾಸ್)ಯಿಂದಾಗಿ ಅವರು ಜನ ಸಾಮಾನ್ಯರು ಹಾಗೂ ವಿದ್ಯಾರ್ಥಿಗಳಿಂದ ಆತ್ಮಾರ್ಥವಾದ ಗೌರವ ಪಡೆಯುತ್ತಿದ್ದರು. ಆದರೆ, ಇಂದು ಧಾರ್ಮಿಕ ವಿದ್ವಾಂಸರೆಂದು ಗುರುತಿಸಲ್ಪಡುವ ಹೆಚ್ಚಿನವರಿಗೆ ಈ ಗೌರವ -ಮನ್ನಣೆಗಳು ಆತ್ಮಾರ್ಥವಾಗಿ ಲಭಿಸುತ್ತಿದೆಯೇ ಅಥವಾ ಕೃತಕವಾಗಿ (ಆರ್ಟಿಫಿಶಿಯಲಾಗಿ) ಲಭಿಸುತ್ತಿದೆಯೇ ಎಂಬ ಪ್ರಶ್ನೆಯನ್ನು ಕೇಳಬೇಕಾದ ವಾತಾವರಣ ನಿರ್ಮಾಣವಾಗಿರುವುದು ದುರಂತವೆನ್ನಬೇಕು.

'ಬೆಲಿಯೊ ಉಸ್ತಾದ್'ರವರು ಜಮಾತಿನ ಖತೀಬರಾಗಿದ್ದ ಅವಧಿಯಲ್ಲಿ ಬೇಧ ಭಾವವಿಲ್ಲದೆ ಎಲ್ಲರನ್ನು ಸಮಾನರಾಗಿ ಕಾಣುವ ಮಾನವೀಯ ಸಂವೇದನೆಯನ್ನು ಮೈಗೂಡಿಸಿಕೊಂಡವರಾಗಿದ್ದರು. ಪ್ರತಿಯೊಂದರಲ್ಲೂ ಸರಳತೆಯನ್ನು ಪಾಲಿಸುತ್ತಿದ್ದ ಬೆಲಿಯೊ ಉಸ್ತಾದ್‌ರವರು ಯಾವತ್ತೂ ಹಗುರ ಶೈಲಿಯಲ್ಲಿ ಮಾತನಾಡಿದವರಲ್ಲ. ಅವರ ಗಂಭೀರ ಮಾತುಗಾರಿಕೆಯಲ್ಲಿ ಓರ್ವ ಹಿತಾಕಾಂಕ್ಷಿಯ ತುಡಿತವಿತ್ತು. ನಿರಂತರ ಓದು (ಧರ್ಮೇತರ ಸಾಹಿತ್ಯವೂ ಸೇರಿ) ಅವರ ವ್ಯಕ್ತಿತ್ವ ರೂಪಣೆಯಲ್ಲಿ ದಟ್ಟ ಪ್ರಭಾವ ಬೀರಿತ್ತು.

'ಬೆಲಿಯೊ ಉಸ್ತಾದ್' ರವರ ಮತ್ತೊಂದು ವಿಶೇಷತೆ ಏನೆಂದರೆ, ಅವರು ತಮ್ಮ ಜೀವಿತಾದ್ಯಂತ ವಿವಾದಾತೀತ ವ್ಯಕ್ತಿಯಾಗಿದ್ದರು. ಸ್ವಯಂ ಶಿಸ್ತನ್ನು ಅಳವಡಿಸಿಕೊಂಡು ತಮ್ಮ ವಿದ್ಯಾರ್ಥಿಗಳಿಗೂ ಅದನ್ನು ಕಡ್ಡಾಯಗೊಳಿಸಿದ್ದ ಬೆಲಿಯೊ ಉಸ್ತಾದ ರೆಂದರೆ ನಮಗೆಲ್ಲ ಭಯಮಿಶ್ರಿತ ಗೌರವ. ಶಿಷ್ಯರ ನಮಾಝ್ ನ ವಿಷಯದಲ್ಲಿ ಅತ್ಯಂತ ಕಠೋರರಾಗುತ್ತಿದ್ದರು. ಅವರ ಈ ಕಠೋರತೆಯೇ ನಮಾಝನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ನಮಗೆ ಪ್ರೇರಣೆಯಾಯಿತು.

'ಬೆಲಿಯೊ ಉಸ್ತಾದ್'ರವರ ಅವದಿಯಲ್ಲಿ ಗಂಡು ಮತ್ತು ಹೆಣ್ಮಕ್ಕಳ ಸಮ್ಮಿಶ್ರ ಶಿಕ್ಷಣ ಪದ್ಧತಿ ಯುವತಿಯರು ಕೂಡಾ ಶಿಕ್ಷಣ ಪಡೆಯುತ್ತಿದ್ದರು. ಇಂದಿನ ದಿನಮಾನಗಳಲ್ಲಿ ಕೆಲವೊಂದು ಮೊಹಲ್ಲಾಗಳಲ್ಲಿ ಘಟಿಸುತ್ತಿರುವ ಅನಪೇಕ್ಷಿತ ಘಟನೆಗಳ ಹಿನ್ನಲೆಯಲ್ಲಿ 'ಬೆಲಿಯೊ ಉಸ್ತಾದ್' ರವರ ಸಚ್ಚಾರಿತ್ರ್ಯದ ಮಜಲನ್ನು ನಾವು ಅಂದಾಜಿಸ ಬಹುದು.

ಧರ್ಮಸೇವೆ ನೇಪಥ್ಯಕ್ಕೆ ಸರಿದು ಧರ್ಮೋದ್ಯಮ ವಿಜ್ರಂಬಿಸುತ್ತಿರುವ ಇಂದಿನ ದಿನಮಾನಗಳಲ್ಲಿ ನಮಗೆ 'ಬೆಲಿಯೊ ಉಸ್ತಾದ್' ರಂತರ ಪ್ರಾಮಾಣಿಕ ಧರ್ಮಸೇವಕರ ಅಗತ್ಯವಿದೆ. ನನ್ನ ಈ ಹಾರೈಕೆ ಕಾಲಮಾನದ ಯಾನದಲ್ಲಿ ಹಿಮ್ಮುಖ ಚಲನೆಯಂತೆ ದುಸ್ತರವೆನಿಸದೆ, ಭವಿಷ್ಯದಲ್ಲಿ ಸಾಕಾರಗೊಳ್ಳಲಿ ಎಂದು ಪ್ರಾರ್ಥಿಸುತ್ತೇನೆ. ಆಮೀನ್....

ಬೆಲಿಯೊ ಉಸ್ತಾದ್‌ರವರಿಂದ ಶಿಕ್ಷಣ ಪಡೆದ ಅನೇಕರು ಇಂದು ವಿವಿಧ ಕ್ಷೇತ್ರಗಳಲ್ಲಿ ತಮ್ಮ ಹೆಜ್ಜೆ ಗುರುತು ಮೂಡಿಸಿ ಪ್ರಸಿದ್ಧರಾಗಿದ್ದಾರೆ. 'ಬೆಲಿಯೊ ಉಸ್ತಾದ್' ರವರ ಹಲವು ಶಿಷ್ಯರು ಅವರ ಕುರಿತು ತಮ್ಮ ಅನಿಸಿಕೆ, ಅಭಿಪ್ರಾಯ, ಅನುಭವಗಳನ್ನು ಬರೆಯಲಿರುವುದರಿಂದ ಲೇಖನಕ್ಕೆ ಮಿತಿಯ ಚೌಕಟ್ಟನ್ನು ನಿರ್ಮಿಸಿಕೊಳ್ಳುವುದು ಅನಿವಾರ್ಯವಾಗಿದೆ. ಸರ್ವಶಕ್ತನಾದ ಅಲ್ಲಾಹನು 'ಬೆಲಿಯೊ ಉಸ್ತಾದ್' ರವರನ್ನು ತನ್ನ ಅಗ್ರೇಸರ ಸಂಪ್ರೀತ ದಾಸರ ಸಾಲಿನಲ್ಲಿ ಸೇರಿಸಿ ಅನುಗ್ರಹಿಸಲಿ.

ಕವನ

# ನನ್ನ ದರ್ಸ್ ದಾರಿ...

ಪಿ.ಯಂ. ಝೈನುದ್ದೀನ್ ಕಾಟಿಪಳ್ಳ

ದರ್ಸಿಗೆ ಚಕ್ಕರ್ ಹೊಡೆದು
ಅಟ್ಟದಲ್ಲಿ ಅಡಗಿದಾಗ
ಬಂತು ನನ್ನ ಕ್ಲಾಸಿನ ಮಕ್ಕಳ ಸೈನ್ಯ
ನನ್ನ ಹುಡುಕಲು
ನಾನಿನ್ನೂ ಸಿಗಲಿಲ್ಲ ಆಗ...

ಕೇಳಿ ಬಂತು ಉಸ್ತಾದರ ಸ್ವರ
ಝೈನು ಎಲ್ಲಿ ಎಂದಾಗ
ಮನೆಯವರಿಗೂ ತಿಳಿಯಿತು
ನಾ ಅಡಗಿದ ಸ್ಥಳ
ಇಳಿಯದೆ ವಿಧಿಯೆಲ್ಲಿ ಹೇಳಿ?
ಅಟ್ಟದ ಗುಟ್ಟು ಬಹಿರಂಗವಾದಾಗ

ಅಟ್ಟದಲ್ಲಡಗಿದ ನನ್ನೆದೆಯಲ್ಲಿ
ಢವ ಢವ ಬಡಿದಾಟ
ಅಂತೂ ಮನೆಯವರ ಸಹಕಾರ
ನಿಂತಿತು ನನ್ನಾಟ
ನಾನು ಉಸ್ತಾದರ ವಶ...

ಉಸ್ತಾದರ ಬೆತ್ತದ್ದೇ ಕುಣಿದಾಟ
ಉಟ್ಟ ಕೆಳ ಬಟ್ಟೆ ಅದಾಗಲೇ ಒದ್ದೆ,
ಸುತ್ತ ಮಕ್ಕಳೆದುರಲ್ಲಿ
ಉಪ್ಪು ನೀರಿನ ಸುರಿದಾಟ...

ಅನುಭವಿಸಿದ ಬೆತ್ತದ ರುಚಿ
ಇಂದೂ ಮೈ ಕೈ ನೋವ ನೆನಪಿದೆ
ಅಂದು ತಪ್ಪಿಸಿ ಎಡವಿದ್ದೆ
ಇನ್ನೆಂದೂ ತಪ್ಪಲ್ಲವೆಂದು
ಉಸ್ತಾದರಿಗೆ ಸೋತು ಹೋಗಿದ್ದೆ...

ಆಗ ನಾ ಕಲಿತ ಶಿಕ್ಷಣ
ಜೊತೆ ಉಸ್ತಾದರ ಮಾರ್ಗದರ್ಶನ
ನನ್ನ ಬದುಕಲ್ಲಿ ನೆನಪಿಟ್ಟೆ,
ಬೆಲಿಯೊ ಉಸ್ತಾದರ ಆ ಸಿಟ್ಟು
ಅರಿಯುವಾಗ ತಡವಾಗಿತ್ತು
ನನ್ನ ಏಳಿಗೆಯೇ ಅವರ ಗುಟ್ಟು
ಕೊನೆಗೂ ಮನದಟ್ಟಾಗಿತ್ತು...






ಸುನ್ನಿ ಯುವಜನ ಸಂಘ (ಎಸ್‌ವೈಎಸ್) ಇದರ ಕಾರ್ಯಕ್ರಮದ ವೇದಿಕೆಯಲ್ಲಿ ಬೆಲಿಯೊ ಉಸ್ತಾದ್



ಅಬೂಸುಫ್ಯಾನ್ ಇಬ್ರಾಹಿಂ ಮದನಿ, ಹಸನಬ್ಬ ಮಾಸ್ಟರ್, ಮೊಯ್ಯದ್ದಿಯಾಕರವರ ಜೊತೆ ಕಾರ್ಯಕ್ರಮವೊಂದರಲ್ಲಿ ಬೆಲಿಯೊ ಉಸ್ತಾದ್.







ನೂರುಲ್ ಹುದಾ ಶಾಲೆಯ ಕಾರ್ಯಕ್ರಮವೊಂದರಲ್ಲಿ ಬೆಲಿಯೊ ಉಸ್ತಾದ್



ಶಾಲಾ ಕಾರ್ಯಕ್ರಮವೊಂದರಲ್ಲಿ ಬೆಲಿಯೊ ಉಸ್ತಾದ್

ನೂರುಲ್ ಹುದಾ ವೆಲ್ಫೇರ್ ಅಸೋಸಿಯೇಶನ್‌ನ ಕಾರ್ಯಕ್ರಮದ ವೇದಿಕೆಯಲ್ಲಿ ಬೆಲಿಯೊ ಉಸ್ತಾದ್






ವಿದ್ಯಾರ್ಥಿಗೆ ಪುಸ್ತಕ ವಿತರಣೆ ಮಾಡುತ್ತಿರುವ ಬೆಲಿಯೊ ಉಸ್ತಾದ್



ಕಾರ್ಯಕ್ರಮವೊಂದರಲ್ಲಿ ಬೆಲಿಯೊ ಉಸ್ತಾದ್‌ರವರಿಗೆ ಸನ್ಮಾನ



ಮಕ್ಕಳಿಗೆ, ಮಹಿಳೆಯರಿಗೆ, ವಯಸ್ಕರಿಗೆ ಬೆಲಿಯೊ ಉಸ್ತಾದ್ ದರ್ಸ್ ನಡೆಸಿದ ಮದ್ರಸ ಕೊಠಡಿ.



ನೂರುಲ್ ಹುದಾ ಹೆಣ್ಮಕ್ಕಳ ಪ್ರೌಢ ಶಾಲೆಯ ಕಾರ್ಯಕ್ರಮವೊಂದರಲ್ಲಿ
ಬೆಲಿಯೊ ಉಸ್ತಾದ್‌ರಿಂದ ಪ್ರಾರ್ಥನೆ....




ನೂರುಲ್ ಹುದಾ ವೆಲ್ಫೇರ್ ಅಸೋಸಿಯೇಶನ್‌ನ ನೂತನ ಕಟ್ಟಡ ಮತ್ತು ಹೊಲಿಗೆ
ತರಬೇತಿ ಕೇಂದ್ರದ ಉದ್ಘಾಟನಾ ಸಮಾರಂಭದಲ್ಲಿ ಬೆಲಿಯೊ ಉಸ್ತಾದ್

ಕಾರ್ಯಕ್ರಮವೊಂದರಲ್ಲಿ
ಭಾಷಣ ಮಾಡುತ್ತಿರುವ
ಬೆಲಿಯೊ ಉಸ್ತಾದ್





# ಸೌಹಾರ್ದತೆಯ ಪ್ರತೀಕ

ಡಾ. ಅರವಿಂದ್ ಭಟ್ ಕಾಟಿಪಳ್ಳ

ಕಾಟಿಪಳ್ಳ ಊರಿನ ದೊಡ್ಡ ಗುರುಗಳೆಂದೇ ಪ್ರಖ್ಯಾತಿ ಪಡೆದ ಶ್ರೀ ಮುಹಮ್ಮದ್ ಸ್ವಾಲಿಹ್ ಗುರುಗಳು ನಾನು ಕಾಟಿಪಳ್ಳದಲ್ಲಿ ಕ್ಲಿನಿಕ್ ತೆರೆದಾಗ ಶುಭಾರಂಭದ ದಿವಸದಂದು ಪ್ರಾರ್ಥನೆ ಮಾಡಿ ನನಗೆ ಶುಭ ಹಾರೈಸಿದ್ದರು. ಅಲ್ಲದೆ ಊರಿನ ಜನತೆಗೆ ತಮ್ಮಿಂದ ಅತ್ಯುತ್ತಮ ಸೇವೆ ಸಿಗುವಂತಾಗಲಿ, ಕಾಟಿಪಳ್ಳದಲ್ಲಿ ನೀವು ಶಾಶ್ವತವಾಗಿ ಒಳ್ಳೆಯ ಹೆಸರು ತರಲು ದೇವನು ಕರುಣಿಸಲಿ ಎಂದು ಪ್ರಾರ್ಥಿಸಿ ಆಶೀರ್ವದಿಸಿದ್ದರು,

ನನ್ನ ದಂತ ವೈದ್ಯಾಲಯವಿರುವ ಕಾಟಿಪಳ್ಳದ ಕೂಗಳತೆಯ ದೂರದಲ್ಲಿ ಇರುವ ವಿಸ್ತಾರವಾದ ಒಂದು ಮಸೀದಿಯಿದ್ದು, ಅದರ ಗುರುಗಳಾಗಿದ್ದ ಇವರನ್ನು ನಾನು ಅತೀ ಗೌರವಿಸುವುದರೊಂದಿಗೆ ಅವರು ನನಗೆ ಮತ್ತು ನಾನು ಅವರಿಗೆ ಆತ್ಮೀಯರಾಗಿದ್ದೆವು.

ಇವರು ಜಾತಿ ಮತ ಬೇಧವಿಲ್ಲದೆ ಎಲ್ಲ ಧರ್ಮ ಭಾಂದವರನ್ನು ಸಮಾನವಾಗಿ ಪ್ರೀತಿಸುತ್ತಾ, ನಾವೆಲ್ಲರೂ ಒಂದೇ ಎಂದು ಹೇಳುತ್ತಾ ಜನರಲ್ಲಿ ಪರಸ್ಪರ ಐಕ್ಯತೆಯನ್ನೂ, ಸಹಬಾಳ್ವೆಯನ್ನು ಬೋಧಿಸುತ್ತಿದ್ದರು. ಅವರ ನಮ್ಮಿಂದಗಲಿ ಇಂದಿಗೆ 25ವರ್ಷವಾದರೂ ಅವರ ನೆನಪು ನನಗಿನ್ನೂ ಇದೆ. ಅವರು ಈ ಊರಿನ ಮರೆಯದ ಮಾಣಿಕ್ಯ. ಸದ್ಯ ಹೊರಬರುತ್ತಿರುವ ಅವರ ನೆನಪಿನ ಪುಸ್ತಕಕ್ಕಾಗಿ ಶುಭವನ್ನು ಕೋರುತ್ತಿದ್ದೇನೆ.





# ಸಾಮರಸ್ಯದ ಸಾರಥಿ ಬೆಲಿಯೊ ಉಸ್ತಾದ್

ಹಾಜಿ ಪಿ.ಬಶೀರ್ ಅಹ್ಮದ್
ಮಾಜಿ ಅಧ್ಯಕ್ಷರು, ಪಣಂಬೂರು ಮುಸ್ಲಿಂ ಜಮಾಅತ್, ಕಾಟಿಪಳ್ಳ

ಮುಹಮ್ಮದ್ ಸ್ವಾಲಿಹ್ ಉಸ್ತಾದ್, ಇವರು ಸುಮಾರು 40 ವರ್ಷ ನಮ್ಮ ಮಸೀದಿ ವ್ಯಾಪ್ತಿಯ ಖತೀಬರಾಗಿ ಪ್ರಾಮಾಣಿಕ, ಅಲ್ಲಾಹನ ನಿಷ್ಠಾವಂತ ದಾಸರಾಗಿ, ಎಲ್ಲರನ್ನೂ ಒಮ್ಮತದಿಂದ ಸೇರಿಸಿ ಮಸೀದಿ ಆಗುಹೋಗುಗಳ ಬಗ್ಗೆ ಚರ್ಚಿಸಿ ನೇತೃತ್ವ ವಹಿಸಿ ಧಾರ್ಮಿಕ ನೇತೃತ್ವನ್ನು ಮುನ್ನಡೆಸುತ್ತಿದ್ದರು.

ಅವರು ಯಾವ ಒಂದು ಐಹಿಕ ಆಕಾಂಕ್ಷಿ ಹೊಂದಿದವರಲ್ಲ. ಜಮಾಅತ್ ಸಮಿತಿ ಸದಸ್ಯರು ಒಟ್ಟಿಗೆ ಅವರೊಟ್ಟಿಗೆ ಹೊಂದಿ ಕೊಂಡು ಸಾಮರಸ್ಯದಿಂದ ನಡೆಯುತ್ತಿದ್ದರು. ಮದ್ರಸದಲ್ಲಿ ಆಗುವ ಚಟುವಟಿಕೆಗಳಲ್ಲಿ ಭಾಗವಹಿಸಿ ಒಳ್ಳೆಯ ಸಲಹೆಗಳನ್ನು ಕೊಡುತ್ತಿದ್ದರು. ಯಾವ ಸಮಸ್ಯೆ ಬಂದರೂ ಅವರಿಂದ ಸಮಸ್ಯೆ ನಿವಾರಣೆ ಆಗುತ್ತಿತ್ತು. ಇವರ ಮಕ್ಕಳು ಜಮಾಅತ್ ನಲ್ಲಿ ಉಸ್ತಾದ್ ಆಗಿ ಸೇವೆ ಸಲ್ಲಿಸುತ್ತಿದ್ದವರು. ಅಲ್ಲದೇ ಇವರ ಮುಂಚೆ ಇವರ ಹಿರಿಯರು ಆಗಿರುವ ಇವರ ಮಾವಯ್ಯ ಆದರಣೀಯ ಪಿ.ಎಂ. ಅಬ್ದುಲ್ ಖಾದರ್ ಮಾಸ್ಟರ್ (ಮುಕ್ರಿಕ) ಹಾಗೂ ಅವರ ಮಾವಯ್ಯ ಪಣಂಬೂರು ಖಾಝಿ ಅಲ್ಲದೆ ಪಣಂಬೂರ್ ಮುಸ್ಲಿಂ ಜಮಾಅತಿನ ಮೊಕ್ತೇಸರರು ಆಗಿದ್ದ ಮೌಲಾನಾ ಝೈನುದ್ದೀನ್ ಯಾನೆ ಇದಿನಬ್ಬ ಹಾಲಿಯಾರ್ ಉಸ್ತಾದ್ ಗಳಾಗಿದ್ದರು.

ಅಕ್ಷರಾಭ್ಯಾಸ ವಿರಳವಾಗಿದ್ದ ಆ ಕಾಲದಲ್ಲಿ ಬಹು ಭಾಷೆಯಲ್ಲಿ ಜನರಿಗೆ ಉಪದೇಶವನ್ನು ನೀಡುತ್ತಿದ್ದರು. ಉರ್ದು ಭಾಷೆಯಲ್ಲಿ ನಿರರ್ಗಳವಾಗಿ ಭಾಷಣ ಮಾಡುತ್ತಿದ್ದ ಅವರು ಉರ್ದು ಶಾಯಿರಿಗಳನ್ನು ಸ್ವತಃ ರಚಿಸಿ ಹಾಡುತ್ತಿದ್ದರು.

ತಂದೆ- ತಾಯಿಯವರ ನಿರಂತರ ಪ್ರೋತ್ಸಾಹದಿಂದ, ಶಾಲೆ ಮತ್ತು ಮದ್ರಸದ ಅಧ್ಯಾಪಕರ ನಿರ್ದೇಶನದಲ್ಲಿ ಬೆಳೆದವರು.

ತನ್ನ ಕೆಲಸದ ಬಗ್ಗೆ ಮಾತನಾಡುವಾಗ ಅಲ್ಲಾಹನು ತನಗೆ ನೀಡಿದ ಮಹಾ ಸೌಭಾಗ್ಯ ಮತ್ತು ಈ ಮೂಲಕ ತನಗೆ ದೊರೆತ ಅನುಗ್ರಹಗಳನ್ನು ನೆನೆದು ಸಂತೋಷ ಪಡುತ್ತಿದ್ದರು.

ಅವರು ಇಮಾಮ್ ಆಗಿರುವ ಸಂದರ್ಭದಲ್ಲಿ ಆಗಿನ ಆಡಳಿತ ಸಮಿತಿಯೊಂದಿಗೆ ಮಸೀದಿ ನವೀಕರಣದ ಆಕಾಂಕ್ಷೆ ಇಟ್ಟಿದ್ದು ಅಲ್ಲಾಹನು ಅದನ್ನು ಪೂರ್ತಿ ಮಾಡಿ ಕೊಟ್ಟಿರುವನು.

(ಅಲ್ ಹಂದುಲಿಲ್ಲಾಹಿ ರಬ್ಬಿಲ್ ಆಲಮೀನ್.)

ಯಾವ ಧರ್ಮದವರೇ ಆಗಿರಲಿ ಇನ್ನೊಂದು ಧರ್ಮದ ಮೇಲೆ ಅನ್ಯಾಯ ಎಸಗುವಿಕೆ, ಅಪಪ್ರಚಾರ ಮಾಡುವುದನ್ನು ಯಾವತ್ತೂ ಸಹಿಸದ ಅವರು, ಕಠೋರವಾಗಿ ಖಂಡಿಸುತ್ತಿದ್ದರು.

ಈಗಲೂ ಗುರುಗಳನ್ನು ಜಮಾಅತ್‌ನವರು ಹಾಗೂ ಆಸುಪಾಸಿನವರು ಸ್ಮರಿಸುತ್ತಲೇ ಇದ್ದಾರೆ.

### ಪ್ರವಾದಿ ವಚನ

ಪ್ರವಾದಿ (ಸ.ಅ) ಹೇಳಿದರು; ಜನರೇ!. ಕೇಳಿರಿ. ನಿಮ್ಮ ಪ್ರಭು ಒಬ್ಬನೆ. ನಿಮ್ಮ ತಂದೆಯೂ ಒಬ್ಬರೆ. ಅರಬನಿಗೆ ಅರಬೇತರನಿಗಿಂತ ಮತ್ತು ಅರಬೇತರನಿಗೆ ಅರಬನಿಗಿಂತ ಯಾವುದೇ ಶ್ರೇಷ್ಠತೆಯಿಲ್ಲ. ಬಿಳಿಯನಿಗೆ ಕರಿಯನ ಮೇಲೆ ಮತ್ತು ಕರಿಯನಿಗೆ ಬಿಳಿಯನ ಮೇಲೆ ಯಾವುದೇ ಮೇಲ್ಮೆಯಿಲ್ಲ. ತಖ್ವಾ ಅಥವಾ ದೇವ ಭಯದ ಹೊರತು.

## ಸಂದರ್ಶನ

*ಪಿ. ಎಚ್ ಇದ್ದಿನಬ್ಬ (ಬೀಡ್ರಾಕ)ರವರು ಬೆಲಿಯೊ ಉಸ್ತಾದರನ್ನು ಹತ್ತಿರದಿಂದ ಕಂಡವರು, ಅವರನ್ನು ಈ ಕೃತಿಗಾಗಿ ಸಂದರ್ಶಿಸಿದಾಗ ಉಸ್ತಾದರ ನೆನಪನ್ನು ಸಾಧ್ಯವಾದಷ್ಟು ನನ್ನೊಂದಿಗೆ ಹಂಚಿಕೊಂಡರು, ಆ ಸಂದರ್ಶನದ ಭಾಗವನ್ನು ಇಲ್ಲಿ ಲೇಖನದ ರೂಪ ನೀಡಿದ್ದೇನೆ.*

*–ಅನ್ಸಾರ್ ಕಾಟಿಪಳ್ಳ)*

# ತನ್ನ ಜವಾಬ್ದಾರಿಗೆ ಪ್ರಥಮ ಆದ್ಯತೆ ನೀಡುತ್ತಿದ್ದ ಖತೀಬ್

**ಪಿ. ಎಚ್. ಇದ್ದಿನಬ್ಬ**
ಮಾಜಿ ಕೋಶಾಧಿಕಾರಿ, ಪಣಂಬೂರು ಮುಸ್ಲಿಂ ಜಮಾಅತ್

ಅವರ ಬಗ್ಗೆ ಹೇಳಲು ಅತ್ಯುತ್ತಮವಲ್ಲದೆ ತುಂಡು ಕೊರತೆಯ ಒಂದು ಗೆರೆಗಳೂ ಕೂಡ ನನ್ನಲ್ಲಿಲ್ಲ, ತನಗೆ ನೀಡಿದ ಜವಾಬ್ದಾರಿಯ ಸಮಯದಲ್ಲಿ ತನ್ನ ವೈಯ್ಯುಕ್ತಿಕ ಕೆಲಸವನ್ನು ಅವರು ಎಂದೂ ಮಾಡುತ್ತಿರಲಿಲ್ಲ, ತನಗೆ ನೀಡಿದ ಜವಾಬ್ದಾರಿಗಿಂತ ಮಿಗಿಲಾಗಿ ಊರಿನ ಏಳಿಗೆಯಲ್ಲಿ ಅವರ ಪಾತ್ರ ಇದ್ದೇ ಇದೆ. ಅಂದಿನ ಕಾಟಿಪಳ್ಳಕ್ಕೂ ಇಂದಿನ ಕಾಟಿಪಳ್ಳಕ್ಕೂ ಅಜಗಜಾಂತರ ವ್ಯತ್ಯಾಸವಿದೆ, ಬೀಡಿ ಕಟ್ಟಿ ಸಂಸಾರ ತೂಗುತ್ತಿದ್ದ ಬಹುಪಾಲು ದಿನಚರಿಗಳಿಂದು ತೃಪ್ತಿದಾಯಕ ಹಂತಕ್ಕೆ ಬಂದು ಮುಟ್ಟಿದೆಯೆಂದರೆ ಅದಕ್ಕೆ ಬಹುಮುಖ್ಯ ಕಾರಣ ವಿದ್ಯೆಗೆ ಕೊಟ್ಟ ಪ್ರೋತ್ಸಾಹ.

ಉಸ್ತಾದರು ತನ್ನ ಜಮಾಅತಿನ ವಿದ್ಯಾರ್ಥಿಗಳಿಗೆ ಧಾರ್ಮಿಕ ವಿದ್ಯಾಭ್ಯಾಸಕ್ಕೆ ಒತ್ತು ಕೊಡುವುದರ ಜೊತೆಗೆ ಕಾಲದ ಬೇಡಿಕೆಯಂತೆ ಶಾಲಾ ಶಿಕ್ಷಣಕ್ಕೆ ಪ್ರಾಮುಖ್ಯ ನೀಡಿ ವಿದ್ಯಾರ್ಥಿಗಳನ್ನೂ ಪೋಷಕರನ್ನೂ ಹುರಿದುಂಬಿಸುತ್ತಿದ್ದರು, ವಾರಕ್ಕೊಮ್ಮೆಯಾದರೂ ಊರಿನ ಸರಕಾರಿ ಶಾಲೆಗೆ ಭೇಟಿ ನೀಡುತ್ತಿದ್ದು ಶಾಲೆಯ ಶಿಕ್ಷಕರ ಜೊತೆ ಮಕ್ಕಳ ಕಲಿಕೆಯ ಬಗ್ಗೆ ವಿಚಾರಿಸುತ್ತಿದ್ದರು. ಒಂದು ವೇಳೆ ಶಿಕ್ಷಕರ ಬಳಿಯಿಂದ ಯಾವುದಾದರೂ ಮಕ್ಕಳ ಬಗ್ಗೆ ದೂರು ಬಂದಲ್ಲಿ ಅವರ ಪೋಷಕರನ್ನು ಕರೆದು ಚರ್ಚಿಸಿದ್ದೂ ನನಗೆ ನೆನಪಿದೆ, ಇದು ಉಸ್ತಾದರ ಶ್ರೇಷ್ಟ ಕಾರ್ಯ ವೈಖರಿಗಳಲ್ಲೊಂದು.



ಮನಸ್ಸಿನಲ್ಲಿ ಏನಾದರೂ ಬೇಜಾರು ನೋವುಗಳಿದ್ದರೆ ಅಲ್ಪ ಹೊತ್ತು ಖತೀಬರ (ಬೆಲಿಯೊ ಉಸ್ತಾದ್) ಜೊತೆ ಕುಳಿತುಕೊಂಡರೂ ಸಾಕು, ತಿರುಗಿ ಬರುವಾಗ ಅದೇನೋ ಉಲ್ಲಾಸ, ಅಲ್ ಹಂದುಲಿಲ್ಲಾಹ್, ಅವರ ಜೀವನದ ದಾರಿಯನ್ನು ಒಂದು ಪುಸ್ತಕದ ರೂಪದಲ್ಲಿ ಅವರ ನೆನಪುಗಳನ್ನು ಬರೆದು ಓದಿದರಷ್ಟೇ ಸಾಲದು, ಅವರ ನಡೆದ ರೀತಿ ನೀತಿಯನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ನಮಗೆಲ್ಲರಿಗೂ ಸಾಧ್ಯವಾಗಬೇಕು, ಅವರ ಬಗ್ಗೆ ಹೇಳಲು ನನ್ನಲ್ಲಿರುವಷ್ಟು ವಿಷಯ ಸದ್ಯ ಯಾರಲ್ಲೂ ಇರಲಿಕ್ಕಿಲ್ಲ, ಆದರೆ ಇದೀಗ ವಯಸ್ಸಿನ ಬೇರುಗಳು ಕ್ಷೀಣವಾಗಿ ನೆನಪುಗಳೆಲ್ಲವೂ ಬತ್ತಿ ಹೋಗಿದೆ, ಈ ಪುಸ್ತಕವನ್ನು ಹೊರತರಲು ತುಂಬಾ ತಡಮಾಡಿದಿರಿ. ಅವರ ಜೊತೆಗಿದ್ದ ಬಹುತೇಕ ಜೊತೆಗಾರರು ಇಂದು ಅವರ ಜೊತೆ ಅಲ್ಲಾಹನ ಬಳಿ ಒಂದಾಗಿದ್ದಾರೆ, ಇದೀಗ ತಡವಾಗಿಯಾದರೂ ಈ ಪುಸ್ತಕದ ಮುಖಾಂತರ ಅದು ಸಾಧ್ಯವಾಗಲೆಂದು ಹಾರೈಸುತ್ತೇನೆ.

ಅದೊಂದು ದಿನ ಮಂಗಳೂರಿನ ಬೆಂಗರೆ (ಮುಂಡ)ಯಲ್ಲಿ ನಡೆದ ನನ್ನ ಕುಟುಂಬದ ಮದುವೆಗೆ ಬಂದು ನಿಖಾಹ್ ಮಾಡಿ ಆಗಲೇ ಹೊರಡಲನುವಾದರು, ಅದಕ್ಕೆ ಅವರು ನೀಡಿದ ಕಾರಣ ಳುಹರ್ ನಮಾಝಿಗೆ ಕಾಟಿಪಳ್ಳಕ್ಕೆ ಹೋಗಿ ಮುಟ್ಟಬೇಕೆಂದು, ನನಗೆ ಆಗ ಏನು ಹೇಳಬೇಕೆಂದೇ ತೋಚಲಿಲ್ಲ, ಈ ಒಂದು ಸತ್ಯ ಘಟನೆಯಲ್ಲಿ ನನಗೆ ಕಂಡದ್ದು ಅವರ ಬದ್ಧತೆ, ಅವರು ಎಲ್ಲಿದ್ದರೂ ಅವರ ಮನಸ್ಸೆಲ್ಲವೂ ತನಗೆ ನೀಡಿದ ಜವಾಬ್ದಾರಿಯಲ್ಲಿಯೇ ಇರುತ್ತಿತ್ತು. ಅವರು ಮೂವತ್ತು ದಿವಸದಲ್ಲಿ ಮೂವತ್ತು ದಿವಸವೂ ಕೆಲಸ ಮಾಡಿದ್ದಾರೆ. ನನಗೆ ನೀಡಿದ ಖಜಾಂಜಿಯ ಉಸ್ತುವಾರಿಯಲ್ಲಿ ರಜೆಯ ಕಾರಣಗಳಿಂದ ರಜಾದಿನಗಳ ಸಂಬಳವನ್ನು ಕಡಿತಗೊಳಿಸಿದ ಅದೆಷ್ಟೋ ಉದಾಹರಣೆಯಿದೆಯಾದರೂ ಮುಹಮ್ಮದ್ ಸ್ವಾಲಿಹ್‌ರವರ ಸಂಬಳ ಕಡಿತ ಮಾಡುವ ಅವಕಾಶವೇ ಸಿಕ್ಕಿಲ್ಲ, ಅಂದರೆ ನಿಮಗದು ಅರ್ಥವಾಗಬಹುದು.

ಕಮಿಟಿಯ ತೀರ್ಮಾನದ ಭಾಗವಾಗಿ ಅವರಿಗೇನಾದರೂ ಹೇಳಿದಾಗ ಯಾವುದನ್ನೂ ಅವರು ನಿರಾಕರಿಸಿಯೇ ಇಲ್ಲ. ಅಲ್ಲದೆ ಅವರ ಸಲಹೆಗಳೇನಾದರು ನಮ್ಮಲ್ಲಿ ಹೇಳಿದರೆ ಕಮಿಟಿಯು ಅವರ ಸಲಹೆ ಮನ್ನಣೆ ನೀಡಿತ್ತೇ ವಿನಹ ಒಂದನ್ನೂ ತಿರಸ್ಕರಿಸಿರಲಿಲ್ಲ, ಅಂದರೆ ಅವರ ಸಲಹೆಗಳಲ್ಲಿ ಊರ ಏಳಿಗೆಯ ಕನಸುಗಳಿತ್ತು. ಅಂದು ಹತ್ತೂರ ಸುತ್ತಲ ಇತಿಹಾಸದಲ್ಲಿ ಮೊದಲಿಗೆ ವಯಸ್ಕರ ಧಾರ್ಮಿಕ ಶಿಕ್ಷಣವನ್ನು ಶುರು ಹಚ್ಚಿದ ಉಸ್ತಾದರಿಗೆ ಊರಿನ ಸಂಪೂರ್ಣ ಬೆಂಬಲ ಮೊದಲ ದಿನವೇ ಸಿಕ್ಕಿತ್ತು, ಆ ವಯಸ್ಕರ ಧಾರ್ಮಿಕ ಶಿಕ್ಷಣದಲ್ಲಿ ನಾನೂ ಇದ್ದೆ ಊರಿನ ಪ್ರಮುಖರೆಲ್ಲರೂ ಸಮಯಕ್ಕೆ ಸರಿಯಾಗಿ ಹಾಜರಿದ್ದರು. ಅಲ್ಪ ದಿನಗಳ ನಂತರ ವಯಸ್ಕ ವಿದ್ಯಾರ್ಥಿಗಳಲ್ಲೊಬ್ಬರು ಅಲ್ಪ ತಡವಾಗಿ ಬಂದಾಗ ಅವರನ್ನು ಗದರಿಸಿದ್ದರು. ಸಮಯ ಪರಿಪಾಲನೆಯ ಪ್ರಾಮುಖ್ಯತೆಗೆ ಒತ್ತು ನೀಡುವ ಬಗ್ಗೆ ಜಾಗೃತರಾಗಿಸುವ ಅವರ ನಡೆಯಲ್ಲಿ ರಾಜಿಯಾಗುವ ಪ್ರಶ್ನೆಯೇ ಇರಲಿಲ್ಲ. ಅದು ಎದುರಲ್ಲಿರುವವರ ಸ್ಥಾನ ಮಾನ ಅದೆಷ್ಟು ಎತ್ತರವಿದ್ದರೂ ಸರಿ. ಆ ವಯಸ್ಕರ ತರಗತಿ ರಾತ್ರಿ 9 ರಿಂದ 11 ಗಂಟೆಯವರೆಗೂ ಇತ್ತು. ಅದೇ ರೀತಿ ಮಹಿಳೆಯರಿಗೆ ಧಾರ್ಮಿಕ ಶಿಕ್ಷಣ ತಪ್ಪಿ ಹೋಗಬಾರದೆಂಬ ನೆಲೆಯಲ್ಲಿ ಅವರಿಗೂ ಮಹಿಳಾ ಶಿಕ್ಷಣ ತರಗತಿಯನ್ನು ನಡೆಸಿಕೊಡುತ್ತಿದ್ದರು. ಇದು ಬೆಳಿಗ್ಗೆ 9:30 ರಿಂದ 11:00 ಗಂಟೆಯ ತನಕವಿತ್ತು.

ನಿಖಾಹ್ ಮಾಡುವಾಗ ಹನಫೀ ಸಹೋದರರಾಗಿದ್ದರೆ ಹನಫೀ ಶೈಲಿಯಲ್ಲಿ ಅವರಿಗೆ ಹೊಂದುವ ಅವರು ಮಾತನಾಡುವ ಭಾಷೆಯಲ್ಲಿ ನಿಖಾಹ್ ನೆರವೇರಿಸುತ್ತಿದ್ದರು, ಹಲವು ಭಾಷೆಗಳಲ್ಲಿ

ಹಿಡಿತವಿದ್ದ ಉಸ್ತಾದರು ನಮ್ಮ ಜಮಾಅತಿಗೆ ಒಂದು ಹೆಮ್ಮೆಯಾಗಿದ್ದರು, ಜಮಾಅತಿನ ನಿಖಾಹ್ ಅದೆಷ್ಟು ದೂರದ ಊರಿನಲ್ಲಿದ್ದರೂ ಆಡಳಿತ ಕಮಿಟಿಯ ಅಪ್ಪಣೆಯಿದ್ದರೆ ಅವರು ಹೋಗುತ್ತಿದ್ದರು, ನಮ್ಮ ಕರೀಂನ ನಿಖಾಹ್ ನೆರವೇರಿಸಲು ಕೇರಳದ ತಿರೂರ್ ಎಂಬ ಸ್ಥಳಕ್ಕೂ ನನ್ನ ಜೊತೆ ಬಂದಿದ್ದರು.

ಮುಕ್ರಿಕ (ಮುಅದ್ದಿನ್) ಬಾಂಗ್ ಕೊಡುವ ಕನಿಷ್ಟ ಒಂದೆರಡು ನಿಮಿಷ ಮೊದಲೇ ಉಸ್ತಾದರು ಮಸೀದಿಯೊಳಗೆ ಬಂದು ಮುಟ್ಟುತ್ತಿದ್ದರು. ಅವರು ಆಝಾನಿಗೂ ಮುಂಚೆ ಬರುವ ಉದ್ದೇಶ ಒಂದು ವೇಳೆ ಅನಿವಾರ್ಯ ಕಾರಣಗಳಿಂದ ಮುಅದ್ದಿನ್ ಗೆ ಬರಲು ಅಸಾಧ್ಯವಾದರೆ ಆಝಾನ್ ಕೊಡಬೇಕಾಗಿ ಬರಬಹುದು ಎನ್ನುವ ಮುಂದಾಲೋಚನೆ ಅವರಲ್ಲಿತ್ತು. ಇಲ್ಲ, ಖಂಡಿತ ಇಲ್ಲ, ಈವರೆಗೂ ಅವರ ಸ್ಥಾನವನ್ನು ತುಂಬಲು ಯಾರಿಗೂ ಸಾಧ್ಯವಾಗಲಿಲ್ಲ, ಆ ಭಾವನೆ ನಮಗೆ ಬಂದಿರುವುದೇ ಅವರ ಅಗಲುವಿಕೆಯ ನಂತರ, ಅವರ ಕಾರ್ಯ ವೈಖರಿಯ ಬಗ್ಗೆ ನಮಗೆ ಸಂಪೂರ್ಣ ಅರಿವಾಗಿದ್ದು ಅವರು ನಮ್ಮಿಂದ ಬಿಟ್ಟು ಹೋದ ನಂತರ, ಅವರ ಅಗುಲುವಿಕೆಯಿಂದ ನನಗಾದ ನೋವು ಅಷ್ಟಿಷ್ಟಲ್ಲ, ಆದರೂ ಕರ್ತನ ಕರೆಯೋಲೆಗೆ ಸ್ಪಂದಿಸದೆ ವಿಧಿಯಿಲ್ಲ, ಕರ್ತನು ಒಳ್ಳೆಯವರನ್ನು ಬೇಗ ಕರೆಸಿಕೊಳ್ಳುತ್ತಾನೆ ಎಂಬ ಮಾತಿನ ತಿರುಳಿನಲ್ಲೂ ಸತ್ಯವಿದೆಯೆಂದು ನನಗೆ ಆಗ ಅರಿವಾಗಿತ್ತು.

ಅಲ್ಲಾಹನು ಅವರನ್ನು ಸ್ವರ್ಗದ ಉತ್ತುಂಗದಲ್ಲಿರಿಸಲಿ, ಅವರಿಂದ ಕಲಿತ ಧಾರ್ಮಿಕ ಭಾಗ್ಯದ ಬೆಳಕಿನಿಂದ ನಮ್ಮೆಲ್ಲರನ್ನೂ ಅವರೊಂದಿಗೆ ಜನ್ನಾತುಲ್ ಫಿರ್ದೌಸಿನಲ್ಲಿ ಒಟ್ಟು ಸೇರಿಸಲಿ...ಆಮೀನ್

**ಪ್ರವಾದಿ ವಚನ**

ಅಲ್ಲಹನ ಸಂದೇಶವಾಹಕರು (ಸ.ಅ.) ಹೇಳಿದರು –ನಿಮ್ಮಲ್ಲಿ ಯಾರಾದರೂ ಒಂದು ಕೆಡುಕನ್ನು ಕಂಡರೆ ಅದನ್ನು ಕೈಯಿಂದ ತಡೆಯಲಿ. ಅದರ ಸಾಮರ್ಥ್ಯ ಇಲ್ಲದಿದ್ದರೆ ನಾಲಗೆಯಿಂದ, ಅದಕ್ಕೂ ಶಕ್ತಿಯಿಲ್ಲದಿದ್ದರೆ ಮನಸ್ಸಿನಿಂದಾದರೂ ದ್ವೇಷಿಸಲಿ. ಇದು ವಿಶ್ವಾಸದ ಅತ್ಯಂತ ದುರ್ಬಲ ಅವಸ್ಥೆಯಾಗಿದೆ.

# ನಾ ಕಂಡ ಮಹಾಗುರು ಹಾಜಿ ಮುಹಮ್ಮದ್ ಸ್ವಾಲಿಹ್

ಡಾ| ಅಶೋಕ್ ಕುಮಾರ್ ಶೆಟ್ಟಿ, ಕಾಟಿಪಳ್ಳ

ಅದು 1982 ಜನವರಿ ತಿಂಗಳು, ಅಂದರೆ ಬರೋಬ್ಬರಿ ನಲ್ವತ್ತು ವರ್ಷಗಳ ಮೊದಲು ನಾನು ಕಾಟಿಪಳ್ಳದಲ್ಲಿ ಒಬ್ಬ ವೈದ್ಯನಾಗಿ ಸೇವೆ ಸಲ್ಲಿಸಲು ಪ್ರಾರಂಭಿಸಿದ ಸಮಯ.


ಊರಿಗೆ ನಾನಿನ್ನೂ ಪರಿಚಿತನಾಗಿರಲಿಲ್ಲ, ಒಂದು ಊರಿನಲ್ಲಿ ಒಬ್ಬ ವೈದ್ಯ ಯಶಸ್ವಿಯಾಗಬೇಕಾದರೆ ರೋಗಿಗಳಲ್ಲಿ ಆತ್ಮಸ್ಥೈರ್ಯ ನೀಡುವುದು ಬಲು ಮುಖ್ಯ, ಆ ಆತ್ಮ ಸ್ಥೈರ್ಯ ರೋಗಿಗಳಲ್ಲಿ ಬರಲು ಊರಿಗೆ ನನ್ನ ಪರಿಚಯ ತುಂಬಾ ಮುಖ್ಯ. ಅದೇ ಸಂದರ್ಭದಲ್ಲಾಗಿತ್ತು ನನ್ನ ಮತ್ತು ಊರಿನ ಈ ಮೇರು ಮಹಾಗುರುಗಳ ಭೇಟಿಯಾಗಿದ್ದು, ಅಂದು ಆ ಗುರುಗಳು ನನ್ನ ಕ್ಲಿನಿಕ್‌ಗೆ ಬಂದಿದ್ದರು,ಅವರ ಮೊದಲ ಭೇಟಿಯಲ್ಲಿಯೇ ನನಗೆ ಧೈರ್ಯ ತುಂಬುತ್ತಾ ನನ್ನನ್ನು ಪ್ರೋತ್ಸಾಹಿಸಿ ನನ್ನನ್ನು ಪರಿಚಯಿಸಿದ್ದರು. ಆ ಕಾರಣವೋ ಏನೋ ಈಗಲೂ ನಾನು ಇದೇ ಊರಿನಲ್ಲಿ ಸೇವೆ ಸಲ್ಲಿಸುತ್ತಿರುವೆ.

ಅವರು ತೋರಿಸುತ್ತಿದ್ದ ಆದರ, ಪ್ರೀತಿ, ಸೌಹಾರ್ದ, ವಿಶ್ವಾಸ ಜೊತೆಗೆ ಅವರು ನೀಡುತ್ತಿರುವ ಗೌರವ ನನಗೆ ಇನ್ಯಾರಿಂದಲೂ ಸಿಕ್ಕಿಲ್ಲ, ಅವರೊಬ್ಬ ಮೃದು, ಸರಳ ಸ್ವಭಾವದ ಮಹಾ ಪುರುಷರಾಗಿದ್ದರು ಎನ್ನಲು ನನ್ನಲ್ಲಿ ಕಾಣದ ಕಾರಣಗಳಿವೆ ಎನ್ನಲು ಬಹಳ ಸಂತೋಷವಾಗುತ್ತದೆ,

ನಂತರದ ದಿನಗಳಲ್ಲಿ ನನ್ನ ಕ್ಲಿನಿಕ್‌ಗೆ ಅವರು ಆಗಮಿಸುವಾಗ ಚಿಕಿತ್ಸೆಗಾಗಿ ಬರುತ್ತಿದ್ದ ಹಲವಾರು ರೋಗಿಗಳು ಎದ್ದು ನಿಂತು ಅವರನ್ನು ಗೌರವಿಸುತ್ತಿದ್ದರು.

ಮೊದಲು ಬಂದ ರೋಗಿಗಳು ಉಸ್ತಾದರನ್ನು ಮೊದಲು ಒಳಗೆ ಕಳುಹಿಸಲು ಒತ್ತಾಯ ಮಾಡಿದರೂ ಅವರು ಸರತಿಗಿಂತ ಮೊದಲು ಹೋಗುವುದೇ ಇಲ್ಲ, ತಾನೊಬ್ಬ ಗುರುವೆಂಬ





ಅಹಂ ಇಲ್ಲದೆ, ತನ್ನ ಸರತಿ ಬಂದಾಗಲಷ್ಟೇ ಚಿಕಿತ್ಸೆಗೆ ಒಳಗೆ ಬರುತ್ತಿದ್ದರು. ಉಸ್ತಾದರ ಇಂತಹ ಗುಣಗಳೇ ಅವರನ್ನು ಅಷ್ಟು ಮೇಲಕ್ಕೇರಿಸಿದೆ.

ಎಷ್ಟೋ ಸಲ ನಾನು ಚಿಕಿತ್ಸೆಗೆ ಹಣ ಬೇಡವೆಂದು ಹೇಳಿದಾಗ 'ನೀವು ಚಿಕಿತ್ಸೆಗೆ ಶುಲ್ಕ ತೆಗೆಯದಿದ್ದರೆ ರೋಗಿ ಗುಣವಾಗುವುದು ಸಂಶಯ' ಎಂದು ಉಪದೇಶಿಸುತ್ತಾ ನನ್ನ ಟೇಬಲ್ ಮೇಲೆ ಹಣ ಇಟ್ಟು ಹೋಗುತ್ತಿದ್ದರು. ಅಂತಹ ಒಂದು ಮೃದು ಮನಸ್ಸಿನ ಉಸ್ತಾದರು ನಮ್ಮಲ್ಲರೊಂದಿಗೂ ಉತ್ತಮವಾಗಿ ವ್ಯವಹರಿಸುತ್ತಾ ಪ್ರೀತಿ ವಿಶ್ವಾಸಗಳನ್ನು ಧಾರೆ ಎರೆಯುತ್ತಾ, ತನ್ನ ಜೀವನವನ್ನು ಸಮಾಜ ಸೇವೆಗಾಗಿ ಮತ್ತು ದೇವ ಸಂಪ್ರೀತಿಗಾಗಿ ಉಪಯೋಗಿಸುತ್ತಾ, 1998ರಲ್ಲಿ ನಮ್ಮೆಲ್ಲರನ್ನೂ ಅಗಲಿ ಕಾಣದ ಲೋಕಕ್ಕೆ ಪ್ರಯಾಣ ಬೆಳೆಸಿದರು. ಆ ವಾರ್ತೆ ನನಗೆ ಗರಬಡಿದಂತಾಗಿತ್ತು. ಅಂದು ಕಾಟಿಪಳ್ಳದ ಎಲ್ಲಾ ನಾಗರಿಕರು ಜಾತಿ, ಬೇಧವಿಲ್ಲದೆ (ನಾನೂ ಸಹಿತ) ವ್ಯವಹಾರಗಳನ್ನು ಸ್ಥಗಿತಗೊಳಿಸಿ ಶೋಕಾಚರಣೆಯನ್ನು ಆಚರಿಸಿದೆವು.

ಅ ಮಹಾಗುರುಗಳ ಮಾರ್ಗದರ್ಶನ, ಉಪದೇಶಗಳನ್ನು ಹೊತ್ತು ತರುವ, ಅವರ ನೆನಪು ಮತ್ತೆ ಮರುಕಳಿಸುವ ಪ್ರಯತ್ನವನ್ನು ಹೊತ್ತು ತರುವ ಈ ಪುಸ್ತಕ ಊರಿಗೆ ಬೆಳಕು ತೋರಿಸುತ್ತಾ ಯಶಸ್ವಿಯಾಗಲೆಂದು ಹಾರೈಸುತ್ತೇನೆ.

**ಪ್ರವಾದಿ ವಚನ**

ಪ್ರವಾದಿ (ಸ.ಅ.) ಹೇಳಿದರು ಯಾರು
ಸನ್ಮಾರ್ಗದ ಕಡೆಗೆ ಕರೆ ನೀಡುತ್ತಾನೋ ಅವನಿಗೆ
ಆ ಸನ್ಮಾರ್ಗವನ್ನು ಅನುಸರಿಸುವವರಿಗೆ ಸಿಗುವಷ್ಟೇ
ಪುಣ್ಯ ಸಿಗುವುದು. ಅದರಿಂದ, ಅನುಸರಿಸುವವರ
ಪುಣ್ಯದಲ್ಲಿ ಯಾವುದೇ ಕಡಿತವಾಗಲಾರದು.
ಇನ್ನು ಪಥಭ್ರಷ್ಟತೆಯ ಕಡೆಗತೆ ಕರೆ ನೀಡುವವನಿಗೆ
ಅದನ್ನು ಅನುಸರಿಸುವವರಷ್ಟೆ ಪಾಪವಿರುವುದು.
ಅದರಿಂದ ಅನುಸರಿಸುವವರ ಪಾಪದಲ್ಲಿ
ಯಾವುದೇ ಕಡಿತವಾಗಲಾರದು.



# ದಾಖಲಾತಿಯ ಮುಂದಾಲೋಚನೆಯ ಸಾಮಾಜಿಕ ಚಿಂತಕ

**ಎಂ. ಅಹ್ಮದ್ ಬಾವ, ಮಂಗಳೂರು**
ಸದಸ್ಯರು, ಬ್ಯಾರಿ ಅಧ್ಯಯನ ಪೀಠ, ಮಂಗಳೂರು ವಿಶ್ವವಿದ್ಯಾನಿಲಯ

ಇಂದಿಗೆ ಸರಿ ಸುಮಾರು 88 ವರ್ಷಗಳ ಹಿಂದೆ ಮುಸ್ಲಿಂ ಸಮುದಾಯದ ಪ್ರತಿಷ್ಠಿತ ಮನೆತನದಲ್ಲಿ ಜನಿಸಿದ ಹಾಗೂ ಡಾ। ಅನ್ಸಾರಿ ರಸ್ತೆಯಲ್ಲಿರುವ 'ಚಕ್ಕರೆ ಮರತರೆ ಅಡಿ' ಎಂಬ ಪ್ರಸಿದ್ಧ ನಿವಾಸದಲ್ಲಿ ಧಾರ್ಮಿಕ ಹಾಗೂ ಸಾಮಾಜಿಕ ಕಳಕಳಿಯ ಓರ್ವ ಪ್ರಜ್ಞಾವಂತನಾಗಿ ಹುಟ್ಟಿ ಬೆಳೆದ ದಾಖಲಾತಿಯ ಚಿಂತಕ ಮರ್‌ಹೂಂ ಹಾಜಿ. ಎಂ. ಮುಹಮ್ಮದ್ ಸ್ವಾಲಿಹ್ ಉಸ್ತಾದರು.

ನನಗೂ ಮತ್ತು ಮರ್‌ಹೂಂ ಸ್ವಾಲೀಹ್ ಉಸ್ತಾದ್‌ರವರಿಗೆ ಪರಿಚಯವಾದುದು 1956 ರಲ್ಲಿ ಇವರ ನಿವಾಸ ಇದ್ದ ಪ್ರದೇಶದಲ್ಲಿ ನನ್ನ ಒಬ್ಬ ಸ್ನೇಹಿತನಿದ್ದ ನಾವಿಬ್ಬರೂ ಕಸಾಯಿಗಲ್ಲಿ ಶಾಲೆಯಲ್ಲಿ ಒಂದೇ ತರಗತಿಯಲ್ಲಿ ಕಲಿಯುತ್ತಿದ್ದೆವು. ಆ ಬಾಲ್ಯ ಸ್ನೇಹಿತನನ್ನು ಭೇಟಿ ಮಾಡಲು ಆಗಾಗ ಹೋಗುತ್ತಿದ್ದೆ. ಆಗ ನನಗೆ ಮುಹಮ್ಮದ್ ಸ್ವಾಲಿಹ್ ಉಸ್ತಾದ್‌ರ ಪರಿಚಯವಾಯಿತು ಮತ್ತೆ ಅವರು ನನಗೆ ಆತ್ಮೀಯರಾದರು.

ಮುಹಮ್ಮದ್ ಸ್ವಾಲಿಹ್ ಉಸ್ತಾದರು ಆಗ ಬೆಲಿಯೊ ಪಲ್ಲಿ, ಜಮಾತ್ ಪಲ್ಲಿ ಖ್ಯಾತಿಯ ಝೀನತ್ ಭಕ್ಸ್ ಮಸೀದಿಯ ಖತೀಬರಾದ ಸಿ. ಕುಂಞ ಅಹ್ಮದ್ ಮುಸ್ಲಿಯಾರ್ ರವರ ಬಳಿ ಧಾರ್ಮಿಕ ವಿದ್ಯಾಭ್ಯಾಸ ಮಾಡುತ್ತಿದ್ದರು. ಕುಂಞ ಅಹ್ಮದ್ ಮುಸ್ಲಿಯಾರ್ ಆಗ ಹೆಸರಾಂತ ಧಾರ್ಮಿಕ ವಿದ್ವಾಂಸರಾಗಿದ್ದರು. ಅವರು ಬೆಲಿಯೊ ಪಲ್ಲಿಯಲ್ಲಿ ಸುಮಾರು

40 ವರ್ಷಗಳಿಗಿಂತಲೂ ಹೆಚ್ಚು ಕಾಲ ಖತೀಬರಾಗಿ ಸೇವೆ ಸಲ್ಲಿಸಿದ್ದರು. ಅವರ ಬಳಿ ಕಲಿತವರಲ್ಲಿ ಮುಹಮ್ಮದ್ ಸ್ವಾಲಿಹ್ ಉಸ್ತಾದ್ ಪ್ರಮುಖರು. ಇವರು ಧಾರ್ಮಿಕ ಪಾಂಡಿತ್ಯದ ಜೊತೆ ಸಾಮಾಜಿಕ ಕಳಕಳಿಯನ್ನು ಬೆಳೆಸಿಕೊಂಡಿದ್ದರು. ಮುಹಮ್ಮದ್ ಸ್ವಾಲಿಹ್ ಉಸ್ತಾದ್ ಬೂಕರ ಪಳ್ಳಿಯಲ್ಲಿ 5 ವರ್ಷ ಇಮಾಮರಾಗಿ ಸೇವೆ ಸಲ್ಲಿಸಿದ್ದರು. ಆಗ ಮನೆಯಲ್ಲಿಯೂ ಹೆಣ್ಣು ಮಕ್ಕಳಿಗೆ ಉಚಿತವಾಗಿ ಧಾರ್ಮಿಕ ವಿದ್ಯಾಭ್ಯಾಸ ನೀಡುತ್ತಿದ್ದರು. ಆ ಕಾಲದಲ್ಲಿ ಮುಸ್ಲಿಂ ಸಮುದಾಯ ಲೌಖಿಕ ವಿದ್ಯಾಭ್ಯಾಸದಲ್ಲಿ ಬಹಳ ಹಿಂದಿತ್ತು. ಉಸ್ತಾದ್‌ರವರು ಲೌಖಿಕ ವಿದ್ಯಾಭ್ಯಾಸಕ್ಕೂ ಉತ್ತೇಜನ ನೀಡುತ್ತಿದ್ದರು.

ದಿವಂಗತರ ದಾಖಲಾತಿಯ ಕಾಳಜಿಯ ಬಗ್ಗೆ ಹೇಳುವುದಾದರೆ ಅದೊಂದು ಕಬ್ಬಿಣದ ಕಡಲೆ ಕಾಯಿ ಎಂಬಂತೆ ಆಗಿತ್ತು. ಆ ಸಮಯದಲ್ಲಿ ದಾಖಲಾತಿಯ ಬಗ್ಗೆ ಗಂಧಗಾಳಿಯೂ ಗೊತ್ತಿಲ್ಲದ ಸಮಯದಲ್ಲಿ ದಾಖಲಾತಿಯ ಬಗ್ಗೆ ಸಮುದಾಯಕ್ಕೆ ಕಲಿಸಿ ಕೊಟ್ಟರು. ಉದಾ: ಜನನ, ಮರಣ ದಾಖಲಾತಿ ಹಾಗೂ ಇತರ ಪ್ರಮುಖ ವಿಷಯದ ಬಗ್ಗೆ ದಾಖಲಾತಿಯನ್ನು ಸುರಕ್ಷಿತವಾಗಿರಿಸಲು ತನ್ನ ಸ್ವಗೃಹವನ್ನು ಮೀಸಲಾಗಿರಿಸಿದರು. ಆ ಪ್ರಯುಕ್ತ ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸುವಾಗ ಜನನ ದಾಖಲೆಗಳನ್ನು ಇವರಿಂದ ಪಡೆದು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸುತ್ತಿದ್ದರು. ಈ ಬಗ್ಗೆ ಇವರಿಗೆ ಹಲವಾರು ಪ್ರಶಂಸೆಗಳೂ ಸಿಕ್ಕಿವೆ. ಈಗ ದಾಖಲಾತಿ ಇಲ್ಲದ ಕಾರಣ ಇಂದು ಮುಸ್ಲಿಂ ಸಮುದಾಯ ಬಹಳ ತೊಂದರೆಗಳಿಗೆ ಗುರಿಯಾಗಿದೆ ಇದನ್ನು ವಿವರಿಸಿದರೆ ನಾವು ಮಾಡಿದ ಬಹಳ ದೊಡ್ಡ ತಪ್ಪಿನ ಅರಿವು ಆಗುತ್ತದೆ. ಇದು ಬಹಳ ಚಿಂತಿಸುವ ವಿಷಯವಾಗಿದೆ. ಇದರಿಂದಾಗಿ ನಮ್ಮ ಸಮುದಾಯಕ್ಕೆ ಸರಕಾರ ಕೊಟ್ಟ ಹಲವಾರು ಸ್ಥಳಗಳು ಕೈ ತಪ್ಪಿ ಹೋಗಿದೆ. ಇದು ಖೇದಕರ ಸಂಗತಿಯಾಗಿದೆ. ಮಂಗಳೂರು ಜೈಲು ಅಧಿಕಾರಿಗಳ ಕೋರಿಕೆಯಂತೆ ಕೈದಿಗಳ ಮನ ಪರಿವರ್ತನೆಯ ಕೆಲಸದಲ್ಲಿ ಇವರು ಕೈದಿಗಳಿಗೆ ಬ್ಯಾರಿ, ಉರ್ದು, ಕನ್ನಡ, ತುಳು ಭಾಷೆಯಲ್ಲಿ ಜೈಲು ಅಧಿಕಾರಿಗಳ ಕೋರಿಕೆಯಂತೆ ಧರ್ಮಾರ್ಥವಾಗಿ ಬೋಧನೆ ನೀಡುತ್ತಿದ್ದರು.

ಹಾಜಿ ಎಂ. ಮುಹಮ್ಮದ್ ಸ್ವಾಲಿಹ್‌ರವರು ಕಾಟಿಪಳ್ಳ ಮುಸ್ಲಿಂ ಜಮಾತಿನ ಖತೀಬರಾಗಿ 38 ವರ್ಷ ಸೇವೆ ಸಲ್ಲಿಸಿ ತನ್ನ ಜೀವಂತ ಕಾಲದ ಅರ್ಧದಷ್ಟು ಸಮಯ ಧಾರ್ಮಿಕ ಸೇವೆಗೆ ಮುಡಿಪಾಗಿಸಿ ಅರೇಬಿಕ್, ಉರ್ದು, ಕನ್ನಡ, ಮಲಯಾಳಂ ಮತ್ತು ಬ್ಯಾರಿ ಭಾಷೆಗಳಲ್ಲಿ ಬಹಳ ಸುಲಭವಾಗಿ ಧಾರ್ಮಿಕ ಪ್ರವಚನೆಯಲ್ಲಿ ಪ್ರಸಿದ್ಧರಾದರು ಇವರ ಬಹುದೊಡ್ಡ ಸಾಧನೆ ಎಂದರೆ ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸದ ಕಡೆಗೆ ಹೆಚ್ಚು ಒತ್ತು ನೀಡಿ ಅವರನ್ನು ಸಮುದಾಯದ ಧಾರ್ಮಿಕ ಪ್ರಜ್ಞಾವಂತರಾಗಿ ಪರಿವರ್ತನೆ ಮಾಡಿದ್ದು. ರಮಝಾನ್ ಪವಿತ್ರ ತಿಂಗಳಲ್ಲಿ ಪರಿಚಯದ ಮನೆಗಳಿಗೆ ತೆರಳಿ ಉಚಿತವಾಗಿ 'ತೌಬ' ಮತ್ತು ಧಾರ್ಮಿಕ ಪ್ರವಚನಗಳನ್ನು ನೀಡುತ್ತಿದ್ದರು. ಊರಲ್ಲಿ ನಡೆಯುವ ಧಾರ್ಮಿಕ, ಸಾಮಾಜಿಕ, ಮತ್ತು ಸಾಂಸ್ಕೃತಿಕ ಕಾರ್ಯಕ್ರಮಕ್ಕಾಗಿ ಕನ್ನಡ, ಬ್ಯಾರಿ, ಉರ್ದು, ಅರೇಬಿಕ್ ವಿಷಯಗಳಲ್ಲಿ ಬೈತ್ ಮತ್ತು ಧಾರ್ಮಿಕ ಇತಿಹಾಸದ ಹಾಡುಗಳನ್ನು ರಚಿಸಿ ಅವುಗಳನ್ನು ಪ್ರಕಟಿಸಿ ಕೇವಲ ಹದಿನೈದು ಇಪ್ಪತ್ತು ಪೈಸೆ ಗಳಿಗೆ ಮಾರಿ, ಅದರಿಂದ ಬಂದ ಹಣವನ್ನು ವಿದ್ಯಾರ್ಥಿಗಳ ಕಲಿಕೆಯ ಸಂಬಂಧ ಹಾಗೂ ಅನಾಥ ಮಕ್ಕಳ ಸಂರಕ್ಷಣೆಗಾಗಿ ನೀಡುತ್ತಿದ್ದರು.

ಒಟ್ಟಿನಲ್ಲಿ ಸಮಾಜಕ್ಕೆ ಒಂದು ಸಂದೇಶವನ್ನು ಸಾರಿದ ಪ್ರಮುಖ ಪ್ರತಿಭೆಯ ಹಿರಿಯಣ್ಣರವರನ್ನು ಕಳೆದುಕೊಂಡ ಈ ಸಮಯದಲ್ಲಿ ಅವರ ಆದರ್ಶಗಳನ್ನು ಮುಂದಿಟ್ಟು ಕಾರ್ಯಪ್ರವೃತ್ತರಾಗಲು ಇಂದಿನ ಯುವ ಪೀಳಿಗೆ ಮುಂದಾಗಬೇಕೆಂದು ನನ್ನ ಕಳಕಳಿಯ ವಿನಂತಿ.

# ಸಹನಾಶೀಲ ಬೆಲಿಯೊ ಉಸ್ತಾದ್

ಜಿ. ಹುಸೈನ್ ಬಾವಾ (ರೆಡೆಕ್)
ಅಧ್ಯಕ್ಷರು, ಹವ್ವಾ ಫೌಂಡೇಶನ್ ಕಾಟಿಪಳ್ಳ

ಪಣಂಬೂರಿನಿಂದ ಲಾಗಾಯ್ತು ಕಾಟಿಪಳ್ಳಕ್ಕೆ ನಿರ್ವಸಿತರಾಗಿ ಬಂದ ಬಳಿಕ ನಮ್ಮ ಪೂರ್ಣ ಕುಟುಂಬದ ಉಸ್ತಾದರಂತಿದ್ದ, ನಮ್ಮ ಸದಸ್ಯರಲ್ಲಿ ಮುವ್ವತ್ತು ವರ್ಷಕ್ಕಿಂತ ಮೇಲ್ಪಟ್ಟ ಎಲ್ಲ ತರುಣ ತರುಣಿಯರು, ನಮ್ಮಿಂದ ಗತಿಸಿ ಹೋದ ನಮ್ಮ ಹಿರಿಯರು, ಸಹೋದರ - ಸಹೋದರಿಯರಿಗೆ ಆತ್ಮೀಯ ಉಸ್ತಾದರಾಗಿದ್ದ ಮುಹಮ್ಮದ್ ಸ್ವಾಲಿಹ್ ಉಸ್ತಾದರು ನಮ್ಮೆಲ್ಲರ ಪ್ರೀತಿಗೆ ಪಾತ್ರರಾಗಿದ್ದರು.

ತುಂಬಾ ಸಹನೆಯುಳ್ಳ ಪ್ರೀತಿಯ ಉಸ್ತಾದರು ಸುಮಾರು 25 ವರ್ಷಗಳ ಹಿಂದೆ ಅಕಾಲಿಕವಾಗಿ ಮರಣ ಹೊಂದಿದಾಗಲೇ ನಮ್ಮ ಕಾಟಿಪಳ್ಳದ ಬೆಳಕು ನಂದಿ ಹೋದಂತಾಯಿತು. ಅವರ ಅಕಾಲಿಕ ಮರಣದ ವಾರ್ತೆ ಇಡೀ ಊರನ್ನೇ ಕಣ್ಣೀರಲ್ಲಿ ಮುಳುಗಿಸಿತು. ಅವರ ಸವಿ ನೆನಪು ನಮ್ಮ ಹೃದಯದಿಂದ ಮಾಸಿ ಹೋಗಿಲ್ಲ ಅವರ ಖಿತುಬಾದ ಶೈಲಿ ಮಧುರ ಕಂಠದ ಬಗ್ಗೆ ಊರಿನ ಎಲ್ಲಾ ಜನರೂ ಈಗಲೂ ನೆನಪು ಮಾಡುತ್ತಿದ್ದಾರೆ, ಅದು ಅಲ್ಲಾಹನು ಅವರಿಗೆ ನೀಡಿದ ಬಹುದೊಡ್ಡ ಅನುಗ್ರಹವೆಂದೇ ಹೇಳಬೇಕು.

ಇಪ್ಪತ್ತೈದು ವರ್ಷಗಳ ಹಿಂದೆ ಅಕಾಲಿಕವಾಗಿ ಮರಣ ಹೊಂದುವ ಸಮಯದವರೆಗೂ ನಮ್ಮ ಪ್ರತಿಯೊಂದು ಧಾರ್ಮಿಕ ಆಗು ಹೋಗುಗಳಿಗೆ ಕುಟುಂಬದ ಸದಸ್ಯರಂತೆ ಬಾಂಧವ್ಯವನ್ನು ಹೊಂದಿದ್ದರು. ನಮ್ಮ ಹಿರಿಯರಾಗಿದ್ದ ಇದ್ದಿಯಾಕ, ಹುಸೈನಾಕ, ಚೆರಾಕನವರಲ್ಲದೆ ಪಣಂಬೂರ್ ಮುಸ್ಲಿಂ ಜಮಾತಿನಲ್ಲಿ ಹಲವಾರು ವರ್ಷಗಳ ಕಾಲ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಹಾಜಿ ಪಿ.ಕೆ. ಅಬ್ದುಲ್ ರಹ್ಮಾನ್ ರವರು ಉಸ್ತಾದರನ್ನು ಬಹಳವಾಗಿ ನೆಚ್ಚಿ ಕೊಂಡಿದ್ದರು. ಅವರು ಉಸ್ತಾದರ ಓರ್ವ ಒಡನಾಡಿಯಾಗಿ ಜೀವಿಸಿದ್ದರು ಎಂದರೂ ತಪ್ಪಾಗಲಾರದು. ಸುಮಾರು ಎಪ್ಪತ್ತರ ದಶಕದಲ್ಲಿ ವಯಸ್ಕರ ಶಿಕ್ಷಣವನ್ನು ನೀಡುತ್ತಿದ್ದ ಸಂದರ್ಭದಲ್ಲಿ ಮರ್ಹೂಂ ಪಿ.ಕೆ. ಅಬ್ದುಲ್ ರಹ್ಮಾನ್ ರವರು ಬಹಳ ಆಸಕ್ತಿಯಿಂದ, ಮದ್ರಸಾಕ್ಕೆ ತೆರಳಿ ಓರ್ವ ವಿಧೇಯ ವಿದ್ಯಾರ್ಥಿಯಾಗಿ ಅವರ ಪಾಠವನ್ನು ಕೇಳುತ್ತಾ ಅವರಿಂದ ದೀನಿ ವಿದ್ಯೆಗಳನ್ನು ಕಲಿಯುತ್ತಿದ್ದರು.

ಇಂತಹ ಮಹಾನರನ್ನು ನೆನಪಿಸಿ ನಮ್ಮ ಮುಂದಿನ ಪೀಳಿಗೆಗೆ ಅವರ ಸಾತ್ವಿಕ ಆದರ್ಶ ಬದುಕಿನ ಪರಿಚಯವನ್ನು ಮಾಡಿ ಕೊಡುತ್ತಿರುವ ಈ ಪುಸ್ತಕದ ಸಂಪಾದಕೀಯ ಮಂಡಳಿಗೆ ವೈಯುಕ್ತಿವಾಗಿ ನಾನು ಮತ್ತು ಹವ್ವಾ ಫೌಂಡೇಶನ್ನಿನ ಎಲ್ಲ ಸದಸ್ಯರ ಪರವಾಗಿ ಕೃತಜ್ಞತೆಯನ್ನು ಅರ್ಪಿಸುತ್ತಾ, ಶುಭವನ್ನು ಕೋರುತ್ತೇವೆ.





# ಉಸ್ತಾದರೊಂದಿಗಿನ ಒಡನಾಟ ಅವಿಸ್ಮರಣೀಯ

ಹಾಜಿ ಪಿ.ಎಂ.ಅಬ್ದುಲ್ ಖಾದರ್(ಮುಅಝ್ಝಿನ್)ಕಾಟಿಪಳ್ಳ

ನಮ್ಮ ಊರಿನ ಬೆಲಿಯೊ ಉಸ್ತಾದ್ ಎಂದೇ ಅರಿಯಲ್ಪಟ್ಟ ಖತೀಬ್ ಮುಹಮ್ಮದ್ ಸ್ವಾಲಿಹ್ ಉಸ್ತಾದ್‌ರ ಇಪ್ಪತ್ತೈದನೇ ಅನುಸ್ಮರಣೆಯ ಈ ಗಳಿಗೆಯಲ್ಲಿ ಅವರ ಬಗೆಗಿನ ಸ್ಮರಣಿಕೆ ಬಿಡುಗಡೆಗೊಳಿಸುವಂತಹ ವಿಚಾರ ತಿಳಿದು ಬಹಳ ಹೆಮ್ಮೆಯೆನಿಸಿತು.

ಉಸ್ತಾದ್ ಹಾಗು ನನ್ನ ನಡುವಿನ ಭಾಂದವ್ಯವು ಆಳವಾಗಿ ಬೇರೂರಲ್ಪಟ್ಟದ್ದಾಗಿದೆ. 1972ರಿಂದ ಅವರು ಇಹಲೋಕ ತ್ಯಜಿಸುವ 1998ರವರೆಗಿನ 26ವರ್ಷಗಳ ಒಡನಾಟವು ವಿವರಿಸಲಾಗದ ಅತಿ ಮಧುರವೂ, ಗಾಢವೂ ಆಗಿತ್ತು.

ನನ್ನ ದೊಡ್ಡಪ್ಪನ ಮಗನ ಅಳಿಯನಾಗಿದ್ದ ಅವರು ಶಾಂತ ಸ್ವಭಾವದ, ಉತ್ತಮ ಧಾರ್ಮಿಕ ನಡತೆಯುಳ್ಳ ವ್ಯಕ್ತಿಯಾಗಿದ್ದರು. ಶುಕ್ರವಾರ ದಿವಸದಂದು ಅವರ ಸುಶ್ರಾವ್ಯ ಕಂಠದಿಂದ ಖುತುಬಾ ಆಲಿಸುವುದೇ ಒಂದು ಅಪೂರ್ವ ಅನುಭವವಾಗಿತ್ತು. ಜಮಾಅತಿನ ಸರ್ವರೊಡನೆ ಉತ್ತಮ ಬಾಂಧವ್ಯವನ್ನು ರೂಡಿಸಿ ಕೊಂಡಿದ್ದರು. ಅವರು ಜಮಾಅತಿನ ಕೆಲವು ಕುಟುಂಬದ ಎರಡು ಅಥವಾ ಮೂರು ತಲೆಮಾರಿನ ಉಸ್ತಾದರಾಗಿದ್ದರು.

ಅಂದಿನ ಕಾಲದಲ್ಲಿ ಬ್ಯಾರಿ ಉಲಮಾಗಳ ಸಂಖ್ಯೆ ವಿರಳವಾಗಿದ್ದಾಗ ಉಸ್ತಾದರೂ ಬ್ಯಾರಿ ಭಾಷೆಯಲ್ಲೇ ನಿರರ್ಗಳವಾಗಿ ಮತ ಪ್ರಸಂಗ ಮಾಡುತ್ತಿದ್ದ ಶೈಲಿ ಅವರ್ಣನೀಯವಾಗಿತು.

ಸ್ಮರಣಿಕೆಗೆ ಶುಭ ಹಾರೈಸುತ್ತಾ ಅಲ್ಲಾಹನು ಉಸ್ತಾದರ ಖಬರ್ ಜೀವನವನ್ನು ಆನಂದಮಯವಾಗಿಸಲಿ, ಅವರನ್ನು ಸ್ವರ್ಗೋದ್ಯಾನವನ್ನಾಗಿಸಲಿ ಎಂದು ಪ್ರಾರ್ಥಿಸುವ...



## ಸಂದರ್ಶನ

*ಪಿ.ಬಿ. ಅಬ್ದುಲ್ ರಝಾಕ್ ರವರು ಬೆಲಿಯೊ ಉಸ್ತಾದರನ್ನು ಹತ್ತಿರದಿಂದ ಕಂಡವರು. ಅವರನ್ನು ಈ ಕೃತಿಗಾಗಿ ಸಂದರ್ಶಿಸಿದಾಗ ಉಸ್ತಾದರ ನೆನಪನ್ನು ಸಾಧ್ಯವಾದಷ್ಟು ನನ್ನೊಂದಿಗೆ ಹಂಚಿಕೊಂಡರು, ಆ ಸಂದರ್ಶನದ ಭಾಗವನ್ನು ಆಯ್ದು ಇಲ್ಲಿ ಲೇಖನದ ರೂಪ ನೀಡಿದ್ದೇನೆ.*

*–ಅನ್ಸಾರ್ ಕಾಟಿಪಳ್ಳ*

# ಧಾರ್ಮಿಕ ಚಿಂತಕ

**ಪಿ.ಬಿ ಅಬ್ದುಲ್ ರಝಾಕ್**

ಅಲ್ಲಾಹು ಅಕ್ಬರ್ ಅಲ್ಲಾಹು ಅಕ್ಬರ್ ಅಲ್ಲಾಹು ಅಕ್ಬರ್- ತಕ್‌ಬೀರ್ ನೊಂದಿಗಾಗಿತ್ತು ನನ್ನ ಮತ್ತು ಬೆಲಿಯೊ ಉಸ್ತಾದ್‌ರವರ ಆತ್ಮೀಯತೆ, ಕಾಟಿಪಳ್ಳದ ಇತಿಹಾಸದಲ್ಲಿ ಸೌದಿ ಅರೇಬಿಯಾಕ್ಕೆ ಹೋದವರಲ್ಲಿ ನಾನು ಮೊದಲನೆಯವನು, ಊರಿಂದ ಮುಂಬೈ ತನಕ ಬಸ್ ಪ್ರಯಾಣ, ಆಗಿನ ಆರ್ಥಿಕತೆಯಲ್ಲಿ ಹತ್ತಿರದ ಸುರತ್ಕಲ್‌ವರೆಗೂ ಕಾರು ಪ್ರಯಾಣ ಅಸಾಧ್ಯವೇ ಸರಿ, ಹಮ್ಮಬ್ಬ (ಅಮಾಕ)ನವರ ಅಂಗಡಿ ಬಳಿ ಬಸ್ ಹತ್ತಲು ಅಣಿಯಾಗಿದ್ದೆ, ಸ್ನೇಹಿತರೆಲ್ಲರೂ ನನ್ನನ್ನು ಬೀಳ್ಕೊಡಲು ಬಂದಿದ್ದರು, ಅವರೊಂದಿಗೆ ಬೆಲಿಯೊ ಉಸ್ತಾದರೂ!

ಬಸ್ ಹತ್ತುವ ಸಮಯದಲ್ಲಿ ಬೆಲಿಯೊ ಉಸ್ತಾದರು ಅವರ ಮೇರು ಧ್ವನಿಯಲ್ಲಿ ತಕ್ ಬೀರ್ ಮೊಳಗಿಸಿದರು, ಆ ತಕ್‌ಬೀರ್ ಧ್ವನಿಗೆ ನನ್ನ ಊರ ವಿರಹದ ಭಾರವಿಳಿದಂತೆ ಭಾಸವಾಗಿತ್ತು. ಸ್ನೇಹಿತರೂ ಉಸ್ತಾದರ ತಕ್‌ಬೀರ್‌ಗೆ ಧ್ವನಿಗೂಡಿಸಿದ್ದರು, ಉಸ್ತಾದರೂ ನನ್ನ ತಬ್ಬಿ ಹಿಡಿದು ಬೀಳ್ಕೊಟ್ಟಾಗ ಅದೇನೋ ಉಲ್ಲಾಸ, ಅಂದಿನ ಅವರ ಆ ನಡೆಗೆ ನಾನೀಗಲೂ ಫಿದಾ ಆಗುತ್ತಿದ್ದೇನೆ, ಅಲ್ ಹಂದುಲಿಲ್ಲಾಹ್ ಉಸ್ತಾದರ ಅಂದಿನ ಆ ತಕ್ಬೀರ್ ನನ್ನ ಯಶಸ್ಸಿನ ಹೆಜ್ಜೆ ಎಂದಷ್ಟೇ ಹೇಳಬಲ್ಲೆ.

ಬೆಲಿಯೊ ಉಸ್ತಾದರೊಂದಿಗೆ ನನ್ನ ವಿದ್ಯಾರ್ಥಿ ಜೀವನವೂ ಒಂದು ಸುಂದರ ಸಿಹಿ ಕಹಿ ನೆನಪು, ಅವರಿಗೆ ವಿದ್ಯಾರ್ಥಿಗಳಲ್ಲಿ ಎಷ್ಟು ಪ್ರೀತಿಯಿತ್ತೋ ತಪ್ಪಿದಲ್ಲಿ ಬೆತ್ತದ ರುಚಿಯೂ ಇತ್ತು, ಕೇವಲ ಕೈಗೆ ಮಾತ್ರ ಹೊಡೆಯುತ್ತಿದ್ದರು, ತಪ್ಪಿದಲ್ಲಿ 'ಕೈ ಎದುರು ನೀಡ' ಎಂದು ಹೇಳುತ್ತಾ ಒಂದೇ ಒಂದು ಪೆಟ್ಟು ಹೊಡೆಯುತ್ತಿದ್ದರು. ಅದೊಂದು ದಿನ ಅವರ ಬೆತ್ತದ ಪೆಟ್ಟಿಗೆ ನಾ ಕೂಗಿ ಮನೆಗೆ ಬಂದಿದ್ದೆ. ತಾಯಿಯ ಜೊತೆ ಕೈ ತೋರಿಸುತ್ತಾ ಉಸ್ತಾದರು ಹೊಡೆದ ಬಗ್ಗೆ ದೂರು ನೀಡಿದಾಗ ನನ್ನ ತಾಯಿ

ಹೇಳಿದ್ದಿಷ್ಟೆ, ಹೌದಾ ಹಾಗಾದರೆ ನಿನ್ನ ಕೈ ಸ್ವರ್ಗಕ್ಕೆ, ನಿನ್ನ ಕೈಗೆ ನರಕದ ಬೆಂಕಿ ತಾಗದು ಎಂದಾಗಿತ್ತು, ಅಂದಿನ ಎಲ್ಲಾ ತಾಯಿಯಂದಿರ ಉತ್ತರ ಇದೇ ಆಗಿತ್ತೆಂಬುವುದು ನನಗೆ ತಡವಾಗಿ ತಿಳಿದಿತ್ತು. ಒಟ್ಟಿನಲ್ಲಿ ಅಂದಿನ ಎಲ್ಲಾ ತಾಯಿಯಂದಿರಿಗೂ ಬೆಲಿಯೊ ಉಸ್ತಾದರ ಬಗ್ಗೆ ಅಷ್ಟೊಂದು ಗೌರವವಿತ್ತು.

ಆ ಕಾಲದಲ್ಲಿ ಉಸ್ತಾದರು ಮನೆಗೆ ತೌಬಾ ಹೇಳಲು ಬರುತ್ತಿದ್ದರು, ನೆರೆಯ ಮನೆಯವರೆಲ್ಲರೂ ಸೇರಿ ಒಂದು ಕಡೆ ಒಟ್ಟಾಗಿ ತಲೆಯ ಮೇಲೆ ಸೀರೆಯ ಸೆರಗನ್ನು ಹಾಕಿ ತೌಬಾ ಕೇಳಿ ಹೇಳುವಾಗ ಅವರಲ್ಲಿದ್ದ ಭಯಭಕ್ತಿ ಅದ್ಭುತವೆಂದೇ ಹೇಳಬಹುದು. ಅವರ ಧ್ವನಿಯಲ್ಲಿ ಅಷ್ಟೊಂದು ಶಕ್ತಿ ಇತ್ತು, ಊರಿಡೀ ಅವರಿಗೆ ನೀಡಿದ್ದ ಗೌರವವನ್ನು ಕಣ್ಣಾರೆ ಕಂಡರೂ ಇಲ್ಲಿ ವರ್ಣಿಸಲು ಅಸಾಧ್ಯವಷ್ಟೆ.

ಇನ್ನು ನಾನು ಸೌದಿ ಅರೇಬಿಯಾದಿಂದ ಊರಿಗೆ ಮರಳಿದಾಗ ಅವರನ್ನು ಭೇಟಿಯಾಗಲು ಹೋಗಿದ್ದೆ, ಆ ಸಮಯದಲ್ಲಿ ಅವರು ಮನೆ ಕಟ್ಟಿದ್ದರು, ಸಣ್ಣಸಣ್ಣ ಕಿಟಕಿಯನ್ನು ನೋಡಿ ನನಗೇನೋ ಆಗಿತ್ತು, ಅವರು ಸರಿಯಾಗಿ ವಿಷಯ ಪ್ರಸ್ತಾಪಿಸಿದ್ದರೆ ಅವರ ಮನೆಗಾಗಿ ಸಹಾಯ ಮಾಡುವ ದೊಡ್ಡ ತಂಡವೇ ಊರಲ್ಲಿತ್ತಾದರೂ ಅವರು ಆ ಗೋಜಿಗೇ ಹೋಗಿರಲಿಲ್ಲ,ಅದು ಅವರಿಗೆ ಇಷ್ಟವೂ ಇಲ್ಲ. ಅವರಿಗೆ ಆ ಸಮಯದಲ್ಲಿ ಅಲ್ಪ ಸ್ವಲ್ಪ ಸಹಾಯ ಬಂದಿದ್ದರೂ ಅಷ್ಟಕ್ಕೇ ತೃಪ್ತಿಪಟ್ಟ ಉಸ್ತಾದರು ಎಲ್ಲಿಯೂ ಕೈ ಚಾಚುವ ಮನಸ್ಸು ಮಾಡಿರಲಿಲ್ಲ. ಒಟ್ಟಿನಲ್ಲಿ 'ಇದ್ದಷ್ಟು ತೃಪ್ತಿ' ಇದು ಉಸ್ತಾದರ ಜೀವನದಲ್ಲಿ ನಾನು ಕಂಡುಕೊಂಡ ಸತ್ಯ.

ಉಸ್ತಾದರು ಹಜ್ ಯಾತ್ರೆಗೆ ಹೋಗುವ ಸಮಯದಲ್ಲಿ ನೂರುಲ್ ಹುದಾ ಶಾಲೆಗೆ ಭೇಟಿ ಕೊಟ್ಟು ಶಿಕ್ಷಕ ವೃಂದದ ಜೊತೆ ಮಾತನಾಡುತ್ತಾ ಅವರಲ್ಲಿ ತನ್ನಿಂದೇನಾದರೂ ತಪ್ಪು ನಡೆದಿದ್ದರೆ ಅದಕ್ಕೆ ನೀವು ಕ್ಷಮೆ ನೀಡಬೇಕೆಂದು ಕೋರಿದಾಗ ಇಡೀ ಶಿಕ್ಷಕ ವೃಂದವೇ ತಲೆ ತಗ್ಗಿಸಿತ್ತು, ಅದು ಉಸ್ತಾದರ ಹಿರಿಮೆ, ಅಹಂ ಎಂಬ ಪದವೇ ಉಸ್ತಾದರ ಜೀವನದಲ್ಲಿರಲಿಲ್ಲವೆಂಬುದು ನೂರಕ್ಕೆ ನೂರು ಖಾತ್ರಿಯಿಂದ ಹೇಳಬಲ್ಲೆ. ನೂರುಲ್ ಹುದಾ ವೆಲ್ಫೇರ್ ಎಸೋಸಿಯೇಷನ್ ಗೆ ಹೆಸರು ನೀಡಿದ್ದೂ ಬೆಲಿಯೊ ಉಸ್ತಾದ್ ಅದೇ ಹೆಸರು ಶಾಲೆಗೂ ಮುಂದುವರಿಸಿರುವುದು ಈಗ ಇತಿಹಾಸ.

ಪಣಂಬೂರು ಮುಸ್ಲಿಂ ಜಮಾಅತಿನ ಮಾಜಿ ಅಧ್ಯಕ್ಷ ಹಾಜಿ ಪಿ.ಎ. ಬಾವುಂಞಾಕರವರ ಪತ್ನಿ ಮರ್ಹೂ ಮಾ ನಫೀಸಾ ಹಜ್ಜುಮ್ಮ ( ಹಜ್ ಕರ್ಮಗಳನ್ನು ಮಾಡುತ್ತಾ ಕಲ್ಲೆಸೆಯುವ ಪ್ರಕ್ರಿಯೆಯು ನಡೆಯುತ್ತಿರುವ ಮಧ್ಯೆಯೇ ಅಲ್ಲಾಹನ ಕರೆಗೆ ಓಗೊಟ್ಟ ಸಾತ್ವಿಕ ಮಹಿಳೆ. ಅಲ್ಲಾಹನು ಅವರಿಗೆ ಸ್ವರ್ಗದ ಉನ್ನತ ದರ್ಜೆಯನ್ನು ನೀಡಲಿ, ಆಮೀನ್ )ರವರು ತನ್ನ ಮನೆಯಲ್ಲಿ ತನ್ನೆಲ್ಲಾ ಕೆಲಸಗಳನ್ನು ಬದಿಗಿಟ್ಟು ಪ್ರತೀ ಶುಕ್ರವಾರ ಉಸ್ತಾದರ ಖುತುಬಾವನ್ನು ಆಲಿಸಲು ಕಾಯುತ್ತಿದ್ದರು, ಆ ಬಳಿಕ ಅವರ ಉಪದೇಶ ವನ್ನು ಚಾಚೂ ತಪ್ಪದೆ ಕೇಳುವುದನ್ನು ನಾನು ಕಂಡಿದ್ದೇನೆ.ಖುತುಬಾದಿಂದ ಹಿಡಿದು ಅವರ ಉಪದೇಶ ಸಂಪೂರ್ಣ ಮುಗಿಯುವವರೆಗೆ ಅವರು ಕುಳಿತಲ್ಲಿಂದ ಕದಲುವುದೇ ಇಲ್ಲ, ಕೊನೆಗೆ ಉಸ್ತಾದರ ನಿಧನ ವಾರ್ತೆ ಕೇಳಿದಾಗ ಗದ್ಗದಿತರಾಗಿ ದುಃಖಿಸುತ್ತಿರುವುದನ್ನೂ ಅಳುತ್ತಿರುವುದನ್ನೂ ನಾನು ಕಂಡಿದ್ದೇನೆ. ಹೀಗೆ ಅದೆಷ್ಟೋ ಊರಿನ ಮಹಿಳೆಯರು ಉಸ್ತಾದರ ಅಗಲುವಿಕೆಯ ವಾರ್ತೆ ಕೇಳಿ ದುಃಖಿಸಿದ್ದಿರ ಬಹುದು. ಊರಿನ ಉದ್ದಗಲಕ್ಕೂ ಬಿಟ್ಟು ಹೋದ ಉಸ್ತಾದರ ಅದೆಷ್ಟೋ ಒಳಿತಿನ ಕುರುಹುಗಳಿನ್ನೂ ಜೀವಂತವಿದ್ದು ಅದು ಇಂದಿನ ಪೀಳಿಗೆಯ ಜೀವನ ಕ್ರಮಕ್ಕೊಂದು ಉದಾಹರಣೆಗಳಷ್ಟೆ.

ಊರವರೆಲ್ಲರಿಗೂ ಇಷ್ಟವಾಗಿದ್ದ ಅವರು ಸೃಷ್ಟಿಕರ್ತನ ಕರೆಯೋಲೆಯಿಂದ 25 ವರ್ಷ ಗಳಿಂದ ನಮ್ಮ ಸಾಮೀಪ್ಯದಿಂದ ದೂರವಿದ್ದಾರೆ, ಅಲ್ಲಾಹನು ಅವರನ್ನು ಸ್ವರ್ಗವಾಸಿಯನ್ನಾಗಿಸಲಿ, ಆಮೀನ್.

ಕವನ

# ನನ್ನ ಬೆಲಿಯುಸ್ತಾ...

ಅನ್ಸಾರ್ ಕಾಟಿಪಳ್ಳ

ವಕೀಲರಲ್ಲ;
ಸಾಕ್ಷಿ ಸಂಧಾನವಿತ್ತು,
ಇಂಜಿನಿಯರರಲ್ಲ;
ಬಿರುಕು ಬೀಳದೆ ಊರು ಬೆಳೆದಿತ್ತು,
ವೈದ್ಯರಲ್ಲ;
ರೋಗಿಗಳ ಸಾಲು ತೃಪ್ತಿಯಾಗಿತ್ತು!
ಬೇಡಿಕೆಯಲ್ಲಿ ಇನ್ನೂ ಇತ್ತು
ಇಹದ ಒಪ್ಪಂದವಷ್ಟೂ ಮುಗಿದಿತ್ತು,
ಏನೆನ್ನಲಿ?
ಓದಿ ಮುಗಿಯದ ಕೃತಿಯಲ್ಲವೇ
ನಮ್ಮ ಬೆಲಿಯುಸ್ತಾ...

ಆದೆತ್ತರದ ತೆಂಗು,
ಹೊಟ್ಟೆಯೊಳಗಿಂದ ಹಿಡಿದು
ಬೆನ್ನು ತಿಕ್ಕುವವರೆಗೂ
ಅಡಿಯಿಂದ ಮುಡಿವರೆಗೆ ಉಪಯೋಗ,
ಇಹದ ಋಷಿಯರಸಿ
ಕೃತಕ ಮೋಹದ ಬಳಕೆಯೊಳಗೆ
ಭ್ರಮೆಯ ಜಾಡನ್ನಿಟ್ಟವರಿಗೇನು ಗೊತ್ತು
ಏನೆನ್ನಲಿ?
ಬದುಕು ದಾರಿಗಳ ಬಯಕೆ ಭಾಗವಲ್ಲವೇ
ನಮ್ಮ ಬೆಲಿಯುಸ್ತಾ...

ಕಡಲ ತೆರೆಗಳು ತೀರಕೆ ಮುತ್ತಿ
ತಿರುಗಿ ಹೋದಂತಿರುವ ಲಯ,
ಜಗದ ಸಾರವರಿಯದೆ
ನಾನು ನನ್ನವರು ಎಸೆದ ಕಸಕಡ್ಡಿಗಳ
ಕಣ್ಣೆದುರು ಮರಳಿ ತೀರಕೆ
ತಂದಿಟ್ಟ ರೀತಿ ಒಪ್ಪಿಕೊಳ್ಳದಿರಲಾದೀತೇ?
ಏನೆನ್ನಲಿ?
ಸ್ವಾರ್ಥ ಸೋಕದ ಭಾವವಲ್ಲವೇ
ನಮ್ಮ ಬೆಲಿಯುಸ್ತಾ...

ಆಯ್ದ ವಸ್ತುಗಳು ಬಲಿಷ್ಟ
ನೇಯ್ದ ವಸ್ತ್ರಗಳೂ ಸ್ವಾದಿಷ್ಟ
ಹೇಳಿಕೆಯ ವಿಷಯಗಳು
ವಸ್ತುವಿನ ವಸ್ತ್ರ ದಾಟದಂತಿತ್ತಲ್ಲವೇ?
ಪಾಠ ಶಬ್ದಗಳೇ ಗರಿಷ್ಟ
ಬೆತ್ತದರ್ಥಗಳೂ ವಿಶಿಷ್ಟ
ಆ ಯುಗದಿ ಈ ಮೊಗವು
ಅಭಿಮಾನವಾಗಿತ್ತಲ್ಲವೇ
ಏನೆನ್ನಲಿ?
ಅರ್ಥೈಸುವವರಿಗೆ ಅರ್ಥವಾದವರಲ್ಲವೇ
ನಮ್ಮ ಬೆಲಿಯುಸ್ತಾ...



# ಆದರ್ಶ ವ್ಯಕ್ತಿತ್ವದ ನನ್ನ ಪಿತ

ಅಬ್ದುಲ್ ಖಯ್ಯೂಮ್

ಬೆಲಿಯೊ ಉಸ್ತಾದರ ಪುತ್ರನಾಗಿದ್ದರೂ ನಾನು ಇಲ್ಲಿ ಪ್ರಸ್ತಾವಿಸುವುದು, ನನಗೆ ದೈಹಿಕ ಅನ್ನವನ್ನು ಬಡಿಸಿದ ತಂದೆಯ ಬಗ್ಗೆ ಅಲ್ಲ, ಬದಲಾಗಿ ಮೆದುಳಿಗೆ, ಬುದ್ದಿಗೆ ಮತ್ತು ಪಾರಮಾರ್ಥಿಕ ಜೀವನಕ್ಕೆ ಅಗತ್ಯವಿರುವ ಇಲ್ಮ್ (ಜ್ಞಾನ) ನೀಡಿದ ಸಾತ್ವಿಕ ಪುರುಷ ಉಸ್ತಾದರೊಬ್ಬರ ಬಗ್ಗೆ.

ನನ್ನ ಬಾಲ್ಯಾವಸ್ಥೆಯಲ್ಲಿ ನನಗೆ ಶಿಕ್ಷಣ ನೀಡುತ್ತಿರುವ ಸಂದರ್ಭದಲ್ಲಿ ಯಾವ ವಸ್ತುವನ್ನೂ ಪೋಲು ಮಾಡಲು ಸಮ್ಮತಿಸದ, ಮಿತವ್ಯಯವನ್ನೇ ಪಾಲಿಸಲು ಕಲಿಸುವ ಉಸ್ತಾದರು ನಾಲ್ಕು ಇಂಚಿನಷ್ಟು ಉದ್ದದ ಪೆನ್ಸಿಲ್ ಒಂದು, ಹಿಂದಿನ ದಿವಸ ನೀಡಿ ಮರುದಿನ ಕಳಕೊಂಡ ನನ್ನ ಹೊಣೆಗೇಡಿತನವನ್ನು ತಿದ್ದಲು ಸಿಕ್ಕಿದ ಬೆತ್ತದ ಹೊಡೆತ ದೀರ್ಘ ಕಾಲ ನನ್ನ ಮಸ್ತಿಸ್ಕದಿಂದ ಮರೆಯಾಗಿರಲಿಲ್ಲ. ಮಿತವ್ಯಯವಾದ ಪಾಠವನ್ನು ನಮಗೆ ಕಲಿಸುತ್ತಿದ್ದರು.

ಅವರ ಯವ್ವನ ಕಾಲದಲ್ಲಿ ಮಸೀದಿಯೊಳಗೆ ಕುಳಿತುಕೊಳ್ಳದೆ, ಊರಿನಲ್ಲಿ ಒಂದು ಸುತ್ತು ಸಾಯಂಕಾಲ ಇಲ್ಲವೇ ಬೆಳಿಗ್ಗಿನ ಹೊತ್ತು ನಡೆಯುತ್ತಿದ್ದರು. ಆ ಸಂದರ್ಭಗಳಲ್ಲಿ ರಸ್ತೆಯಲ್ಲಿ ಅಥವಾ ಮನೆಯ ಅಕ್ಕ ಪಕ್ಕದಲ್ಲಿ ಅವ್ಯವಸ್ಥೆ, ಗಲೀಜು, ಕಂಡಲ್ಲಿ, ಸಂಬಂಧಪಟ್ಟವರ ಗಮನಕ್ಕೆ ತಂದು, ಹೀಗೆ ಮಾಡಬಾರದು, ನಾವು ಉಪಯೋಗಿಸಿದ ನೀರು ಇನ್ನೊಂದು ಮನೆಯೊಳಗೆ ಹೋಗಿ ಅವರಿಗೆ ಉಪದ್ರವಿಸಬಾರದು,ಕಸ ಕಡ್ಡಿ, ಗಲೀಜು ವಸ್ತುಗಳಿಂದ ಬರುವ ಅನಾರೋಗ್ಯದ ಬಗ್ಗೆ ನೆರೆ ಹೊರೆಯವರಿಗೆ ಕಿವಿ ಮಾತು ಹೇಳುತ್ತಿದ್ದರು. ಸಂಬಂದಪಟ್ಟ

ಮನೆಯವರನ್ನು ಹೊರಗೆ ಕರೆದು ಆತ್ಮೀಯವಾಗಿ ತನ್ನ ಮನೆಯ ಗಲೀಜುಗಳನ್ನು ಇನ್ನೊಬ್ಬರ ಮನೆಗೆ ಬಿಡಬೇಡಿ, ನೀವು ಬಯಸುವ ಪರಿಸರ ಸ್ವಚ್ಛತೆಯನ್ನು ಇನ್ನಿತರರಿಗೂ ಬಯಸಿರಿ, ತಮ್ಮ ಪರಿಸರವನ್ನು ಸ್ವಚ್ಛವಾಗಿಡಿರಿ ಎಂದು ಬುದ್ಧಿವಾದವನ್ನು ಹೇಳುತ್ತಿದ್ದರು.

ತನ್ನ ಕೆಲಸದ ಮಧ್ಯೆ ಅಲ್ಪ ಬಿಡುವು ಸಿಕ್ಕಿದರೂ ಈದ್ಗಾ ಬಳಿ ತೆರಳುತ್ತಿದ್ದರು, ಖಬರ್ ಸ್ಥಾನದಲ್ಲಿ ಅಲ್ಲಾಹನ ಕರೆಗೆ ಓಗೊಟ್ಟು ಮಲಗಿರುವ ಸಹೋದರರಿಗಾಗಿ ಪ್ರಾರ್ಥಿಸುತ್ತಿದ್ದರು. ಅಲ್ಲದೆ ಹಾಗೆ ಹೋಗುವ ಸಂದರ್ಭದಲ್ಲಿ ಈದ್ಗಾ ಮಸ್ಜಿದ್‌ನ ಹಿಂಬಾಗಕ್ಕೆ ತೆರಳಿ ಇಸ್ಪೀಟು ಆಡುತ್ತಿದ್ದವರನ್ನು ಗದರಿಸಿ ಓಡಿಸುತ್ತಿದ್ದರು. ಆಗಿನ ಕಾಲದಲ್ಲಿ ಇಸ್ಪೀಟು ಎಳೆಯ ಜೂಜಾಟ ಸಾಮಾನ್ಯವಾಗಿತ್ತು. ಜನ ವಿರಳ ಪ್ರದೇಶಗಳಲ್ಲಿ, ದಟ್ಟ ಮರಗಳ ಮಧ್ಯೆ ಕದ್ದು ಮುಚ್ಚಿ ಜನರು ಇಸ್ಪೀಟ್ ಆಡುತ್ತಿದ್ದುದನ್ನು ಕಂಡು ಉಸ್ತಾದರ ಗಮನಕ್ಕೆ ಯಾರಾದರೂ ತಂದರೆ, ಆ ಪ್ರದೇಶಕ್ಕೆ ದಿಢೀರ್ ಭೇಟಿ ನೀಡಿ ಪರಿಶೀಲಿಸುತ್ತಿದ್ದರು, ಆ ಸಂದರ್ಭದಲ್ಲಿ ಅವರ ಕೈಗೆ ಸಿಕ್ಕಿ ಬಿದ್ದರೆ ಇಸ್ಪೀಟು ಕಾರ್ಡು, ಹಣವನ್ನು ಬಿಟ್ಟು ಓಡುತ್ತಿದ್ದುದನ್ನು ಜನರ ಬಾಯಿಯಿಂದ ಕೇಳಿದ್ದೇನೆ. ಪೊಲೀಸರಿಗೆ ಹೆದರದೇ ಇದ್ದರೂ, ಬೆಲಿಯೊ ಉಸ್ತಾದರನ್ನು ಕಂಡಾಗ ಹೆದರಿ ಓಡುತ್ತಿದ್ದರು. ಉಸ್ತಾದರು ಈ ಭಾಗದಲ್ಲಿ ಬರುತ್ತಿದ್ದಾರೆ ಎಂಬ ಸೂಚನೆ ಸಿಕ್ಕಿದರೆ ಇಸ್ಪೀಟು ಆಡುತ್ತಿದ್ದವರು ಅಲ್ಲಿಂದ ಕಾಲ್ಕೀಳುತ್ತಿದ್ದರು. ಎಷ್ಟೋ ಬಾರಿ ಆಟದಲ್ಲಿ ಮಗ್ನರಾಗಿದ್ದವರು ಅವರ ಕೈಗೆ ಸಿಕ್ಕಿ ಬಿದ್ದದ್ದೂ ಇದೆ.

ತಂದೆಯವರು ಮನೆಗೆ ಬೇಕಾದ ವಸ್ತುಗಳನ್ನು ತಾವೇ ಸ್ವಯಂ ಖರೀದಿಸಿ ತರುತ್ತಿದ್ದರು. ನಮ್ಮ ಕಲಿಯುವ, ಓದುವ ಸಮಯವನ್ನು ವ್ಯರ್ಥ ಮಾಡಲು ಬಿಡುತ್ತಿರಲಿಲ್ಲ. ಹಮ್ಮಬಾಕರ ಅಂಗಡಿಯ ಕ್ಯಾಕ ಖಾತೆ ಹೊಂದಿದ್ದರು. ಸಾಮಾನ್ಯರಲ್ಲಿ ಸಾಮಾನ್ಯನಾಗಿ ಸರಳ ಬದುಕನ್ನು ನೆಚ್ಚಿದ್ದ ಅವರು, ಮನೆಗೆ ಬೇಕಾದ ಹಾಲು, ಮೀನು ಅಥವಾ ಇನ್ನಿತರ ದೈನಂದಿನ ಸಾಮಗ್ರಿಗಳನ್ನು ಸ್ವಯಂ ಅಂಗಡಿಗಳಿಂದ ಖರೀದಿಸಿ ತರುತ್ತಿದ್ದರು. ತಮ್ಮ ದೈನಂದಿನ ಪ್ರತಿ ಖರ್ಚು ವೆಚ್ಚಗಳನ್ನು ಬರೆದಿಡುತ್ತಿದ್ದರು. ತನ್ನ ಬಿಳಿ ವಸ್ತ್ರಗಳನ್ನು ತಾನೇ ಸ್ವಯಂ ತೊಳೆಯುತ್ತಿದ್ದರು.ಅಡುಗೆ ಕೆಲಸಗಳಿಗೆ ಚಿಕ್ಕ ಪುಟ್ಟ ಸಹಾಯವನ್ನು ಮಾಡುತ್ತಿದ್ದರು.ತನ್ನ ಮನೆಯ ಎದುರುಗಡೆ ಇರುವ ಬಾವಿಯಿಂದ ಸ್ವತಃ ನೀರು ಸೇದಿ ತರುತ್ತಿದ್ದರು (ಮರಣ ಹೊಂದುವ ಎರಡು ದಿನ ಮುಂಚೆ ಅಂದ್ರೆ ಮಂಗಳವಾರ ಬೆಳಿಗ್ಗೆ ಸಹ). ಮಿತ ಭಾಷಿಯಾಗಿದ್ದ ಅವರು ಸರಳ ತಮಾಷೆಯ ಮಾತುಗಳನ್ನು ಆಡುತ್ತಿದ್ದರು.

ರಮಝಾನಿನಲ್ಲಿ ಕೆಲವೊಮ್ಮೆ ತರಾವೀಹ್ ನಮಾಜು ಮಾಡಿಸುತ್ತಿರುವ ಮಧ್ಯೆ, ಅಂಗಡಿ ಯವರೆಗೂ ತೆರಳಿ ಅಂಗಡಿ ಬಾಗಿಲಿನಲ್ಲಿ ಯಾರಾದರೂ ನಿಂತಿದ್ದರೆ ಅವರನ್ನು ಗದರಿಸಿ ಮಸೀದಿಗೆ ಕರೆದು ಕೊಂಡು ಬರುತ್ತಿದ್ದರು. ಬೀಡಿ, ಸಿಗರೇಟು ಎಳೆಯುತ್ತಿರುವ ಎಷ್ಟೇ ದೊಡ್ಡ ಗಣ್ಯ ವ್ಯಕ್ತಿಯಾಗಿದ್ದರೂ ಅವರ ನೆರಳು ಕಂಡರೆ ಅದನ್ನು ಅಲ್ಲಿಗೆ ಮೆಲ್ಲನೆ ಅಡಗಿಸಿ ನಂದಿಸಿ ಬಿಡುತ್ತಿದ್ದರು.

ಕುಟುಂಬ ಜೀವನವನ್ನು ಇಸ್ಲಾಮಿನ ಮಾದರಿ ಜೀವನವಾಗಿ ತೋರಿಸಿದ ನಮ್ಮ ಪಿತೃರೂ ತುಂಬು ಸಂಸಾರವನ್ನು, ಅವರ ಚಿಕ್ಕ ಆದಾಯದಲ್ಲಿ ಸಂತೃಪ್ತಿ ಜೀವನವನ್ನು ನಡೆಸುತ್ತಿದ್ದರು. ಅದರ ಮಧ್ಯೆಯೂ ನಮ್ಮ ಕೈಯಿಂದಲೇ ಬಡವರಿಗೆ ಚಿಲ್ಲರೆ ಹಣ ನೀಡಿ ದಾನ ನೀಡಲು ಅಭ್ಯಾಸ ಮಾಡಿಸುತ್ತಿದ್ದ ಅವರು, ತನ್ನ ಎಲ್ಲಾ ಮಕ್ಕಳ ಹುಟ್ಟಿದ ದಿನಕ್ಕೆ ತನ್ನಿಂದಾದ ಆ ಕಾಲದ ಚಿಲ್ಲರೆ ನಾಣ್ಯಗಳನ್ನು ನೀಡಿ ದಾನ ನೀಡಲು ಪ್ರೇರಿಪಿಸುತ್ತಿದ್ದರು. ಹೆಚ್ಚಾಗಿ ಅಕ್ಕಿಯನ್ನೇ ದಾನ ನೀಡಲು ಇಷ್ಟ ಪಡುತ್ತಿದ್ದ ಅವರು ಹೆಚ್ಚಿನ ಹರಕೆ ಯ ಸಂದರ್ಭಗಳಲ್ಲಿ ಅಕ್ಕಿಯನ್ನೇ ದಾನವಾಗಿ ನೀಡುತ್ತಿದ್ದರು. ರಮಝಾನಿನ ಪ್ರಾರಂಭದ

ದಿನಗಳಲ್ಲೇ ಅರ್ಹ ಕುಟುಂಬವನ್ನು ಆಯ್ದು ಅಕ್ಕಿಯನ್ನು ದಾನ ಮಾಡುತ್ತಿದ್ದರು. ಮಸೀದಿಗೆ ಬರುತ್ತಿದ್ದ ಮುಸಾಫಿರರನ್ನು ಜಮಾಅತಿನೊಳಗಿಂದ ಯಾರಾದರೂ ಮನೆಗೆ ಕರೆದು ಕೊಂಡು ಹೋಗುವುದು ಕಾಣದಿದ್ದರೆ ತನ್ನ ಮನೆಗೆ ಕರೆದು ಕೊಂಡು ಬರುತ್ತಿದ್ದು ಮನೆಯಲ್ಲಿ ಇದ್ದುದನ್ನು ಆತ್ಮೀಯವಾಗಿ ಉಣಬಡಿಸುತ್ತಿದ್ದರು.

ಮರಣ ಹೊಂದುವ ಎರಡು ದಿವಸಗಳ ಮುಂಚೆ ತನ್ನ ವಸ್ತ್ರಗಳಲ್ಲಿ ಎರಡು ಜೋಡಿಯನ್ನು ಮಾತ್ರ ಉಳಿಸಿ, ಬೇರೆಲ್ಲವನ್ನೂ ಯಾರಿಗಾದರೂ ಉಪಯೋಗವಿದ್ದವರಿಗೆ ದಾನ ಮಾಡಲು (ತನ್ನ ಪ್ರಥಮ ಪುತ್ರಿ ಫ್ಲಾತಿಮಾಳೊಂದಿಗೆ) ಆದೇಶಿಸಿದ್ದರು. ಅವರು ಬದುಕಿರುವಾಗ ಝಕಾತಿನ ಬಗ್ಗೆ ಹೆದರುತ್ತಾ ಇದ್ದವರು, ಎರಡು ವಸ್ತ್ರಕ್ಕಿಂತ ಹೆಚ್ಚು ಜೋಡಿಯಿದ್ದರೆ ಅದಕ್ಕೂ ಝಕಾತ್ ನೀಡಬೇಕಾಗಿ ಬರಬಹುದೆಂದು ಹೆದರಿಕೆಯಾಗುತ್ತಿದೆ ಎನ್ನುತ್ತಿದ್ದರು.

ಅವರ ತಾರುಣ್ಯದಲ್ಲಿ ಚಿಕ್ಕವರಿದ್ದಾಗ ಕಠಿಣ ಶಿಕ್ಷೆಗೆ ಒಳಗಾಗುತ್ತಿದ್ದ ನಾವು, ಆ ಬಳಿಕ ಅವರು ವೃದ್ಧಾಪ್ಯಕ್ಕೆ ತಲುಪಿದಾಗ ಶಿಕ್ಷಿಸುವುದು ಬಿಟ್ಟು ಗದರಿಸುವುದನ್ನು ಮಾಡುತ್ತಿರಲಿಲ್ಲ. ನಾವು ನಮ್ಮ ಕಿರಿಯ ಸಹೋದರರಿಗೆ ಗದರಿಸುವುದನ್ನು ಕಂಡರೆ ಯಾಕಾಗಿ ಗದರಿಸುತ್ತಿ ಎಂದು ನಮಗೆ ಕೇಳುತ್ತಿದ್ದದನ್ನು ನೆನೆಯುವಾಗ ಈಗಲೂ ಬಾವುಕರಾಗುತ್ತೇವೆ.

ಅವರ ನೆನಪುಗಳೆಲ್ಲವೂ ನಮ್ಮೊಳಗೆ ಭದ್ರವಾಗಿದೆ, ಅವರು ಕಲಿಸಿದ ದಾರಿಯಲ್ಲಿ, ಅವರ ಕನಸಿನ ಧ್ಯೇಯದಲ್ಲಿ ಅನಿವಾರ್ಯವಾಗಿ ನಾವು ಎಡವಿದಾಗ ಅವರು ಕಣ್ಣೆದುರಲ್ಲಿದ್ದಂತೆ ಭಾಸವಾಗುತ್ತದೆ. ಸದ್ಯ ಕರ್ತನ ನೆರಳಲ್ಲಿ ಆ ಜೀವ ಖುಷಿಯಾಗಿರಲಿ ಎಂಬ ಪ್ರಾರ್ಥನೆಯೊಂದಿಗೆ....

### ಪ್ರವಾದಿ ವಚನ

ಪ್ರವಾದಿ (ಸ.ಅ) ಹೇಳಿದರು – ಮುಸ್ಲಿಮರನ್ನು ಸಾಧ್ಯವಿದ್ದಷ್ಟು ಶರೀ ಶಿಕ್ಷೆ ವಿಧಿಸುವುದನ್ನು ತಪ್ಪಿಸಿರಿ. ಸ್ವಲ್ಪವಾದರೂ ಅವಕಾಶ ಗೋಚರಿಸಿದರೆ ಆರೋಪಿಯ ದಾರಿಯನ್ನು ತಡೆಯಿರಿ. ಏಕೆಂದರೆ ಅಧಿಕಾರಿಯು ಆರೋಪಿಯನ್ನು ಬಿಟ್ಟುಬಿಡುವುದರಲ್ಲಿ ತಪ್ಪು ಮಾಡುವುದು, ನಿರಪರಾಧಿಯೊಬ್ಬನಿಗೆ ಶಿಕ್ಷೆ ಮಾಡುವುದರಲ್ಲಿ ಮಾಡುವ ಪ್ರಮಾದಕ್ಕಿಂತ ಉತ್ತಮ.

# ಮರೆಯಲಾಗದ ಕರುಣೆಯ ಉಸ್ತಾದ್

ಅಬ್ದುಲ್ ಅಝೀಝ್
ಅಧ್ಯಕ್ಷರು, ಕಾಟಿಪಳ್ಳ ಮುಸ್ಲಿಂ ಯೂತ್ ಎಸೋಸಿಯೇಷನ್ ರಿಯಾದ್

ಯಾರನ್ನು ಕಂಡರೂ ಅವರು ಕೇಳುತ್ತಿದ್ದ 'ಎಂದೊಲ ಮೋನು' ಎಂಬ ಪ್ರಶ್ನೆಯಲ್ಲಿ ಎಷ್ಟೊಂದು ಆತ್ಮೀಯತೆ!!

ನನ್ನೊಂದಿಗಂತೂ ಇನ್ನಷ್ಟು ಪ್ರೀತಿಯಿಂದ 'ಅಝ್ಝಿಯಲ ಮೋನು' ಎಂದೇ ಕರೆದು ಮಾತನಾಡುತ್ತಿದ್ದರು ಅವರ ಮಾತಿನಲ್ಲಿ ಎಂತಹಾ ಕರುಣೆ!!.

ಅವರ ಮಧುರ ಕಂಠದ ಖಿರಾಅತ್, ಸುಮಧುರ ಶೈಲಿಯ ಖುತುಬಾ ಈಗಲೂ ಕಿವಿಯಲ್ಲಿ ಗುಂಯ್‌ಗುಟ್ಟುತ್ತಿದೆ.

ಹೌದು ಅವರೇ ನಮ್ಮೆಲ್ಲರ ಪ್ರೀತಿಯ ಬೆಲಿಯೊ ಉಸ್ತಾದ್ ಮರ್‌ಹೂಂ ಮುಹಮ್ಮದ್ ಸ್ವಾಲಿಹ್ ಉಸ್ತಾದ್. ಮನಮುಟ್ಟುವಂತೆ ಮಾಡುತ್ತಿದ್ದ ಅವರ ಪಾಠಗಳು ಆ ಬಾಲ್ಯದ ಎಳೆ ಮನಸ್ಸುಗಳಿಗೆ ಅರ್ಥವಾಗಲು ಅವರು ನೀಡುತ್ತಿದ್ದ ಉದಾಹರಣೆಗಳು ಎಲ್ಲವೂ ಎಷ್ಟೊಂದು ಮಧುರ ನೆನಪುಗಳಾಗಿ ಮನಸ್ಸಿನಾಳದಲ್ಲಿ ಅಚ್ಚಳಿಯದೆ ಇಂದಿಗೂ ಉಳಿದು ಬಿಟ್ಟಿದೆ.

ಒಮ್ಮೆ ಕಾಟಿಪಳ್ಳ ಜುಮ್ಮಾ ಮಸೀದಿಯಲ್ಲಿ ಪ್ರವಚನ ನೀಡಲು ಬಂದಿದ್ದ ಕೃಷ್ಣಾಪುರ ಜುಮ್ಮಾ ಮಸೀದಿಯ ಖತೀಬರಾಗಿದ್ದ (ಈಗ ಖಾಝಿಯಾಗಿರುವ) ಇಬ್ರಾಹಿಂ ಮದನಿ ಉಸ್ತಾದರು 'ಈ ಪರಿಸರದ ಫಿಕ್‌ಹ್ ಪಂಡಿತ ಸ್ವಾಲಿಹ್ ಮುಸ್ಲಿಯಾರ್' ಎಂದು ಉಸ್ತಾದರನ್ನು ಬಣ್ಣಿಸಿದ್ದರು.

ಬಾಲ್ಯದಲ್ಲಿ ನನಗೆ ನಿದ್ದೆಗಣ್ಣಿನಲ್ಲಿ ಎದ್ದು ನಡೆಯುವ ಅಭ್ಯಾಸವಿತ್ತಂತೆ. ನನ್ನ ತಂದೆಯವರು ಉಸ್ತಾದರ ಬಳಿ ಇದನ್ನು ಹೇಳಿದಾಗ ನನ್ನನ್ನು ಹತ್ತಿರ ಕರೆದು ರಾತ್ರಿ ಮಲಗುವುದಕ್ಕಿಂತ ಮುಂಚೆ 21 ಬಾರಿ 'ಬಿಸ್ಮಿಲ್ಲಾಹಿರ್ರಹ್ಮಾನಿ ರ್ರಹೀಂ' ಎಂದು ಓದಿ ಆ ಮೇಲೆ ಆಯತುಲ್ ಕುರ್‌ಸಿಯ್ಯಿ




ಅನಂತರ ಆಯತುಲ್ ಕುರ್‌ಸಿಯ್ಯಿಯ ಕೊನೆಯ ಆಯತನ್ನು 11 ಬಾರಿ ಓದಿ ಕೈಗೆ ಊದಿ ಮುಖ ಮತ್ತು ಮೈಮೇಲೆ ತಡವಲು ಹೇಳಿದ್ದರು. ಆಮೇಲೆ ಮೂವತ್ತೈದು ವರ್ಷಗಳು ಕಳೆದಿದ್ದರೂ ಈಗಲೂ ಅವರು ಹೇಳಿಕೊಟ್ಟ ಝಿಕ್ರ್,ಆಯತುಲ್ ಕುರ್‌ಸಿಯ್ಯ್ ಓದದೆ ನಿದ್ದೆ ಹತ್ತುವುದಿಲ್ಲ.

ನಿದ್ದೆಗಣ್ಣಿನಲ್ಲಿ ನಡೆಯುವ ಅಭ್ಯಾಸವಂತೂ ಅಂದೇ ಕೊನೆಯಾಗಿದೆ,

ಅವರ ಮೇಜಿನ ಮೇಲೆ ಯಾವಾಗಲೂ ಒಂದು ನಾಗರ ಬೆತ್ತವಿರುತ್ತಿತ್ತು. ಅವರು ಹೊಡೆಯ ಬೇಕಾಗಿರಲಿಲ್ಲ. ಬರೀ ಬೆತ್ತದ ಮೇಲೆ ಕೈ ಯಿಟ್ಟು ವಿದ್ಯಾರ್ಥಿಗಳನ್ನು ನಿಯಂತ್ರಿಸುವ ಕಲೆಗಾರಿಕೆ ಅವರಲ್ಲಿತ್ತು. ಅವರ ಮೇಲಿದ್ದ ಗೌರವ, ಭಯ ಬರೀ ಕ್ಲಾಸ್ ರೂಮಿಗೆ ಮಾತ್ರ ಸೀಮಿತವಾಗಿರಲಿಲ್ಲ, ಶಾಲಾ ಮೈದಾನದಲ್ಲಿ ಕ್ರಿಕೆಟ್ ಆಡುತ್ತಿರುವ ಸಮಯದಲ್ಲಿ ಅವರನ್ನು ದೂರದಿಂದ ಕಂಡರೂ ಅಡಗಿ ಕುಳಿತು ಕೊಳ್ಳುತ್ತಿದ್ದೆವು

ಮದರಸದಲ್ಲಿ ನಾವು ಕೊಡುತ್ತಿದ್ದ ಬ್ಯಾಲಾಸೆರೊ ಕಾಸ್ ಹತ್ತು ಪೈಸೆ ಇಪ್ಪತ್ತು ಪೈಸವನ್ನು ಮದರಸ ಅಥವಾ ಮಸೀದಿಗಾಗಿ ಮಾತ್ರ ಉಪಯೋಗಿಸುತ್ತಿದ್ದರು.

ಒಮ್ಮೊಮ್ಮೆ ಒಂದೆರಡು ವಿದ್ಯಾರ್ಥಿಗಳನ್ನು ಹತ್ತಿರ ಕರೆದು ಅವರ ಅವರ ಕೈಗೆ ದುಡ್ಡು ನೀಡುತ್ತಿದ್ದರು. ನನಗೂ ಒಂದೆರಡು ಬಾರಿ ನೀಡಿದ್ದರು. ಅವರ ಕೈಯಿಂದ ಹತ್ತು, ಇಪ್ಪತ್ತು ಪೈಸೆ ಪಡೆಯುವಾಗ ಉಂಟಾದ ಸಂತೋಷ ಯಾವ ಪ್ರಶಸ್ತಿ ಪಡೆದರೂ ಸಿಗಲಾರದು. ಅವರು ಯಾರಿಗೂ ತಿಳಿಯದೆ ತೀರಾ ಬಡವರಿಗೆ, ಒಂದೆರಡು ವಿಧವೆಯರಿಗೆ ಸಹಾಯ ಮಾಡುತ್ತಿದ್ದರು ಎಂಬ ವಿಷಯ ಅವರ ಮರಣಾ ನಂತರ ನನಗೆ ತಿಳಿದ ಸತ್ಯ. ಅವರಿಗೆ ಸಿಗುತ್ತಿದ್ದ ಕಡಿಮೆ ಸಂಬಳದಲ್ಲಿ ಉಳಿಸಿ ಅವರು ಮಾಡುತ್ತಿದ್ದ ದಾನವೇ ನನಗೂ ಸಮಾಜ ಸೇವೆ ಮಾಡಲು ಸ್ಫೂರ್ತಿಯಾಗಿದೆ ಎಂದರೆ ಅತಿಶಯೋಕ್ತಿಯಲ್ಲ.

'ಅಝ್ಝಿ, ತೆಲ್ಲ್ ಕೃಷ್ಣಾಪುರ ಪಳ್ಳಿತೋಲೊ ಬುಡಾಮ' ಎಂದು ಬೈಕಿನಲ್ಲಿ ಡ್ರಾಪ್ ಕೇಳಬೇಕಾದರೆ ಉಸ್ತಾದರ ಆಜ್ಞೆಯಂತಿರುವುದಿಲ್ಲ ಆ ಮಹಾನ್ ವ್ಯಕ್ತಿಯ ಮುಖದಲ್ಲಿ ಕೋರಿಕೆಯಿರುತ್ತಿತ್ತು

ಬೈಕಿನ ಹಿಂಬದಿಯ ಸೀಟಿನಲ್ಲಿ ಕುಳಿತರೆ ಸರಿಯಾದ ಭಂಗಿಯಲ್ಲಿ ಕುಳಿತು ಕಾಲುಗಳನ್ನು ಸರಿಯಾಗಿಟ್ಟು ಒಂದು ಕೈಯಲ್ಲಿ ಹಿಂದಿನಿಂದ ಗಟ್ಟಿಯಾಗಿ ಹಿಡಿದು ಸ್ಟಾರ್ಟ್ ಮಾಡು ಎಂದು ಹೇಳುವವರೆಗೂ ಸ್ಟಾರ್ಟ್ ಮಾಡುವಂತಿಲ್ಲ ಅಷ್ಟೊಂದು ಮುಂಜಾಗ್ರತೆ. ಅವರ ಜೀವನವೇ ನಮಗೊಂದು ಪಾಠ,ಎಷ್ಟೊಂದು ಸರಳ ಜೀವನ !!

ಉಸ್ತಾದರ ಕುರಿತು ಒಂದು ಲೇಖನ ಬರೆಯಬೇಕೆಂದು ಆಸೆಯಿತ್ತು ಆದರೆ ಏನು ಬರೆಯಬೇಕೆಂದು ಯೋಚಿಸುತ್ತಲೇ ಕೆಲವು ದಿನ ಕಳೆಯಿತು. ಒಮ್ಮೆ ಬರೆಯಲು ಪ್ರಾರಂಭಿಸಿದ ಮೇಲೆ ನೆನಪಿನ ಬುತ್ತಿ ಬಿಚ್ಚುತ್ತಲೇ ಇದೆ ಪ್ರಾಯಶಃ ನನ್ನ ಒಬ್ಬನ ಅನುಭವವೇ ಒಂದು ಪುಸ್ತಕವಾಗಬಹುದು ಅವರು ಆಲಿಂಗಳಿಗೆ, ಇಲ್ಮಿಗೆ ಎಷ್ಟು ಮಹತ್ವ ಮತ್ತು ಗೌರವವನ್ನು ಕೊಡುತ್ತಿದ್ದರು ಎಂದು ನನ್ನ ಕಣ್ಣ ಮುಂದೆ ನಡೆದ ಘಟನೆಯೊಂದನ್ನು ಹೇಳದಿದ್ದರೆ ಈ ಲೇಖನವು ಅಪೂರ್ಣವಾಗಬಹುದು. ಒಮ್ಮೆ ಉಸ್ತಾದರನ್ನು ಕಾಣಲು ಅವರ ಮನೆಗೆ ಹೋಗಿದ್ದೆ. ಮಕ್ಕಳಿಗೆ ಟ್ಯೂಷನ್ ಕೊಡುತ್ತಿದ್ದ ಉಸ್ತಾದರು ಎಂದಿನಂತೆ 'ಅಝ್ಝಿಯಲ ಮೋನು' ಎಂದು ಮುಗುಳು ನಗುವಿನಿಂದ ಸ್ವಾಗತಿಸಿ, ಕುಳಿತುಕೊಳ್ಳುವಂತೆ ಸೂಚಿಸಿ ಟ್ಯೂಷನ್ ಮುಂದುವರಿಸಿದರು.

ಆಗ ಉಳ್ಳಾಲದಲ್ಲಿ ಧಾರ್ಮಿಕ ವಿಧ್ಯಾಭ್ಯಾಸ ಮಾಡುತ್ತಿದ್ದ ಉಸ್ತಾದರ ಮಗನಾದ ಹಬೀಬ್ ಉಸ್ತಾದರರು ಸಲಾಂ ಹೇಳುತ್ತಾ ಮನೆಯೊಳಗಡೆ ಪ್ರವೇಶಿಸಿದರು.



ಕುಳಿತುಕೊಂಡು ಟ್ಯೂಷನ್ ಕೊಡುತ್ತಿದ್ದ ಉಸ್ತಾದರು ಎದ್ದು ನಿಂತು ಹಬೀಬ್ ಉಸ್ತಾದರು ಒಳಗಡೆ ಹೋದ ಮೇಲೆ ಕುಳಿತರು ತನ್ನ ಮುಂದೆ ನಿಂತಿರುವುದು ತನ್ನ ಮಗನಾದರೂ ಓರ್ವ ಮುತಅಲ್ಲಿಮ್ ಮತ್ತು ಇಲ್ಮಿಗೆ ಕೊಟ್ಟ ಗೌರವ ಇದಾಗಿತ್ತು. ಈ ಘಟನೆ ನನ್ನನ್ನು ಮೂಕವಿಸ್ಮಿತನನ್ನಾಗಿಸಿತು. ಮಾತ್ರವಲ್ಲ ಈಗಲೂ ನನಗಿಂತ ಸಣ್ಣ ಪ್ರಾಯದ ಮುತಅಲ್ಲಿಮ್‌ಗಳನ್ನು ಕಂಡರೂ ನನ್ನನ್ನು ಎದ್ದು ನಿಲ್ಲುವಂತೆ ಪ್ರೇರೇಪಿಸುತ್ತಿದೆ.

ಇಂದು ಆಲಿಮ್‌ಗಳನ್ನು ಅವಹೇಳನ ಮಾಡುವ ಯುವಕರಿಗೆ ಖಂಡಿತವಾಗಿಯೂ ಇದರಲ್ಲಿ ಪಾಠವಿದೆ.

ಅವರು ಗುರುಗಳಾಗಿದ್ದರು, ಹಿರಿಯ ಸಹೋದರನಂತಿದ್ದರು, ಆತ್ಮೀಯ ಹಿತೈಷಿಯಾಗಿದ್ದರು. ಅವರದು ಊರಿನ ಹಿರಿಯ ಕಿರಿಯರೆಲ್ಲರಿಂದಲೂ ಗೌರವ ಪಡೆದುಕೊಂಡ ಅಪರೂಪದ ವ್ಯಕ್ತಿತ್ವ,ಅವರೊಂದಿಗಿನ ಒಡನಾಟ ಒಂದು ಮರೆಯಲಾಗದ ಅನಿರ್ವಚನೀಯ ಅನುಭವ.

ಅಲ್ಲಾಹನು ಅವರ ಪರಲೋಕ ಜೀವನವನ್ನು ಸಂತೋಷದಾಯಕವಾಗಿರಿಸಲಿ, ಅವರ ಬರ್ಕತ್ತ್‌ನಿಂದ ನಮ್ಮೆಲ್ಲರನ್ನೂ ಇಹ ಪರ ವಿಜಯಿಗಳನ್ನಾಗಿ ಮಾಡಲಿ, ಆಮೀನ್ ಯಾ ರಬ್ಬಲ್ ಆಲಮೀನ್.

### ಪ್ರವಾದಿ ವಚನ

ಪ್ರವಾದಿ (ಸ.) ಹೇಳಿದರು – ಯಾವ ಕಾರ್ಯದ ಬಗ್ಗೆ ಸಂದೇಹವಿದೆಯೋ ಅದನ್ನು ಮಾಡಬೇಡಿ. ನಿಮ್ಮನ್ನು ಸಂದೇಹಕ್ಕೀಡು ಮಾಡದಂತಹ ಕಾರ್ಯಗಳನ್ನೇ ಮಾಡಿರಿ. ಏಕೆಂದರೆ ಸತ್ಯವು ಸಂತೃಪ್ತಿಯಾಗಿದೆ ಮತ್ತು ಅಸತ್ಯವು ಅತೃಪ್ತಿಯಾಗಿದೆ.



# ಆ ಕೊನೆಗಳಿಗೆಯ ನೆನಪು

ಅಬ್ದುಲ್ ಸಮದ್ ಕಾಟಿಪಳ್ಳ

ಅಂದು ಗುರುವಾರ, ಎಂದಿನಂತೆ ಅಂದೂ ನಾನು ಪುಟ್ಟ ಪುಟ್ಟ ಮಕ್ಕಳನ್ನು ನನ್ನ ಓಮ್ನಿ ಕಾರಿನಲ್ಲಿ ಶಾಲೆಯಿಂದ ಕರೆದುಕೊಂಡು ಹೋಗುತ್ತಿದ್ದೆ, ಕಾಟಿಪಳ್ಳ ದಾಟಿ ಕೃಷ್ಣಾಪುರ ಏಳನೇ ಬ್ಲಾಕ್ ಬದ್ರಿಯಾ ಜುಮಾ ಮಸೀದಿಯ ದಾರಿಯಲ್ಲಿ ನನ್ನ ಪ್ರೀತಿಯ ಅಲಿಯಂಕ ಮತ್ತು ನನ್ನ ಅಕ್ಕ ನಡೆದುಕೊಂಡು ಹೋಗುವುದನ್ನು ನೋಡಿ ನಾನು ಕಾರು ನಿಲ್ಲಿಸಿದೆ, ಅಲಿಯಂಕ ಎಲ್ಲಿಗೆ ಸವಾರಿ? ಊರು ನನ್ನನ್ನು ಅರಿತ ನನ್ನದೇ ಶೈಲಿಯಲ್ಲಿ ಕೇಳಿದೆ, ನನ್ನ ಮಾತಿನ ಶೈಲಿಯ ಧಾಟಿಯಲ್ಲಿಯೇ ಅವರು ಹಾಸ್ಯ ಚಟಾಕಿಯೊಂದಿಗೆ ಉತ್ತರಿಸಿದರು, ನನಗೆ ಅವರು ಅಲಿಯಂಕವಾದರೂ ಊರಿಗೂರೇ ಪ್ರೀತಿಯ ಬೆಲಿಯೊ ಉಸ್ತಾದ್ ಅಲ್ಲವೇ? ಅವರನ್ನು ಹತ್ತಿರದಿಂದ ಬಲ್ಲವರಿಗೆ ಅವರ ಹಾಸ್ಯಭರಿತ ಮಾತುಗಳು ಮರೆಯಲು ಸಾಧ್ಯವಿಲ್ಲ ಅಲ್ಲವೇ? ಮಾತು ಕುಶಲೋಪರಿಯತ್ತ ಸಾಗಿ ಕಾರಿನಲ್ಲಿದ್ದ ಮಕ್ಕಳೊಂದಿಗೂ ಮಕ್ಕಳ ಭಾಷೆಯಲ್ಲಿಯೇ ಮಾತನಾಡುತ್ತಾ ಅವರು ಮುಂದುವರಿದರು, ಮಕ್ಕಳನ್ನು ಹೊತ್ತ ನನ್ನ ಕಾರು ಮುಂದೆ ಚಲಿಸಿತ್ತು.

ಚೊಕ್ಕಬೆಟ್ಟು ಪರಿಸರದಲ್ಲಿ ಮಕ್ಕಳನ್ನು ಅವರವರ ಮನೆಗೆ ಬಿಟ್ಟು ತಿರುಗಿ ಅದೇ ದಾರಿಯಲ್ಲಿ ಬರುವಾಗ ನಾನು ಅಲಿಯಂಕರವರನ್ನು ಮಾತನಾಡಿಸಿದ ಸ್ಥಳದಲ್ಲಿ ಜನ ಸೇರಿತ್ತು, ಕಾರು ನಿಲ್ಲಿಸಿ ಏನೆಂದು ಕೇಳಿದಾಗ ಸಿಡಿಲೆರಗಿದಂತಾಗಿತ್ತು, ಕಾಟಿಪಳ್ಳದ ಖತೀಬರು ಇದೀಗ ಈ ಮಸೀದಿಯಲ್ಲಿ ವಫಾತಾದರು, ಆ ಕ್ಷಣ ನನಗೆ ಏನಾಯಿತೋ ಗೊತ್ತಿಲ್ಲ, ಕರ್ತನ ಕರೆಯಂತೂ

ಅಲಿಯಂಕರಿಗೆ ಬಂದಿತ್ತು. ಹೌದು ನನ್ನ ಅಲಿಯಂಕ, ಅಲ್ಪ ಹೊತ್ತು ಮೊದಲು ಹಾಸ್ಯ ಶೈಲಿಯಲ್ಲಿ ನನ್ನೊಂದಿಗೆ ಮಾತನಾಡಿದ ನನ್ನ ಅಲಿಯಂಕ ಇನ್ನಿಲ್ಲವೆಂಬ ಸುದ್ದಿ, (ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್)

ಅಲ್ಲಿ ಇನ್ನಷ್ಟು ನಿಲ್ಲಲಾಗಲಿಲ್ಲ, ಕಾಟಿಪಳ್ಳಕ್ಕೆ ಹೋಗಿ ಈ ನಂಬಲಾರದ ವಿಷಯ ಎಲ್ಲರಿಗೂ ತಿಳಿಸಿ ಅಲ್ಲಿಂದ ಅಲಿಯಂಕರ ಮನೆಗೆ ಹೋದೆ, ಕಾಲಿಂಗ್ ಬೆಲ್ ಮಾಡಿದರೂ ಬಾಗಿಲು ತೆಗೆಯಲು ಅಲ್ಲಿ ಯಾರೂ ಇಲ್ಲ, ನನ್ನ ಅಲಿಯಂಕನ ಮನೆ ನನಗೆ ಚಿರಪರಿಚಿತವಾದ್ದರಿಂದ ಹಿಂಬಾಗಿಲಲ್ಲಿ ಹೋದಾಗ ಬೀಗ ಜಡಿದಿತ್ತು, ಕಲ್ಲಿನ ಸಹಾಯದಿಂದ ಬೀಗ ಮುರಿದು ಒಳಗೆ ಹೋಗಿ ಎರಡು ಬೆಂಚುಗಳನ್ನು ಒಟ್ಟು ಸೇರಿಸಿ ಮುಂದಿನ ಬಾಗಿಲು ತೆರೆದೆ, ನಗು ನಗುತ್ತಲೇ ಅಕ್ಕಳೊಂದಿಗೆ ಹೊರ ಹೋಗಿದ್ದ ನನ್ನ ಅಲಿಯಂಕ, ನನ್ನ ಬೆಲಿಯೊ ಉಸ್ತಾದ್ ರ ನಿಶ್ಚಲ ದೇಹ ನಾನು ಬಾಗಿಲು ತೆಯುವುದನ್ನೇ ಕಾಯುವಂತಿತ್ತು, ಮಯ್ಯತ್ ಮನೆ ಬಾಗಿಲಿಗೆ ಮುಟ್ಟಿತ್ತು.

ಅವರ ಕೊನೆಗಳಿಗೆಯಲ್ಲಿನ ಹಾಸ್ಯಭರಿತ ಮಾತುಗಳಿಗೆ ನಾನೇ ಸಾಕ್ಷಿಯಾಗಬಹುದೆಂದು ನಾನೇ ಊಹಿಸದ ಕಾಟಿಪಳ್ಳದ ಈ ಮೇರು ಜೀವ ಈಗ ಇತಿಹಾಸ, ಅವರ ನೆನಪುಗಳೆಲ್ಲವನ್ನೂ ನನಗೆ ನೀಡಿದ ಪುಟಗಳ ಮಿತಿಯಲ್ಲಿ ವಿವರಿಸಲು ಅಸಾಧ್ಯವಷ್ಟೆ. ಸುಮಾರು 40 ವರ್ಷ ಯಾವುದೇ ಕಪ್ಪು ಚುಕ್ಕೆ ಇಲ್ಲದೆ ಎಲ್ಲರೊಂದಿಗೂ ಅರಿತು ಬೆರೆತ ಬೆಲಿಯೊ ಉಸ್ತಾದ್ ಊರಿನ ಸಮಸ್ಯೆಗಳಿಗೂ,ಕುಂದು ಕೊರತೆಗಳಿಗೂ ತಡೆಯಾಗುವ ಕೀಲಿ ಕೈಯ್ಯಂತಿದ್ದರು. ಜಮಾಅತಿನ ಜನಗಳನ್ನು ತನ್ನ ಮಂದಹಾಸದ ನಗುವಿನಲ್ಲೇ ತನ್ನ ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿದ್ದರು. ಉಸ್ತಾದರ ಆ ತುಂಬಿದ ಕೊಡದಲ್ಲಿ ಭದ್ರವಾಗಿದ್ದ ಅವರ ಸ್ವಭಾವ, ಗುಣ ನಡತೆ, ನಗು ಮೊಗದ ಸಂಭಾಷಣೆ, ಆಕರ್ಷಕ ಧ್ವನಿ ಎಲ್ಲವೂ ಈಗ ಮರೆಯದ ನೆನಪು ಮಾತ್ರ, ಅವರ ಅಂತಿಮ ಯಾತ್ರೆಯಲ್ಲಿ ಸೇರಿದ್ದ ಜನಸ್ತೋಮ ಅವರ ಜನಪ್ರಿಯತೆಗೆ ಸಾಕ್ಷಿಯಾಗಿತ್ತು.

ಸೃಷ್ಟಿಕರ್ತನು ಅವರನ್ನು ಅತ್ಯುನ್ನತ ಸ್ಥಾನ ನೀಡಿ ಗೌರವಿಸಲಿ ಆಮೀನ್.

**ಪ್ರವಾದಿ ವಚನ**

ಪ್ರವಾದಿ (ಸ.ಅ.) ಹೇಳಿದರು – ವಿದ್ಯೆ ಕಲಿಸಿರಿ. ಸುಲಭಗೊಳಿಸಿರಿ (ಮೂರು ಬಾರಿ) ಮತ್ತು ಕೋಪ ಹೆಚ್ಚಿದಾಗ ಮೌನ ಪಾಲಿಸಿರಿ (ಎರಡು ಬಾರಿ)



# ನಿಸ್ವಾರ್ಥ ಮನಸ್ಸಿನ ಬೆಲಿಯೊ ಉಸ್ತಾದ್

ಮುಹಮ್ಮದ್ ತಮೀಮ್ ಕಾಟಿಪಳ್ಳ
ಮಾಜಿ ಅಧ್ಯಕ್ಷರು, ಪಣಂಬೂರು ಮುಸ್ಲಿಂ ಜಮಾಅತ್ ಕಾಟಿಪಳ್ಳ

ನಾನಾಗ ಇನ್ನೂ ಚಿಕ್ಕವನು, ಮನೆಯಲ್ಲಿ ಕೊನೆಯ ಮಗನಾದ್ದರಿಂದಲೋ ಏನೋ ಪ್ರೀತಿ ಅಲ್ಪ ಜಾಸ್ತಿ ಇರುವುದು ಈ ಜಗದ ಸೋಜಿಗವೇ ಸರಿ, ಮನೆಯೊಳಗೆ ತುಂಬಾ ಮುದ್ದು ಮಾಡುತ್ತಿದ್ದ ನನಗೆ ಉಸ್ತಾದಿನ ದರ್ಸಿನಲ್ಲಿ ಕುಳಿತುಕೊಳ್ಳುವವರೆಗೂ ಬೆತ್ತದ ಪೆಟ್ಟು ಏನೆಂದೇ ಗೊತ್ತಿರಲಿಲ್ಲ. ಆ ಪೆಟ್ಟು ಅಂದು ನನಗೆ ಸಿಕ್ಕಿದಾಗ ದಿನವಿಡೀ ಅಳು ನಿಂತಿರಲಿಲ್ಲ.ಬರಬರುತ್ತಾ ಆ ಬೆತ್ತದ ಪೆಟ್ಟಿನ ತಿರುಳು ನನಗರ್ಥವಾಗುತ್ತಾ ಬಂತು. ಆದರೆ ಆ ಬೆತ್ತದ ನೋವಿನ ಆಳ ಸಂಪೂರ್ಣ ಅರಿಯುವಾಗ ಅವರು ನನ್ನೊಂದಿಗಿರಲಿಲ್ಲ, ಆ ನೆನಪುಗಳು ಮಾಸದೆ ಇಂದಿಗೂ ಉಳಿದಿದೆ ಎಂಬುವುದಂತೂ ಸತ್ಯ.

ಆದರೆ ಬೆಲಿಯೊ ಉಸ್ತಾದರ ಬಗ್ಗೆ ಬಹಳಷ್ಟು ಕೇಳಿದ್ದೇನೆ, ನನ್ನ ಮನೆಯೊಳಗೆ ಅವರ ನಡೆಗಳ ಬಗ್ಗೆ ಕೊಂಡಾಡಿರುವುದನ್ನು ಕಂಡಿದ್ದೇನೆ. ನನ್ನ ಅಣ್ಣ ಮತ್ತು ಅಕ್ಕಂದಿರು ಅವರ ಬೆತ್ತದ ರುಚಿಯನ್ನು ಸ್ವಾದಿಸಿದವರೇ, ನನ್ನ ತಾಯಿಗೆ ಈಗಲೂ ನೆನಪಿದೆ, ಮನೆಯ ಕಾರ್ಯಕ್ರಮದಲ್ಲಿ ಅವರು ಪಾಳ್ಗೊಂಡರೆ ಅವರಿಂದ ಬರುವ ಅವಶ್ಯಕತೆ ಬರೀ ಬಿಸಿನೀರು, ಆ ಬಿಸಿನೀರು ಸಾಧಾರಣಕ್ಕಿಂತ ಸ್ವಲ್ಪ ಜಾಸ್ತಿಯೇ ಇರುತ್ತಿತ್ತು, ಅವರ ಧ್ವನಿ ಅಲ್ಪವೂ ಏರುಪೇರಾಗದಂತೆ ಅವರ ಜಾಗರೂಕತೆಯೊಂದಿಗೆ ಊರಿಡೀ ಜಾಗೃತವಾಗಿತ್ತೆಂಬುವುದು ಅವರ ಬಗ್ಗೆ ಕೇಳಿದ

ವಿಷಯಗಳಲ್ಲೊಂದು. ಮದ್ರಸಾದೊಳಗಿನ ಶಿಸ್ತು ಅಲ್ಪ ಜಾಸ್ತಿಯೆಂದರೂ ತಪ್ಪಾಗಲಾರದಂತೆ, ಈ ಅಲ್ಪ ಜಾಸ್ತಿಯಲ್ಲಿ ಊರಿನ ಭವಿಷ್ಯವಿತ್ತಂತೆ, ಊರಿನ ಭವಿಷ್ಯ ಅಂದಿನ ವಿದ್ಯಾರ್ಥಿಗಳಾದ ಇಂದಿನ ನಾವುಗಳಲ್ಲವೇ? ಅಂದಿನ ವಿದ್ಯಾರ್ಥಿಗಳಲ್ಲಿ ಉಸ್ತಾದರ ಬಗ್ಗೆ ಈ ಕೃತಿ ಹೊರತರುವ ಖುಷಿಯಲ್ಲಿ ನಾನೂ ಒಬ್ಬ ಭಾಗೀದಾರನೆಂದು ಹೇಳಲು ನನಗಂತೂ ಬಹಳ ಖುಷಿ ಇದೆ.

ಬೆಲಿಯೊ ಉಸ್ತಾದರಿಂದ ಕಲಿತ ಅದೆಷ್ಟು ವಿದ್ಯಾರ್ಥಿಗಳೀಗ ದೇಶ ವಿದೇಶಗಳಲ್ಲಿ ಯಶಸ್ವಿಯಾಗಿದ್ದಾರೆಂದು ಈಗಲೂ ನಮಗೆ ಕಾಣಲು ಸಾಧ್ಯವಿದೆ. ತಂದೆಯವರು ಹೇಳಿದ ನೆನಪಿನಂತೆ ಅವರಿರುವ ಸಮಯದಲ್ಲಿ ವಿದೇಶ ಯಾತ್ರೆ ಹೋಗುವವರು ಬೆಲಿಯೊ ಉಸ್ತಾದರ ಬಳಿಗೆ ಹೋಗಿ ಅವರಿಂದ ಆಶೀರ್ವಾದ ಪಡೆದೇ ಯಾತ್ರೆ ಮಾಡುತ್ತಿದ್ದರು, ಆ ಸಮಯದಲ್ಲಿ ಉಸ್ತಾದದರ ದುಆದೊಂದಿಗೆ ಉಸ್ತಾದರ ಹುರಿದುಂಬಿಸುವ ಮಾತಿನೊಂದಿಗೆ ವಿದೇಶೀ ನೆಲದಲ್ಲಿ ಅದೆಷ್ಟೋ ಗೆದ್ದವರಿದ್ದಾರೆ, ಕಾಟಿಪಳ್ಳದ ಹೆಸರಿಗೆ ಹೊಸ ಹುರುಪನ್ನು ನೀಡಿದವರಿದ್ದಾರೆ. ಇದೆಲ್ಲವು ಬೆಲಿಯೊ ಉಸ್ತಾದರ ಕೊಡುಗೆಯೆಂದು ಹೇಳಿದರೂ ತಪ್ಪಾಗಲಾರದು.

ಅವರ ಅಗಲುವಿಕೆಯ ನಂತರ ಪ್ರತೀ ವರ್ಷ ಅವರ ನೆನಪನ್ನು ಜಮಾಅತ್ ಕಮಿಟಿ ಮಾಡುತ್ತಿದ್ದರೂ ಅದು ಏನೇನೂ ಸಾಲದು ಎಂದು ನನಗೀಗ ಅರಿವಾಗುತ್ತಿದೆ. ಅದಕ್ಕೆ ಕಾರಣವಾಗಿರುವುದು ಈ ಕೃತಿಗಾಗಿ ಒಂದಷ್ಟು ವಿಷಯವನ್ನು ಮನೆಯವರೊಂದಿಗೆ ಕಲೆಹಾಕಿದಾಗ, ಮನೆಯವರಿಂದ ಸಿಕ್ಕ ಉಸ್ತಾದರ ಬಗೆಗಿನ ಹೆಮ್ಮೆಯ ಅಚ್ಚಳಿಯದ ನೆನಪುಗಳು, ಊರಿಗಾಗಿ ಸಂಪೂರ್ಣ ಸೇವೆ ನೀಡಿ, ಅವರಿಂದ ಕಲಿತ, ಅವರನ್ನು ಕಂಡ ಜಮಾಅತಿನ ಪ್ರತಿಯೊಬ್ಬರ ಸ್ಮೃತಿಪಟಲದಲ್ಲಿ ಮರೆಯದೆ ಉಳಿದ ಬೆಲಿಯೊ ಉಸ್ತಾದ್ ನಿಜಕ್ಕೂ ನಮ್ಮೂರಿನ ಹೆಮ್ಮೆ.

ಇನ್ಶಾ ಅಲ್ಲಾಹ್ ಬೆಲಿಯೊ ಉಸ್ತಾದರ ನೆನಪು ಈ ಕೃತಿಯ ಮುಖಾಂತರ ಊರಿಗೆ ಮತ್ತು ಉಸ್ತಾದರನ್ನು ಅವರ ವಿದ್ಯಾರ್ಥಿಗಳೆಲ್ಲರಿಗೂ ಮತ್ತೊಮ್ಮೆ ನೆನಪಿಸುವ ಪ್ರಯತ್ನ ಶ್ಲಾಘನೀಯ, ಅನ್ಸಾರ್ ಕಾಟಿಪಳ್ಳ ಮತ್ತು ತಂಡದ ಈ ಹೆಜ್ಜೆ ಖಂಡಿತವಾಗಿಯೂ ಯಶಸ್ವಿಯಾಗಿ ಊರಿನ ಅಂದಿನ ನೆನಪಿನ ಬುತ್ತಿ ಮತ್ತೊಮ್ಮೆ ತೆರೆಯಲಿದೆ, ಉಸ್ತಾದರ ಆ ಸ್ವಾರ್ಥವಿಲ್ಲದ, ಸುಸ್ತು ಅರಿಯದ ನೆನಪು ಮರುಕಳಿಸುವ ಮುಖಾಂತರ ಇತರ ಉಸ್ತಾದರುಗಳಿಗೆ ಮಾದರಿಯಾಗಿ ಅವರ ಸ್ಥಾನವನ್ನು ತುಂಬುವ ಕಾತುರವಿರಲಿ, ನಮ್ಮ ಬೆಲಿಯೊ ಉಸ್ತಾದ್ ಸ್ವರ್ಗದಲ್ಲಿ ನಮ್ಮೆಲ್ಲರನ್ನೂ ಕಾಯುತ್ತಿರಲಿ.. ಆಮೀನ್.

**ಪ್ರವಾದಿ ವಚನ**

ಪ್ರವಾದಿ (ಸ.) ಹೇಳಿದರು – ನೀವೆಲ್ಲಿದ್ದರೂ ಅಲ್ಲಾಹನನ್ನು ಭಯಪಡಿರಿ. ಕೆಡುಕಿನ ಬಳಿಕ ಒಳಿತನ್ನು ಮಾಡಿ ಆಕೆಡುಕನ್ನು ಅಳಿಸಿರಿ. ಮತ್ತು ಜನರೊಂದಿಗೆ ಸೌಜನ್ಯದಿಂದ ವರ್ತಿಸಿರಿ.

# ಬೆಲಿಯೊ ಉಸ್ತಾದ್; ತ್ಯಾಗ ಮತ್ತು ಸಹಿಷ್ಣುತೆಯ ಪ್ರತಿರೂಪ

ಎಸ್.ಯು. ಅಶ್ಫಾಕ್ ಅಹ್ಮದ್, ಕಾಟಿಪಳ್ಳ

ಮಹಾನುಭಾವರು ಜನಮಾನಸದಲ್ಲಿ ಮರಣದ ನಂತರವೂ ಅಮರರಾಗುವುದು ಅವರ ಬದುಕಿನಲ್ಲಿ ಅಳವಡಿಸಿಕೊಂಡಿರುವ ಉದಾತ್ತ ಮತ್ತು ಶ್ರೇಷ್ಠವಾದ ಮೌಲ್ಯಗಳಿಂದಾಗಿದೆ.

ಉಸ್ತಾದರ ಸೌಜನ್ಯತೆ, ಸಹಿಷ್ಣುತೆ, ತ್ಯಾಗ ಮತ್ತು ಸಜ್ಜನಿಕೆಗೆ ಉದಾಹರಣೆಯಾಗಬಲ್ಲ ಒಂದೆರಡು ಅಂಶಗಳು ನನ್ನಲ್ಲಿ ಬಹಳ ಪ್ರಭಾವವನ್ನು ಬೀರಿದೆ.

ಸಹಿಷ್ಣುತೆ ಅಂದರೆ ತನ್ನ ಹಿತಾಸಕ್ತಿಗೆ ವಿರುದ್ಧವಾದ ಅಥವಾ ತನಗಿಷ್ಟವಿಲ್ಲದ ಯಾವುದಾದರೂ ಘಟನೆಗಳನ್ನು ಸಹಿಸುವುದು ಎಂದಾಗಿದೆ. ಸಹಿಷ್ಣುತೆಯ ಪರಮೋಚ್ಚ ಮಟ್ಟ ಎಂದರೆ ತನ್ನ ಹಿತಾಸಕ್ತಿಗೆ ವಿರುದ್ಧವಾಗಿದ್ದರೂ ಅದನ್ನು ಸಹಿಸಿ ಸ್ವೀಕರಿಸುವ ಮನೊಸ್ಥಿತಿ. ಇಂತಹ ಮನಸ್ಥಿತಿಯನ್ನು ಹೊಂದಿರುವವರು ಸೂಫಿ ಕಲ್ಪನೆ ಮತ್ತು ವಿಚಾರಧಾರೆಗಳಿಗೆ ಅತ್ಯಂತ ನಿಕಟರಾಗಿರುತ್ತಾರೆ. ತ್ಯಾಗದ ಮಾರ್ಗಗಳಿಂದ ಯಾವ ಬೆಲೆ ತೆತ್ತಾದರೂ ತಾನು ಪ್ರತಿನಿಧಿ ಸುತ್ತಿರುವ ಪರಿಸರದಲ್ಲಿ ಅಶಾಂತಿ ಮತ್ತು ಸಂಘರ್ಷಗಳು ನಡೆಯಬಾರದೆನ್ನುವ ಉದಾತ್ತ ಮನೋಭಾವ ಕೂಡ ಸೂಫಿ ವಿಚಾರಧಾರೆಗಳಲ್ಲಿ ಬರುತ್ತದೆ.

ಧಾರ್ಮಿಕ ಶಿಕ್ಷಣ ನೀಡುವ ಉಸ್ತಾದರ ವೃತ್ತಿಜೀವನದಲ್ಲಿ ಅವಿಸ್ಮರಣೀಯವಾದ ಘಟನೆಯೊಂದು ಅವರ ಮೇರು ವ್ಯಕ್ತಿತ್ವ, ಮೌಲ್ಯಾಧಾರಿತ ಜೀವನ ಮತ್ತು ಸೂಫಿ



ವಿಚಾರಧಾರೆಗಳು ಅವರಲ್ಲಿ ಅಂತರ್ಗತವಾಗಿರುವದರ ಜ್ವಲಂತ ಉದಾಹರಣೆಯಾಗಿದೆ.

ಪರಂಪರಾಗತವಾಗಿ ಮದರಸಾ ವಿದ್ಯಾರ್ಥಿಗಳಿಗೆ ಸಮಸ್ತ ಕೇರಳ ಇಸ್ಲಾಂ ಮತ ಬೋರ್ಡ್ ಅಂಗೀಕರಿಸಿದ ಪಠ್ಯಕ್ರಮವೊಂದು ಬದಲಾವಣೆಯಾದ ಸನ್ನಿವೇಶ ಅದು. ಮಕ್ಕಳ ಬೌದ್ಧಿಕ ಬೆಳವಣಿಗೆಯ ಮಟ್ಟಕ್ಕನುಸಾರವಾಗಿ ರಚಿತವಾಗಿರುವ ಪಠ್ಯಕ್ರಮವಾದ ದೀನಿಯಾತ್, ಅಮಲಿಯಾತ್, ಅಖ್ಲಾಕ್, ತಜ್‌ವೀದ್ ಎಂಬಿತ್ಯಾದಿ ಪಠ್ಯಸರಣಿಗಳು ಸಂಕ್ಷಿಪ್ತತೆ ಯೊಂದಿಗೆ ವಿಸ್ತೃತವಾಗಿ ಕಲಿಯಲು ಅನುಕೂಲವಾಗುವಂತಹ ವ್ಯವಸ್ಥೆ ಇದ್ದಾಗ್ಯೂ, ಮತ್ತೊಬ್ಬ ಧಾರ್ಮಿಕ ಮತ ವಿದ್ಯಾಭ್ಯಾಸ ಪ್ರಭೋದಕರು ಉಸ್ತಾದರ ನೇತೃತ್ವದ ಶಿಕ್ಷಣ ಸಂಸ್ಥೆಗೆ ನೇಮಕವಾಗುತ್ತಾರೆ.

ತದನಂತರದ ದಿನಗಳಲ್ಲಿ ಹೊಸದಾಗಿ ನೇಮಕವಾದ ಆ ಮತ ಪಂಡಿತರ ಹಿತಾಸಕ್ತಿಗೆ ಅನುಗುಣವಾಗಿ ಬೇರೊಂದು ಪಠ್ಯಕ್ರಮದ ಅನುಷ್ಠಾನವಾಗುತ್ತದೆ.

ಸಂಘರ್ಷ ಮತ್ತು ಚರ್ಚೆಗೆ ಗ್ರಾಸವಾಗುವಂತಹ ಇಂಥ ನಡೆಗಳು ಜಮಾತಿನಲ್ಲಿ ಚರ್ಚಾ ವಿಷಯ ವಾಗದಂತೆ ನೋಡಿಕೊಂಡು ಶಾಂತಿ ಕಾಯ್ದುಕೊಂಡು ಹೋಗುವ ಉಸ್ತಾದರ ಸ್ಥಿತ ಪ್ರಜ್ಞೆ, ಪ್ರೌಢಿಮೆ ಮತ್ತು ತ್ಯಾಗ ಅನನ್ಯವಾದುದು.

ಈ ಪ್ರಖರವಾದ ಆದರ್ಶಗಳೇ ಇವತ್ತು ನಮ್ಮ ಸಮಾಜಕ್ಕೆ ಬೇಕಾಗಿರುವುದು. ಏಕದೇವ ವಿಶ್ವಾಸ, ಪ್ರವಾದಿತ್ವ (ರಿಸಾಲತ್) ಮತ್ತು ಪರಲೋಕದ ಮೇಲೆ ನಂಬಿಕೆ ಇಡುವ ಪ್ರತಿಯೊಬ್ಬನೂ ಇಸ್ಲಾಮಿನ ವ್ಯಾಪ್ತಿಯೊಳಗೆ ಸೇರಿಕೊಳ್ಳುತ್ತಾನೆ. ನಂಬಿಕೆ ಮತ್ತು ವಿಶ್ವಾಸಗಳಲ್ಲಿ ಆಂಶಿಕವಾಗಿ ಭಿನ್ನಾಭಿಪ್ರಾಯ ಗಳಿದ್ದರೂ ಅವರೊಂದಿಗೆ ಅಸಹಿಷ್ಣುತೆ, ಅಸಹಕಾರದಂತಹ ನಡೆಗಳು ಖಂಡಿತವಾಗಿಯೂ ಇಸ್ಲಾಮಿಗೆ ಅನ್ಯವಾಗಿದೆ.

ಮಂಗಳೂರು ವಲಯದ ಜಮಾಅತೆ ಇಸ್ಲಾಮಿನ ಪರಮೋಚ್ಚ ನಾಯಕರೊಬ್ಬರ ಜತೆ ಉಸ್ತಾದರು ವೇದಿಕೆಯನ್ನು ಹಂಚಿ ಕೊಂಡ ಪರಿಯನ್ನು ಗಮನಿಸಿದರೆ ಅವರ ಸಹಿಷ್ಣುತೆಯ ಪ್ರಖರತೆ ಅರ್ಥೈಸಿಕೊಳ್ಳಬಹುದು.

ಪ್ರಸಕ್ತ ಸನ್ನಿವೇಶದಲ್ಲಿ ಆಂತರಿಕವಾಗಿ ವಿಭಿನ್ನ ಮತ್ತು ಆಂಶಿಕವಾಗಿ ಮತ ವಿಶ್ವಾಸದಲ್ಲಿ ಭಿನ್ನಾಭಿಪ್ರಾಯಗಳುಳ್ಳ ವಿವಿಧ ಪಂಗಡಗಳ ನಾಯಕರು ಒಂದೇ ವೇದಿಕೆಯನ್ನು ಹಂಚಿಕೊಳ್ಳುವ ಸನ್ನಿವೇಶ ಊಹಿಸಲೂ ಅಸಾಧ್ಯ.

ವಿಶ್ವಾಸ ಕಾರ್ಯಗಳಲ್ಲಿ ಆಂಶಿಕ ಭಿನ್ನಾಭಿಪ್ರಾಯಗಳಿದ್ದರೂ ಸಮಾಜದ ಎಲ್ಲ ಸದಸ್ಯರೊಂದಿಗೆ ಒಗ್ಗೂಡಿ ಮುನ್ನಡೆಯುವ ಉದಾತ್ತ ಮಾದರಿ ಮೌಲಾನಾ ಮುಹಮ್ಮದ್ ಸ್ವಾಲಿಹ್ ಮೌಲವಿಯವರ ಬದುಕಿನ ಪುಟಗಳಿಂದ ನಮಗೆ ಕಲಿಯಬಹುದು.

ಎಂಟು ಮಕ್ಕಳ ಕುಟುಂಬ ಪ್ರಾಪ್ತಿಯನ್ನು ಪಡೆದು, ಬರುವ ಪರಿಮಿತ ಸಂಭಾವನೆಯಲ್ಲಿ ಸಮೃದ್ಧ ಜೀವನ ನಡೆಸುವ ಸುಯೋಗ ಬಂದದ್ದು ಉಸ್ತಾದರು ತನ್ನ ಬದುಕಿನಲ್ಲಿ ಅಳವಡಿಸಿದ ಧರ್ಮ ಸೂಕ್ಷ್ಮತೆ ಮತ್ತು ಸಹಿಷ್ಣುತೆಯ ಉದಾತ್ತ ಮೌಲ್ಯಗಳ ಫಲದಿಂದ ಎಂಬುದು ನಿರ್ವಿವಾದವಾಗಿದೆ.





# ಉತ್ತಮ ವಾಗ್ಮಿ ಬೆಲಿಯೊ ಉಸ್ತಾದ್

ಮುಹಮ್ಮದ್ ರಫೀಕ್ ಬಿನ್ ಇಜ್ಜಬ್ಬ ಕಾಟಿಪಳ್ಳ

ಪಣಂಬೂರು ಕಾಟಿಪಳ್ಳದ ಸಣ್ಣವರಿಗೂ ದೊಡ್ಡವರಿಗೂ ಬೆಲಿಯೊ ಉಸ್ತಾದ್ ಎಂದೇ ಖ್ಯಾತಿ ಪಡೆದವರು ಮರ್ಹೂಂ ಹಾಜಿ ಮುಹಮ್ಮದ್ ಸ್ವಾಲಿಹ್ ಉಸ್ತಾದ್,

ತನ್ನ ಜೀವನದ ಸರಿಸುಮಾರು 40ವರ್ಷಗಳಿಗಿಂತಲೂ ಹೆಚ್ಚು ವರ್ಷ ಖತೀಬರಾಗಿದ್ದು ಊರಿನ ಹಿರಿ ಕಿರಿಯರೆಲ್ಲರೊಂದಿಗೂ ಉತ್ತಮ ಬಾಂಧವ್ಯವನ್ನು ಹೊಂದಿದ್ದರು. ವಿದ್ಯಾರ್ಥಿ ಜೀವನದಲ್ಲಿ ಬೆಲಿಯೊ ಉಸ್ತಾದರ ಮೇಜಿನ ಮೇಲಿದ್ದ ಉಸ್ತಾದರ ಬೆತ್ತವನ್ನು ಕಂಡ ವಿದ್ಯಾರ್ಥಿಗಳು ದರ್ಸ್ ತಪ್ಪಿಸುವುದು ಬಿಡಿ, ಅಲ್ಪ ತಡವಾಗಿಯೂ ಬರುತ್ತಿರಲಿಲ್ಲ, ಅಲ್ಲದೆ ವಾರಕ್ಕೊಮ್ಮೆ ಅವರು ನೀಡುತ್ತಿದ್ದ ಹತ್ತು ಪೈಸೆ ನನಗೆ ಇಂದಿಗೂ ಮರೆಯಲು ಅಸಾಧ್ಯ.

ಬೆಲಿಯೊ ಉಸ್ತಾದ್‌ರವರ ಪ್ರಭಾಷಣ (ವಅಲ್) ಇದ್ದರೆ ಆ ಕಾಲದಲ್ಲಿ ಕ್ಲಪ್ತ ಸಮಯಕ್ಕೆ ಜನರು ಸಾಲುಗಟ್ಟಿ ಬರುತ್ತಿದ್ದರು. ತಡರಾತ್ರಿ ನಡೆಯುವ ಅವರ ಪ್ರಭಾಷಣದಲ್ಲಿ ಅವರು ಆರಿಸುತ್ತಿದ್ದ ವಿಷಯಗಳು, ಅವರ ಉಚ್ಚಾರ ಶೈಲಿ, ಹಾಸ್ಯಭರಿತ ನೀತಿಯ ನೇಯುವಿಕೆಯೊಂದಿಗಿನ ಮನಸ್ಸಿಗೆ ನಾಟುವಂತಹ ಅವರ ಸಾಲುಗಳಿಗೆ ನಿದ್ದೆಯೂ ಬಳಿ ಸುಳಿಯುತ್ತಿರಲಿಲ್ಲ. ಅಲ್ಲದೆ ಅವರಷ್ಟು ಸೂಕ್ಷ್ಮ ಫಿಖ್‌ಹ್ ಪಂಡಿತರು ದಕ್ಷಿಣ ಕನ್ನಡದಲ್ಲಿಯೇ ಇರಲಿಲ್ಲ ಎಂದು ನಮ್ಮ ಹತ್ತಿರದ ಜಮಾಅತ್ ಕೃಷ್ಣಾಪುರದ ಖಾಝಿ ಹಾಜಿ ಇಬ್ರಾಹಿಂ ಉಸ್ತಾದ್ ಹೇಳುತ್ತಾ ಅವರನ್ನು ಕೊಂಡಾಡುತ್ತಲೇ ಇದ್ದರು. ಬೆಲಿಯೊ ಉಸ್ತಾದ್ ತನ್ನ ಜೀವನದ ಕೊನೆಯ ನಿಮಿಷದಲ್ಲಿ ಅವರ ಮಡಿಲಲ್ಲಿಯೇ ಇದ್ದರು.

ಇದೀಗ ಕಳೆದ ಇಪ್ಪತ್ತೈದು ವರ್ಷದಿಂದಲೂ ನಾವ್ಯಾರೂ ಮರೆಯದ ಬೆಲಿಯೊ ಉಸ್ತಾದ್ ನಮ್ಮೆಲ್ಲರ ಆದರ್ಶ. ನಮ್ಮ ಮತ್ತು ಅವರ ಬರ್ಝಖಿ ಜೀವನವು ಅಲ್ಲಾಹನ ಸಾಮಿಪ್ಯದಲ್ಲಿರಲಿ, ಆಮೀನ್.

# ಉದಾರ ಮನಸ್ಸಿನ ಉಸ್ತಾದ್

ಸಮೀರ್ ಕಾಟಿಪಳ್ಳ ( ಅಬೂ ಖದೀಜ )

ಹೌದು ಎಂದೂ ಮರೆಯದ ಜೀವವದು, ಅವರು ನಮ್ಮೆಲ್ಲರ ನೆನಪು, ಅವರು ನಮ್ಮೆಲ್ಲರ ಕನಸು, ನಾವೆಲ್ಲರೂ ಸೇರಿದ ನಮ್ಮೂರಿನ ಏಳಿಗೆಯ ಭದ್ರ ಬುನಾದಿ. ಬೆಲಿಯೊ ಉಸ್ತಾದರು ಒಂದಲ್ಲೊಂದು ವಿಷಯದಲ್ಲಿ ನಮಗೆ ನೆಪಾಗುತ್ತಲೇ ಇರುತ್ತಾರೆ. ಅದು ಅವರು ಮಕ್ಕಳಿಗೆ ಕೊಟ್ಟ ದೀನಿ ವಿಷಯವಾಗಿರಲಿ, ಶಿಕ್ಷಣದೊಂದಿಗೆ ತೋರುವ ಪ್ರೀತಿ ಮತ್ತು ಕರುಣೆಯಾಗಲಿ, ಆ ನಗುಮುಖವನ್ನು ತೋರಿಸುವ ಗುಣಗಳಿಂದಾಗಲಿ ಒಂದಲ್ಲ ಒಂದು ರೀತಿಯಲ್ಲಿ ಅವರು ಊರ ಹೆಮ್ಮೆಯೆನಿಸುತ್ತಾರೆ.

ಅವರು ಪ್ರತ್ಯೇಕವಾಗಿ ನನ್ನಂತಹ ವಿದ್ಯಾರ್ಥಿಗಳಿಗೆ ಅಚ್ಚುಮೆಚ್ಚಿನ ಉಸ್ತಾದ್ ಆಗಿದ್ದರು. ತನಗೆ ಸಿಗುತ್ತಿದ್ದ ಇಂತಿಷ್ಟು ಸಂಬಳದಲ್ಲಿ ದೊಡ್ಡದಾದ ಸಂಸಾರವನ್ನು ನಡೆಸಿ, ಅದರಲ್ಲಿ ಸ್ವಲ್ಪ ಹಣ ಕೂಡಿಟ್ಟು ಶುಕ್ರವಾರ ರಾತ್ರಿ (ಬೆಳ್ಳಿಯಾಸೆ ಜಾವು ) ಮದರಸ ಮಕ್ಕಳಿಗೆ ಒಂದೊಂದು ವಾರ ಒಂದು, ಎರಡು ಮತ್ತು ಮೂರನೇ ತರಗತಿಯ ಮಕ್ಕಳಿಗೆ ತಲಾ 25 ಪೈಸೆಯಂತೆ ಎಲ್ಲಾ ವಿದ್ಯಾರ್ಥಿಗಳಿಗೂ ಹಂಚುತ್ತಾ ಇದ್ದರು. ಅವತ್ತಿನ ನಮ್ಮ ಕೈಗೆ ನೀಡುತ್ತಿದ್ದ 25 ಪೈಸೆಯ ಬೆಲೆ ಮತ್ತು ಇಂದು ನಮ್ಮಲ್ಲಿರುವ ಹಣದ ಬೆಲೆಯನ್ನು ತಾಳೆ ಹಾಕಿ ನೋಡಿದಾಗ ಆ ಇಪ್ಪತ್ತೈದು ಪೈಸೆಯ ತೂಕ ಹೆಚ್ಚಾದಂತೆ ಭಾಸವಾಗಿದ್ದೂ ಇದೆ. ದಾನ ನೀಡಲು ಶ್ರೀಮಂತರಾಗ ಬೇಕಾಗಿಲ್ಲ. ಬೆಲಿಯೊ ಉಸ್ತಾದರ ಹಾಗೆ ಉದಾರ ಮನಸ್ಸಿನವರಾಗಿದ್ದರೆ ಸಾಕು.

ಉಸ್ತಾದರು ಬಡವ, ಶ್ರೀಮಂತ ಎಂಬ ಭೇದಭಾವ ಮಾಡದೆ ಎಲ್ಲರನ್ನು ಸಮಾನವಾಗಿ ನೋಡತ್ತಾ ಇದ್ದರು , ತಪ್ಪು ಯಾರೇ ಮಾಡಲಿ ಅವರನ್ನು ಅದೇ ಸಮಯದಲ್ಲಿ ವಿಚಾರಿಸುತ್ತಾ ಇದ್ದರು. ಅಂತಹ ಒಂದು ಘಟನೆ ನನ್ನ ನೆನಪಲ್ಲಿ ಅಚ್ಚಳಿಯದೆ ಉಳಿದಿದೆ. ಅದೊಂದು ಶುಕ್ರವಾರ ಉಸ್ತಾದರು ಖುತುಬಾ ನಿರ್ವಹಿಸುತ್ತಾ ಇದ್ದ ಸಮಯದಲ್ಲಿ ಮಸೀದಿ ಕಮಿಟಿಯ ಉನ್ನತ ಸ್ಥಾನದಲ್ಲಿ ಇರುವ ಊರಿನ ಪ್ರತಿಷ್ಠಿತ ಕುಟುಂಬದ ಶ್ರೀಮಂತ ಹಾಜಿಗಳಿಬ್ಬರು ಮಸೀದಿಯ ಗೋಡೆಗೆ ಒರಗಿ ಪರಸ್ಪರ ಮಾತನಾಡುತ್ತಾ ಇದ್ದರು. ಇದು ಖುತುಬಾ ನಿರ್ವಹಿಸುತ್ತಿದ್ದ ಉಸ್ತಾದರ ಗಮನಕ್ಕೆ ಬಂತು. ಅವರು ನಮಾಜು ಮುಗಿದ ತಕ್ಷಣ ಖುತುಬಾ ಸಮಯದಲ್ಲಿ ಮಾತಾಡುತ್ತಿದ್ದ ಇಬ್ಬರನ್ನೂ ಕರೆದು ಖುತುಬಾ ನಿರ್ವಹಿಸುವ ಸಮಯದಲ್ಲಿ ಮಾತನಾಡಿದಾಗ ಉಳಿದವರಿಗೂ ಖುತುಬಾ ಆಲಿಸಲು ಅಡಚಣೆಯಾಗುವ ಬಗ್ಗೆ ಮತ್ತು ಖುತುಬಾದ ಪ್ರಾಮುಖ್ಯತೆಯ ಬಗ್ಗೆ ಬುದ್ಧಿ ಹೇಳಿದರು. ಇದು ನಾನು ಕಂಡ ಬೆಲಿಯೊ ಉಸ್ತಾದ್. ಅಲ್ಲಾಹನು ಅವರನ್ನು ಮತ್ತು ನಮ್ಮೆಲ್ಲರನ್ನೂ ಅವನ ಇಷ್ಟದಾಸರ ಸಾಲಿನಲ್ಲಿ ಸೇರಿಸಲಿ, ಆಮೀನ್





# ನಾನು ಬಹಳವಾಗಿ ಗೌರವಿಸುತ್ತಿದ್ದ ಬೆಲಿಯೊ ಉಸ್ತಾದ್

ಹುಸೈನ್ ಕಾಟಿಪಳ್ಳ

ಕಾಟಿಪಳ್ಳ ಒಂದು ಪುನರ್ವಸತಿ ಕಾಲೋನಿ. ಕಾಟಿಪಳ್ಳದ ಜನತೆ ಪಣಂಬೂರಿನಲ್ಲಿದ್ದ ತಮ್ಮ ಮನೆ, ಮಳಿಗೆ, ವ್ಯಾಪಾರ, ವ್ಯವಹಾರಗಳನ್ನೆಲ್ಲಾ ನವ ಮಂಗಳೂರು ಬಂದರು ನಿರ್ಮಾಣಕ್ಕಾಗಿ ತ್ಯಾಗ ಮಾಡಿ ಬಂದವರು. ಕಾಟಿಪಳ್ಳಕ್ಕೆ ಬಂದು ನೆಲೆಸಿದ ನಂತರ ತಮ್ಮ ಬದುಕನ್ನು ಮತ್ತೊಮ್ಮೆ ಪ್ರಾರಂಭದಿಂದಲೇ ಹೊಸತಾಗಿ ಕಟ್ಟಿಕೊಂಡವರು. ಕೆಲವರು ತಮಗೆ ಪಣಂಬೂರಿನಲ್ಲಿದ್ದ ಹಳೆಯ ವ್ಯಾಪಾರ ವ್ಯವಹಾರಗಳನ್ನು ಇಲ್ಲಿ ಮುಂದುವರಿಸಲು ಕಷ್ಟಪಟ್ಟರು. ಇನ್ನು ಕೆಲವರು ಹೊಸ ಹೊಸ ಉದ್ದಿಮೆಗಳನ್ನು ಪ್ರಾರಂಭಿಸಿದರು. ಕೆಲವರು ಸೋತರು, ಕೆಲವರು ಗೆದ್ದರು. ಒಟ್ಟಿನಲ್ಲಿ ಹೇಳುವುದಾದರೆ ಚೆನ್ನಾಗಿ ನಡೆಯುತ್ತಿದ್ದ ತಮ್ಮ ಜೀವನ ಅರ್ಧದಲ್ಲಿ ನಿಂತಂತಾಗಿ ಪುನಃ ಚೇತರಿಸಿಕೊಳ್ಳಲು ಇಲ್ಲಿನ ಜನತೆ ಹರಸಾಹಸಪಟ್ಟರು.

ಪಣಂಬೂರಿನಲ್ಲಿದ್ದ ಶಾಲೆ, ಮಸೀದಿ, ಮದರಸಗಳು ಕಾಟಿಪಳ್ಳಕ್ಕೆ ಸ್ಥಳಾಂತರಗೊಂಡವು. ಕಾಟಿಪಳ್ಳ 2ನೇ ಬ್ಲಾಕಿನಲ್ಲಿರುವ ಮುಹಿಯ್ಯುದ್ದೀನ್ ಜುಮಾ ಮಸೀದಿಯ ಜಮಾತಿಗೆ ಈಗಲೂ ಪಣಂಬೂರು ಮುಸ್ಲಿಂ ಜಮಾತ್ ಎಂಬ ಹೆಸರಿದೆ. ಪಣಂಬೂರು ಮುಸ್ಲಿಂ ಜಮಾತ್, ಮಸೀದಿ ಹಾಗೂ ಇಲ್ಲಿನ ಮದ್ರಸಕ್ಕೆ ಕೀರ್ತಿ ತಂದವರು ಮುಹಮ್ಮದ್ ಸ್ವಾಲಿಹ್ ಉಸ್ತಾದರು. ಮಸೀದಿಯ ಖತೀಬರಾಗಿ, ಮದ್ರಸದ ಮುಖ್ಯ ಗುರುಗಳಾಗಿ ಅವರು ಸಲ್ಲಿಸಿದ ಸೇವೆ ಅನನ್ಯವಾದುದು. ಮಸೀದಿ, ಮದ್ರಸವನ್ನು ಅವರು ತನ್ನ ಮನೆಯಷ್ಟೇ ಪ್ರೀತಿಸುತ್ತಿದ್ದರು. ಅವರನ್ನು ಊರಿನವರು 'ಬೆಲಿಯೊ ಉಸ್ತಾದ್' ಎಂದೇ ಕರೆಯುತ್ತಿದ್ದರು. ಕಾಟಿಪಳ್ಳದ ಹಿಂದು, ಮುಸ್ಲಿಂ, ಕ್ರೈಸ್ತ ಬಾಂಧವರೆಲ್ಲರೂ ಅವರಿಗೆ ಅಪಾರವಾದ ಗೌರವವನ್ನು ಕೊಡುತ್ತಿದ್ದರು. ಪಣಂಬೂರು ಮುಸ್ಲಿಂ ಜಮಾತ್ ಬಾಂಧವರು ಅವರ ಮಾತನ್ನು ಮೀರುತ್ತಿರಲಿಲ್ಲ. ಉದ್ದ ಕೈಯ್ಯ ಬಿಳಿ ಶರ್ಟ್, ಬಿಳಿ ಲುಂಗಿ, ಕಣ್ಣುಗಳಿಗೆ ಕನ್ನಡಕ, ಅಚ್ಚುಕಟ್ಟಾದ ಸುಂದರವಾದ ಬಿಳಿ ಮುಂಡಾಸು ಧರಿಸಿ ಕೈಯಲ್ಲಿ ಒಂದು ಕೊಡೆ ಹಿಡಿದುಕೊಂಡು ಅವರು ಬೀದಿಗೆ ಇಳಿದರೆಂದರೆ ಇಡೀ ಊರೇ ಅವರಿಗೆ ಸಲಾಂ ಹೊಡೆಯುತ್ತಿತ್ತು.

ಮದ್ರಸದ ವಿದ್ಯಾರ್ಥಿಗಳು ಬೆಲಿಯೊ ಉಸ್ತಾದ್‌ರಿಗೆ ಬಹಳ ವಿಧೇಯರಾಗಿದ್ದರು. ಅವರು ತರಗತಿ ಕೋಣೆ ಪ್ರವೇಶಿಸುವಾಗಲೇ ಗಾಢವಾದ ಮೌನ ಆವರಿಸುತ್ತಿತ್ತು. ಅವರು ಪಾಠ ಮಾಡುವ ವಿಧಾನವೂ ಮನಮುಟ್ಟುವಂತಿತ್ತು. ಅರಬಿ ಪದಗಳ ಉಚ್ಚಾರಕ್ಕೆ ನಾಲಗೆಯನ್ನು ಯಾವ ರೀತಿ ಬಳಸಬೇಕು ಎಂದು ಬಹಳ ಪರಿಣಾಮಕಾರಿಯಾಗಿ ಹೇಳಿಕೊಡುತ್ತಿದ್ದರು.

ಅವರು ವಿದ್ಯಾರ್ಥಿಗಳನ್ನು ಎಚ್ಚರಿಸಲು ಮೇಜಿನ ಮೇಲೆ ಒಂದು ಬೆತ್ತ ಇಟ್ಟುಕೊಳ್ಳುತ್ತಿದ್ದರು. ಆ ಬೆತ್ತದ ಪ್ರಭಾವದಿಂದ ಮತ್ತು ಬೋಧನೆಯ ವಿಧಾನದಿಂದ ಅವರು ಕಲಿಸುತ್ತಿದ್ದ ಪಾಠ ಮನಸ್ಸಿನ ಆಳದಲ್ಲಿ ಬೇರೂರುತ್ತಿತ್ತು. ಆದುದರಿಂದಲೇ ಅವರಿಂದ ಕಲಿತ ವಿದ್ಯಾರ್ಥಿಗಳು ಬಹಳ ಪ್ರತಿಭಾವಂತರಾಗಿದ್ದರು.

ಧಾರ್ಮಿಕ, ಶಿಕ್ಷಣ, ಸಾಹಿತ್ಯ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಕಾಟಿಪಳ್ಳಕ್ಕೆ ಒಳ್ಳೆಯ ಹೆಸರಿದೆ. ಈ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಅನೇಕ ಸಾಧಕರು ಕಾಟಿಪಳ್ಳದಲ್ಲಿದ್ದಾರೆ. ಪಣಂಬೂರು ಮುಸ್ಲಿಂ ಜಮಾತ್ ವ್ಯಾಪ್ತಿಯಲ್ಲಿಯೇ ಅನೇಕ ಲೇಖಕರಿದ್ದಾರೆ, ಕವಿಗಳಿದ್ದಾರೆ, ಗಾಯಕರಿದ್ದಾರೆ, ಧಾರ್ಮಿಕ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಮಿಂಚಿದವರಿದ್ದಾರೆ. ಈ ಬೆಳವಣಿಗೆಯಲ್ಲಿ ಬೆಲಿಯೊ ಉಸ್ತಾದ್‌ರ ಪಾತ್ರ ಬಹಳ ಮುಖ್ಯವಾದುದು. ಅವರು ಮದ್ರಸ ಪಾಠದ ಜೊತೆಗೆ ಮಕ್ಕಳಲ್ಲಿ ಸಾಹಿತ್ಯದ ಅಭಿರುಚಿ ಹುಟ್ಟಿಸುತ್ತಿದ್ದರು. ಬೆಲಿಯೊ ಉಸ್ತಾದ್‌ರವರು ಕನ್ನಡ ಮತ್ತು ಉರ್ದು ಭಾಷೆಯಲ್ಲಿ ಕೂಡಾ ಪಾಂಡಿತ್ಯವನ್ನು ಹೊಂದಿದ್ದರು. ಕನ್ನಡ ಮತ್ತು ಉರ್ದುವಿನಲ್ಲಿ ಲೇಖನ ಹಾಗೂ ಮದ್ಹ್ ಗೀತೆಗಳನ್ನು ಬರೆಯುತ್ತಿದ್ದರು. ಮಿಲಾದುನ್ನಬಿ ಸಂದರ್ಭದಲ್ಲಿ ಅವರು ಬರೆದ ಗೀತೆಗಳನ್ನು ಮಕ್ಕಳಿಂದ ಹಾಡಿಸುತ್ತಿದ್ದರು. ಮಕ್ಕಳಿಗೆ ಅತ್ಯುತ್ತಮ ರೀತಿಯಲ್ಲಿ ತರಬೇತಿ ನೀಡುತ್ತಿದ್ದರು. ಅವರ ಕಂಚಿನ ಕಂಠ ಅಪ್ಯಾಯಮಾನವಾಗಿತ್ತು. ಅವರ ಖಿರಾಅತ್ ಪಠಣ ಕೇಳುವುದೆಂದರೆ ಎಲ್ಲರಿಗೂ ಅಚ್ಚುಮೆಚ್ಚು. ಅವರು ಸ್ವತ ಖುರ್‌ಆನ್ ಪಠಣ ಮಾಡುತ್ತಾ ಮದ್ಹ್‌ಗೀತೆಗಳನ್ನು ಹಾಡುತ್ತಾ ಮಕ್ಕಳನ್ನು ತರಬೇತುಗೊಳಿಸುತ್ತಿದ್ದರು. ಅವರು ತನ್ನ ವಿದ್ಯಾರ್ಥಿಗಳನ್ನು ತನ್ನ ಮಕ್ಕಳಂತೆ ಪ್ರೀತಿಸುತ್ತಿದ್ದರು. ಆದುದರಿಂದಲೋ ಏನೋ ಅವರು ಎಷ್ಟೇ ಪೆಟ್ಟುಕೊಟ್ಟರೂ, ಗದರಿಸಿದರೂ ಮಕ್ಕಳಿಗೆ ಉಸ್ತಾದ್‌ರ ಮೇಲಿನ ಗೌರವ ಹೆಚ್ಚುತ್ತಿತ್ತೇ ಹೊರತು ಅವರ ಮೇಲಿನ ಅಭಿಮಾನ ಕಡಿಮೆಯಾಗುತ್ತಿರಲಿಲ್ಲ.

ನಾನು ಕೂಡಾ ಬೆಲಿಯೊ ಉಸ್ತಾದ್‌ರ ವಿದ್ಯಾರ್ಥಿಯಾಗಿದ್ದೆ. ನಾನು ಸಾಹಿತ್ಯ ಕ್ಷೇತ್ರದಲ್ಲಿ ಕಿಂಚಿತ್ತು ಸಾಧನೆ ಮಾಡಿದ್ದರೆ ಅದು ಬೆಲಿಯೊ ಉಸ್ತಾದ್ ಬಾಲ್ಯದಲ್ಲಿಯೇ ನನಗೆ ನೀಡಿದ ಪ್ರೇರಣೆಯಿಂದ ಎಂದು ನಾನು ಭಾವಿಸುತ್ತೇನೆ. ನನಗೆ ಬೆಲಿಯೊ ಉಸ್ತಾದ್‌ರ ಮೇಲೆ ಅಪಾರವಾದ ಗೌರವವಿತ್ತು. ನಾನು ಕಲಿಕೆಯಲ್ಲಿ ಮುಂದಿದ್ದರಿಂದಲೋ ಏನೋ ಅವರಿಗೂ ನನ್ನ ಮೇಲೆ ಬಹಳ ಪ್ರೀತಿಯಿತ್ತು. ಹೆಚ್ಚಿನ ವಿದ್ಯಾರ್ಥಿಗಳಿಗೆ ಬೆತ್ತದಿಂದ ಹೊಡೆದು ಜಾಗೃತಿ ಮೂಡಿಸುತ್ತಿದ್ದ ಅವರು ನನಗೆ ಹೊಡೆದದ್ದು ನನ್ನ ನೆನಪಿಗೆ ಬರುವುದಿಲ್ಲ. ನನ್ನನ್ನು ಕ್ಲಾಸ್ ಲೀಡರ್ ಮಾಡಿದ್ದರು. ಮಿಲಾದುನ್ನಬಿ ಸಂದರ್ಭದಲ್ಲಿ ಹಾಡಲು ನನಗೆ ಮದ್ಹ್ ಗೀತೆಗಳನ್ನು ಬರೆದು ಕೊಡುತ್ತಿದ್ದರು. ಭಾಷಣ ಮಾಡಿಸುತ್ತಿದ್ದರು. ನಮ್ಮ ಪರಿಸರದಲ್ಲಿ ಮೌಲೂದ್ ಇದ್ದಾಗ ನನ್ನನ್ನು ಕೂಡಾ ಕರೆದುಕೊಂಡು ಹೋಗುತ್ತಿದ್ದರು. ಖುರ್‌ಆನ್ ಕಲಿಕೆಯಲ್ಲಿ ನನ್ನದು 30 ಜೂಝ್ ಪೂರ್ಣಗೊಂಡಾಗ ನಮ್ಮ ಮನೆಯಲ್ಲಿ ಬಹಳ ಸಂಭ್ರಮವಿತ್ತು. ಬೆಲಿಯೊ ಉಸ್ತಾದ್‌ರ ನೇತೃತ್ವದಲ್ಲಿ ಮೌಲೂದ್ ಪಾರಾಯಣ ಇತ್ತು. ನನ್ನ ತಂದೆಯವರು ನನಗೆ ಹೊಸ ಪ್ಯಾಂಟು ಶರ್ಟ್ ಹೊಲಿಸಿದ್ದರು. ನೈಚೋರು, ಮಾಂಸದ ಕರಿ ಮಾಡಲಾಗಿತ್ತು.

1982ರಲ್ಲಿ ನಾನು ಉದ್ಯೋಗದ ನಿಮಿತ್ತ ದುಬಾಯಿಗೆ ಹೋಗಿದ್ದೆ. ಅಲ್ಲಿಗೆ ತಲುಪಿದ ದಿನವೇ ತಾಯಿಯವರಿಗೆ ಪತ್ರ ಬರೆಯುವುದರ ಜೊತೆಗೆ ಬೆಲಿಯೊ ಉಸ್ತಾದ್‌ರಿಗೂ ಒಂದು ಪತ್ರ ಬರೆದಿದ್ದೆ. ಅವರ ಮನೆಯ ವಿಳಾಸ ನನಗೆ ಗೊತ್ತಿರಲಿಲ್ಲ. ಆದುದರಿಂದ ಮಸೀದಿಯ ವಿಳಾಸಕ್ಕೆ ಪತ್ರ ಬರೆದಿದ್ದೆ. ನನ್ನ ಸಂತೋಷವನ್ನು ಅವರೊಂದಿಗೆ ಹಂಚಿಕೊಳ್ಳುವುದು ನನ್ನ ಇಚ್ಛೆಯಾಗಿತ್ತು. ಆ ಪತ್ರಕ್ಕೆ ಅವರಿಂದ ಉತ್ತರವನ್ನೂ ನಾನು ನಿರೀಕ್ಷಿಸಿರಲಿಲ್ಲ ಆದರೆ ಉಸ್ತಾದರು ನನ್ನ ಪತ್ರಕ್ಕೆ ಉತ್ತರಿಸಿದ್ದರು. ಆ ದಿನ ನನಗಾದ ಸಂತೋಷಕ್ಕೆ ಮಿತಿಯಿರಲಿಲ್ಲ.





ದುಬಾಯಿಯಿಂದ ಬಂದ ನಾನು 1984ರಲ್ಲಿ ಬೈಕಂಪಾಡಿಯಲ್ಲಿ ಹೊಟೇಲ್ ತೆರೆದೆ. ಅದರ ಉದ್ಘಾಟನೆಯನ್ನು ಬೆಲಿಯೊ ಉಸ್ತಾದ್‌ರವರೇ ನೆರವೇಸಿದ್ದರು. ಆ ನಂತರ 1991ರಲ್ಲಿ ಸುರತ್ಕಲ್‌ನಲ್ಲಿ ಹೊಟೇಲ್ ತೆರೆದಾಗಲೂ ಬೆಲಿಯೊ ಉಸ್ತಾದ್‌ರವರೇ ಉದ್ಘಾಟಿಸಿದ್ದರು. ಬೆಲಿಯೊ ಉಸ್ತಾದ್‌ರವರೊಂದಿಗೆ ನನ್ನ ನಂಟು ಇಷ್ಟಕ್ಕೆ ಮುಗಿಯುವುದಿಲ್ಲ. ನನ್ನ ದೊಡ್ಡ ಮಗನಿಗೆ 'ಮುಹಮ್ಮದ್ ಫೈಝ್' ಎಂದು ನಾಮಕರಣವನ್ನೂ ಅವರೇ ಮಾಡಿದ್ದರು. ನನಗೆ ಮಗು ಹುಟ್ಟಿದ ಸಂತೋಷವನ್ನು ಅವರೊಂದಿಗೆ ಹಂಚಿಕೊಳ್ಳಲು ಹೋದಾಗ 'ಹೆಸರು ಏನು ಇಡಬೇಕೆಂದಿದ್ದೀಯಾ?' ಎಂದು ಕೇಳಿದ್ದರು.

ಆಗ ನಾನು ಕ್ರಿಕೆಟಿಗ ಅಝರುದ್ದೀನ್‌ರವರ ದೊಡ್ಡ ಅಭಿಮಾನಿಯಾಗಿದ್ದುದರಿಂದ ನನ್ನ ತಂದೆಯ ವರ ಮೊಹಿದಿನ್ ಎಂಬ ಹೆಸರನ್ನು ಸೇರಿಸಿ 'ಮೊಹಿದಿನ್ ಅಝರುದ್ದೀನ್' ಎಂದು ಇಡಬೇಕೆಂದಿದ್ದೇನೆ ಎಂದು ಹೇಳಿದೆ. ಅದಕ್ಕವರು ಅದೂ ಒಳ್ಳೆಯದೆ. ಆದರೆ ಇದು ರಬೀವುಲ್ ಅವ್ವಲ್ ತಿಂಗಳಾದುದರಿಂದ ಪ್ರವಾದಿಯವರ ಹೆಸರು ಸೇರಿಸಿ ನಾಮಕರಣ ಮಾಡುವುದು ಉತ್ತಮ. ಅದೂ ಅಲ್ಲದೆ ನೀನೊಬ್ಬ ಬರಹಗಾರ ಉರ್ದುವಿನಲ್ಲಿ 'ಫೈಝ್' ಎಂಬ ಒಳ್ಳೆಯ ಲೇಖಕರಿದ್ದಾರೆ. ಅವರ ಹೆಸರನ್ನು ಸೇರಿಸಿ 'ಮುಹಮ್ಮದ್ ಫೈಝ್' ಎಂದು ನಾಮಕರಣ ಮಾಡು ಮತ್ತೆ ನಿನ್ನ ಇಚ್ಚೆ ಎಂದು ಹೇಳಿದ್ದರು. ಅದೇ ಹೆಸರನ್ನು ನಾನು ಫೈನಲ್ ಮಾಡಿದ್ದೆ. ನಾನು ಬೆಲಿಯೊ ಉಸ್ತಾದ್‌ರಿಗೆ ಅಷ್ಟೊಂದು ಗೌರವ ಕೊಡುತ್ತಿದ್ದೆ.

ದಿನಾಂಕ 06-09-2006ರಲ್ಲಿ ಮಾಜಿ ಮುಖ್ಯ ಮಂತ್ರಿಯೊಬ್ಬರು 'ಮದ್ರಸಗಳು ಉಗ್ರಗಾಮಿಗಳ ಕೇಂದ್ರವಾಗುತ್ತಿದೆ' ಎಂಬ ಹೇಳಿಕೆ ಕೊಟ್ಟಿದ್ದರು. ಈ ಹೇಳಿಕೆಯನ್ನು ಬಹಳ ಜನ ಖಂಡಿಸಿದ್ದರು. ದಿನಾಂಕ 08-09-2006ರಂದು ಮಂಗಳೂರಿನ ಮುಸ್ಲಿಂ ಲೇಖಕರ ಸಂಘದವರು ತಾಲೂಕು ಪಂಚಾಯತ್ ಕಟ್ಟಡದ ಪಕ್ಕದ ಎನ್.ಜಿ.ಓ ಹಾಲ್‌ನಲ್ಲಿ ಒಂದು ಬಹುಭಾಷಾ ಕವಿಗೋಷ್ಠಿಯನ್ನು ಆಯೋಜಿಸುತ್ತಿದ್ದರು. ಆ ಕವಿಗೋಷ್ಠಿಗೆ ಒಬ್ಬ ಕವಿಯಾಗಿ ನನ್ನನ್ನೂ ಆಹ್ವಾನಿಸಿದ್ದರು. ನಾನು ಸಂದರ್ಭಕ್ಕೆ ತಕ್ಕ ವಿಷಯವನ್ನು ಮಂಡಿಸಿದರೆ ಉತ್ತಮ ಎಂಬ ನೆಲೆಯಲ್ಲಿ ಮಾಜಿ ಮುಖ್ಯಮಂತ್ರಿಯ ಹೇಳಿಕೆಯನ್ನು ವಿಷಯವಾಗಿರಿಸಿಕೊಂಡು ಮದ್ರಸದಲ್ಲಿ ಏನು ಕಲಿಸುತ್ತಾರೆ ಎಂಬ ಬಗ್ಗೆ ಬೆಲಿಯೊ ಉಸ್ತಾದ್‌ರವರನ್ನೇ ಸ್ಮರಿಸುತ್ತಾ 'ಬೆಲಿಯೊ ಉಸ್ತಾದ್‌ರೊ ಬೆತ್ತ್' ಎಂಬ ಬ್ಯಾರಿ ಕವನವನ್ನು ಮಂಡಿಸಿದ್ದೆ. ಬಹಳ ಸರಳವಾದ ಶಬ್ದಗಳನ್ನು ಪೋಣಿಸಿ ಬರೆದು ಮಂಡಿಸಿದ್ದ ಈ ಕವನಕ್ಕೆ ಚಪ್ಪಾಳೆಯ ಸುರಿಮಳೆಯೇ ಸುರಿದಿತ್ತು. ನಂತರ ಆ ಕವನವನ್ನು ದಿನಾಂಕ 27-02-2007ರಂದು ಚಿಕ್ಕಮಗಳೂರಿನಲ್ಲಿ ನಡೆದ 4ನೇ ಬ್ಯಾರಿ ಸಾಹಿತ್ಯ ಸಮ್ಮೇಳನದಲ್ಲಿ ಬಿಡುಗಡೆಯಾದ ನನ್ನ 'ಬಿರ್‌ಂದ' ಎಂಬ ಬ್ಯಾರಿ ಕವನ ಸಂಕಲನದಲ್ಲಿ ಅಳವಡಿಸಿಕೊಂಡಿದ್ದೆ.

ಸರ್ವಶಕ್ತ ಅಲ್ಲಾಹನು ಬೆಲಿಯೊ ಉಸ್ತಾದ್‌ರಿಗೆ ಜನ್ನಾತುಲ್ ಫಿರ್ದೌಸ್‌ನಲ್ಲಿ ಉನ್ನತ ಸ್ಥಾನ ನೀಡಲಿ ಎಂದು ಪ್ರಾರ್ಥಿಸುತ್ತೇನೆ. ಬೆಲಿಯೊ ಉಸ್ತಾದ್‌ರ ಮಾದರಿ ಜೀವನದ ವಿಚಾರಗಳು ಒಂದು ಪುಸ್ತಕ ರೂಪದಲ್ಲಿ ಹೊರ ಬಂದರೆ ಉತ್ತಮ ಸೌಹಾರ್ದಯುತ ಸಮಾಜ ಕಟ್ಟಲು ಪ್ರೇರಣೆ ನೀಡಬಹುದು ಎಂಬ ನೆಲೆಯಲ್ಲಿ ಈ ಕೃತಿಯನ್ನು ಹೊರ ತರಲು ಮುಂದಾದ ಅನ್ಸಾರ್ ಕಾಟಿಪಳ್ಳ ರೊಂದಿಗೆ ನಾನೂ ಕೂಡ ಕೈ ಜೋಡಿಸಿದ್ದೇನೆ. ಇದಕ್ಕೆ ಸಹಕರಿಸಿದ ಎಲ್ಲರಿಗೂ ಕೃತಜ್ಞತೆಗಳು.



ಕವನ

# ಬೆಲಿಯೊ ಉಸ್ತಾದ್‌ರ ಬೆತ್ತ

ಹುಸೈನ್ ಕಾಟಿಪಳ್ಳ

ಅ ಆ ಇ ಈ ಕಲಿಯಲು ಶಾಲೆಗೆ ನಾನು ಹೋಗಿದ್ದೆ
ಅಲಿಫ್ ಲಾಮ್ ತಿಳಿಯಲು ಮದ್ರಸ ಮೆಟ್ಟಲು ಹತ್ತಿದ್ದೆ
ಶಾಲೆ ಮದ್ರಸ ಹತ್ತಿ ನಾನು ಧರ್ಮ ಕರ್ಮ ಕಲಿತಿದ್ದೆ

ಕನ್ನಡ ಹಿಂದಿ ಇಂಗ್ಲಿಷ್ ಭಾಷೆ ಶಾಲೆಯಲ್ಲಿ ಕಲಿತಿದ್ದೆ
ಸಮಾಜ ವಿಜ್ಞಾನ ಪಾಠಗಳಿಂದ ಜ್ಞಾನವನ್ನು ಪಡೆದಿದ್ದೆ
ಶಾಲೆಯಲ್ಲಿನ ಪಾಠಗಳಿಂದ ದುಡಿಮೆಯ ಹಾದಿ ಕಂಡಿದ್ದೆ
ಶಾಲಾ ಸ್ನೇಹಿತರೊಂದಿಗೆ ನಾನು ಸೌಹಾರ್ದತೆಯನ್ನು ಹಂಚಿದ್ದೆ

ಇಸ್ಲಾಂ ಧರ್ಮದ ಸೊಬಗನು ನಾನು ಮದ್ರಸದಿಂದ ತಿಳಿದಿದ್ದೆ
ಒಳಿತಿನ ಹಾದಿಯಲ್ಲೆ ನಡೆಯಲು ಮದ್ರಸದಲ್ಲಿ ಕಲಿತಿದ್ದೆ
ಶಾಂತಿ ಪ್ರೀತಿ ನೀತಿ ನಿಯಮ ಸೌಹಾರ್ದತೆಯನು ಕಲಿತಿದ್ದೆ
ನೆರೆಮನೆಯವರ ಹಸಿವನು ತಣಿಸುವ ಪಾಠವನ್ನು ಕಲಿತಿದ್ದೆ

ನಿನ್ನೆಯ ದಿನ ಮುಖ್ಯ ಮಂತ್ರಿ ಹೇಳಿಕೆಯೊಂದನು ಕೊಟ್ಟರು
ಮದ್ರಸಗಳು ಉಗ್ರರ ಕೇಂದ್ರ ಎಂದು ಅವರು ಹೇಳಿದರು
ತನಗೆ ಇದ್ದ ಅಜ್ಞಾನದ ಪ್ರದರ್ಶನವನು ಮಾಡಿದರು
ಒಳಿತನು ಕಲಿಸಿದ ಬೆಲ್ಯೊ ಉಸ್ತಾದ್‌ರ ಬೆತ್ತದ ನೆನಪನು ನೀಡಿದರು

**ಮುಸ್ಲಿಂ ಲೇಖಕರ ಸಂಘ ಮಂಗಳೂರು ಇದರ ವತಿಯಿಂದ 2006 ಸೆಪ್ಟಂಬರ್ 8 ರಂದು ಮಂಗಳೂರು ತಾಲೂಕು ಪಂಚಾಯತ್ ಕಟ್ಟಡದ ಬಳಿಯ ಎನ್.ಜಿ.ಒ. ಹಾಲ್‌ನಲ್ಲಿ ನಡೆದ ಬಹುಭಾಷಾ ಕವಿಗೋಷ್ಠಿಯಲ್ಲಿ ಮಂಡಿಸಿದ ಬ್ಯಾರಿ ಕವನದ ಕನ್ನಡ ಅನುವಾದ.**

ದಿನಾಂಕ 7– 9– 2006 ರಂದು ಮಾಜಿ ಮುಖ್ಯಮಂತ್ರಿಯೊಬ್ಬರು "ಮದರಸಗಳು ಉಗ್ರಗಾಮಿಗಳ ಕೇಂದ್ರಗಳಾಗುತ್ತಿವೆ" ಎಂಬ ಹೇಳಿಕೆ ನೀಡಿದ್ದರು. ಈ ವಿಷಯವನ್ನು ಖಂಡಿಸುತ್ತಾ ಕವನ ಬರೆದಿದ್ದೆ.





## ಸಂಘಸಂಸ್ಥೆಗಳ ಅನಿಸಿಕೆ

# ಸಾಹಿತ್ಯ ಪ್ರೇಮಿ ಬೆಲಿಯೊ ಉಸ್ತಾದ್

ಅಧ್ಯಕ್ಷರು ಮತ್ತು ಸರ್ವ ಸದಸ್ಯರು
**ಕಾಟಿಪಳ್ಳ ಮುಸ್ಲಿಂ ಯೂತ್ ಅಸೋಸಿಯೇಷನ್** (KMYA)
ದಮ್ಮಾಮ್ ರಿಯಾದ್, ಸೌದಿ ಅರೇಬಿಯಾ

ನಮ್ಮೆಲ್ಲರ ನೆಚ್ಚಿನ ಗುರುವರ್ಯರಾದ ಬೆಲಿಯೊ ಉಸ್ತಾದ್‌ರ ಇಪ್ಪತ್ತೈದನೇ ವರ್ಷದ ಅನುಸ್ಮರಣಾರ್ಥ ಸ್ಮರಣಿಕೆ ಪ್ರಕಟಿಸುವ ವಾರ್ತೆ ತಿಳಿದು ಅತೀವ ಸಂತೋಷವಾಯಿತು.

'ಬೆಲಿಯೊ ಉಸ್ತಾದ್' ಎಂದೇ ಖ್ಯಾತಿ ಪಡೆದಿದ್ದ ಮರ್ಹೂಂ ಮುಹಮ್ಮದ್ ಸ್ವಾಲಿಹ್ ಉಸ್ತಾದ್‌ರವರು ಧಾರ್ಮಿಕ ವಿದ್ಯಾಭ್ಯಾಸದ ಜೊತೆಗೆ ಸಾಮಾಜಿಕ ಜವಾಬ್ದಾರಿಯ ಮಹತ್ವದ ಬಗ್ಗೆ ಬೋಧಿಸುತ್ತಿದ್ದರು. ಮಾತ್ರವಲ್ಲ ಸಾಹಿತ್ಯ ದಲ್ಲೂ ಅಭಿರುಚಿ ಹೊಂದಿದ್ದ ಅವರು ಕಾಟಿಪಳ್ಳದಲ್ಲಿ ಅನೇಕ ಲೇಖಕರು ಮೂಡಿ ಬರಲು ಕಾರಣಕರ್ತರಾಗಿದ್ದಾರೆ.

ಅವರಲ್ಲಿ ವಿದ್ಯೆ ಕಲಿತ ಅನೇಕ ವಿದ್ಯಾರ್ಥಿಗಳು ದೇಶ ವಿದೇಶಗಳಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದಾರೆ. ನಮ್ಮ ಸಂಘಟನೆಯಲ್ಲಿಯೂ ಸೇವೆ ಸಲ್ಲಿಸುತ್ತಿದ್ದಾರೆ.

ಉಸ್ತಾದ್‌ರವರ ಉಪದೇಶ ನಮಗೆಲ್ಲರಿಗೂ ಮಾರ್ಗ ದರ್ಶನ. ಅದರಂತೆ ನಡೆಯಲು ಕರುಣಾಳುವಾದ ಅಲ್ಲಾಹನು ಅನುಗ್ರಹಿಸಲಿ.

ಅಲ್ಲಾಹು ಉಸ್ತಾದರಿಗೆ ಮಗ್ಫಿರತ್ ಮತ್ತು ಮರ್ಹಮತ್ ಕರುಣಿಸಲಿ. ಆಮೀನ್



ಸಂಘಸಂಸ್ಥೆಗಳ ಅನಿಸಿಕೆ

# ಬೆಲಿಯೊ ಉಸ್ತಾದರ ಅನುಪಮ ಆದರ್ಶ

ಅಧ್ಯಕ್ಷರು ಮತ್ತು ಸರ್ವ ಸದಸ್ಯರು
ಆಝುದ್ ಫೌಂಡೇಶನ್ (ರಿ) ಕಾಟಿಪಳ್ಳ

ಸರಳ ಮತ್ತು ಸಜ್ಜನಿಕೆಯ ಜೀವನವನ್ನು ಮೈಗೂಡಿಸಿ ದಿವಂಗತರಾದ ನಂತರವೂ ಸ್ಮರಣಾರ್ಹರಾಗುವ ಉಸ್ತಾದರ ಜೀವನವು ಆದರ್ಶಪ್ರಾಯವಾಗಿದೆ. ಉಸ್ತಾದರ ಜೀವನದ ಶಿಸ್ತು, ಪಾಂಡಿತ್ಯ, ಅಗಾಧವಾದ ಜ್ಞಾನದ ಕಾರಣದಿಂದಲೇ ಅವರಿಗೆ 'ಬೆಲಿಯೊ ಉಸ್ತಾದ್' ಎಂಬ ಉಪ ನಾಮ ಪ್ರಾಪ್ತಿಯಾಗಿರುವುದು.

ಸಾಮಾನ್ಯವಾಗಿ ಮತಪಂಡಿತರೋರ್ವರನ್ನು ಉಲ್ಲೇಖಿಸುವಾಗ ಉಸ್ತಾದ್ ಎಂಬ ಪದದ ಬದಲಿಗೆ 'ಬೆಲಿಯೊ ಉಸ್ತಾದ್' ಎಂಬ ಅನ್ವರ್ಥ ನಾಮದಿಂದ ಕರೆಯಲ್ಪಟ್ಟಿರುವುದು ಅವರಲ್ಲಿದ್ದ ವಿದ್ವತ್ತು ಮತ್ತು ಪಾಂಡಿತ್ಯದ ಕಾರಣದಿಂದಾಗಿದೆ.

ಆಝುದ್ ಫೌಂಡೇಶನ್‌ನ ಬಹುತೇಕ ಸದಸ್ಯರು ದಿವಂಗತ ಉಸ್ತಾದರ ಶಿಷ್ಯ ವರ್ಗದಿಂದ ಬಂದವರಾಗಿದ್ದು ಅವರ ಜೀವನದ ಆದರ್ಶ ಉಪದೇಶ ಮತ್ತು ಮಾದರಿಯ ಪ್ರೇರಣೆಯಿಂದಲೇ 'ಆಝುದ್ ಫೌಂಡೇಶನ್' ಎಂಬ ಜನಸ್ನೇಹಿ ಸಮಾಜ ಸೇವಾ ಸಂಘವು ನೆಲೆಗೊಂಡಿದೆ ಎಂದರೆ ಅತಿಶಯೋಕ್ತಿಯಾಗಲಾರದು

ಈ ನಮ್ಮ ಬೆಲಿಯೊ ಉಸ್ತಾದರ ಸ್ಮರಣಾರ್ಥ 'ಮೌಲಾನಾ ಮುಹಮ್ಮದ್ ಸ್ವಾಲಿಹ್ ಮೌಲವಿ' ಅತ್ಯುತ್ತಮ ಮದರಸ ಪ್ರಶಸ್ತಿ ಎಂಬ ಯೋಜನೆಯನ್ನು ವರ್ಷಂಪ್ರತಿ ಅರ್ಹ ಮದರಸಗಳಿಗೆ ನೀಡುವ ನಮ್ಮ ಯೋಜನೆಯು ನಮಗೆ ಮತ ವಿದ್ಯಾಭ್ಯಾಸವನ್ನು ನೀಡಿದ ಉಸ್ತಾದರಿಗೆ ಸಲ್ಲಿಸುವ ಕೃತಜ್ಞತೆ ಮತ್ತು ಗೌರವ ಸಂದಾಯವಾಗಿದೆ ಎಂದು ಭಾವಿಸಿದ್ದೇವೆ.

ಉಸ್ತಾದರ ಹೆಸರಲ್ಲಿ ಹೊರತರಲು ಉದ್ದೇಶಿಸಿರುವ ಸ್ಮರಣ ಸಂಚಿಕೆಗೆ ಯಶಸ್ಸನ್ನು ಕೋರುತ್ತಾ ಪ್ರಸ್ತುತ ಸ್ಮರಣ ಸಂಚಿಕೆಯು ಎಲ್ಲರಲ್ಲಿಯೂ ಜ್ಞಾನ, ಪ್ರಜ್ಞೆ ಮತ್ತು ಸ್ನೇಹ ಬಾಂಧವ್ಯ ಮೂಡಿಸುವ ಮಾಧ್ಯಮವಾಗಲಿ ಎಂದು ಹಾರೈಸುತ್ತಿದ್ದೇವೆ.





ಸಂಘಸಂಸ್ಥೆಗಳ ಅನಿಸಿಕೆ

# ಆದರ್ಶ ಗುರುಗಳು

ಅಧ್ಯಕ್ಷರು ಮತ್ತು ಸರ್ವ ಸದಸ್ಯರು
ಆದರ್ಶ ಯುವಕ ಮಂಡಲ (ರಿ), ಕೈಕಂಬ, ಕಾಟಿಪಳ್ಳ

ಕಾಟಿಪಳ್ಳದಲ್ಲಿ ಸರ್ವ ಧರ್ಮಗಳೊಂದಿಗೆ ಸೌಹಾರ್ದತೆಯನ್ನು ಮೂಡಿಸುತ್ತಾ ಹೆಸರಿಗೆ ತಕ್ಕಂತೆ ಆದರ್ಶವನ್ನಷ್ಟೇ ಮೈಗೂಡಿಸಿಕೊಂಡಿರುವ 'ಆದರ್ಶ ಯುವಕ ಮಂಡಲ'ವು ಕಳೆದ ಸುಮಾರು ನಾಲ್ಕು ದಶಕಗಳಿಂದ ಕಾಟಿಪಳ್ಳ, ಕೈಕಂಬ, ಮಂಗಳ ಪೇಟೆ, ಕೃಷ್ಣಾಪುರ ಪರಿಸರದಲ್ಲಿ ಗುರುತಿಸಿಕೊಂಡಿದೆ. ಜನರಿಗೆ ಜಾತಿ ಬೇಧ ಮರೆತು ಸಾಮಾಜಿಕ ಸಹಾಯ ಹಸ್ತವನ್ನು ನೀಡುತ್ತಾ, ಬಡವರಿಗೆ ಅಶಕ್ತರಿಗೆ ತನ್ನಿಂದಾದ ಸಹಾಯದ ಹಸ್ತವನ್ನು ನೀಡುತ್ತಾ ಜನಪರ ಕೆಲಸಗಳನ್ನು ಮಾಡುತ್ತಾ ಬಂದಿದೆ. ಕಾಟಿಪಳ್ಳ ಸುತ್ತಮುತ್ತಲಲ್ಲಿ ಸಂತ ಪುರುಷರಂತಿದ್ದ ನಮಗೆಲ್ಲರಿಗೆ ಪರಿಚಿತರಾಗಿದ್ದ ಬೆಲಿಯೊ ಉಸ್ತಾದ್ (ದೊಡ್ಡ ಗುರುಗಳು) ಎಂದೇ ಪ್ರಸಿದ್ಧರಾದ ಕಾಟಿಪಳ್ಳ ಮಸೀದಿಯ ಧರ್ಮಾಧಿಕಾರಿ, ಧರ್ಮ ಗುರುಗಳಾದ ಮುಹಮ್ಮದ್ ಸ್ವಾಲಿಹ್ ಉಸ್ತಾದರು ನಮ್ಮ ಸಂಘದ ಕಾರ್ಯ ಚಟುವಟಿಕೆಗಳನ್ನು ಕಂಡು ಸಂತಸಗೊಂಡಿದ್ದರು.

ಈ ಗುರುವರ್ಯರು ನಮ್ಮ ಅಂದಿನ ಪದಾಧಿಕಾರಿಗಳನ್ನು ಆಶೀರ್ವದಿಸುತ್ತಾ ಯುವಕ ಮಂಡಲದ ಅಂದಿನ ಹೆಚ್ಚಿನ ನಮ್ಮ ಸದಸ್ಯರೊಂದಿಗೆ ಉತ್ತಮ ಬಾಂಧವ್ಯವನ್ನೂ ಹೊಂದಿದ್ದರು. ಎಲ್ಲಿ ಸಿಕ್ಕಿದರೂ ಆತ್ಮೀಯವಾಗಿ ಮಂದಹಾಸದೊಂದಿಗೆ ಮಾತನಾಡುತ್ತಿದ್ದರು. ನಮ್ಮ ಒಂದೆರಡು ಸಭೆ ಸಮಾರಂಭಗಳಿಗೆ ಅವರನ್ನು ಆತ್ಮೀಯವಾಗಿ ಆಹ್ವಾನಿಸಿದಾಗ ಸಂತೋಷದಿಂದ ಪಾಲ್ಗೊಂಡಿದ್ದರು. ಅವರ ಉಪದೇಶ, ಹಿತವಚನ ನಮಗೆಲ್ಲರಿಗೂ ಸೌಹಾರ್ದದ ಸಂಕೇತವಾಗಿದೆ. ಅವರು ನಡೆದುಕೊಂಡ ದಾರಿ ಇಂದಿನ ಹೊಸ ತಲೆಮಾರಿನ ನಮ್ಮೂರ ಯುವಕರೆಲ್ಲರೂ ನೆನಪಿಸುವಂತಾಗಬೇಕು. ಬಹಳ ತಡವಾಗಿಯಾದರೂ ಅವರ ನೆನಪಿನ ಬುತ್ತಿಯನ್ನು ತೆರೆದು ತೋರಿಸುವ ಪ್ರಯತ್ನವಾದ ಈ ಕೃತಿಯು ಇಂದಿನ ಬೇಡಿಕೆಯೂ ಹೌದು.

ಶ್ವೇತ ವಸ್ತ್ರದಾರಿಯಾದ ಅವರ ಬರುವಿಕೆಯು ಘನತೆ ಗಾಂಭೀರ್ಯದಿಂದ ಕೂಡಿತ್ತು. ಅವರೊಂದಿಗೆ ಅಂದಿನ ನಮ್ಮ ಪದಾಧಿಕಾರಿಗಳು ಅಪಾರ ಗೌರವವನ್ನಿಟ್ಟಿದ್ದರು ಇದಕ್ಕೆ ಕಾರಣ ಅವರ ನಡತೆ ಮತ್ತು ಸರಳ ಸ್ವಭಾವ. ಎಲ್ಲ ಮತ ಧರ್ಮದವರೊಂದಿಗೆ ಸ್ನೇಹ ಜೀವಿಯಾಗಿ ವರ್ತಿಸುತ್ತಿದ್ದ ಅವರ ಆ ಮಂದಸ್ಮಿತ ಮುಖ ಅವರೊಂದಿಗೆ ಒಡನಾಟವಿದ್ದ ನಮಗೆ ಮಾಸದು. ನಮಗೆ ಅವರ ಮೇಲೆ ಇರುವ ಗೌರವ ಮತ್ತೊಮ್ಮೆ ಈ ಕೃತಿಗಾಗಿ ನೆನಪಿಸಿರುವುದಕ್ಕೆ ತಮಗೆಲ್ಲರಿಗೂ ಧನ್ಯ.

ಅವರು ಪರಿಸರದಲ್ಲಿ ನಡೆಯುವ ಧಾರ್ಮಿಕ ಸಾಮಾಜಿಕ ಲೌಕಿಕ ಹಾಗೂ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮಕ್ಕಾಗಿ ಕನ್ನಡ ಬ್ಯಾರಿ ಉರ್ದು ಅರೇಬಿಕ್ ಭಾಷೆಗಳಲ್ಲಿ ಭಾಷಣ ಮತ್ತು ಹಾಡುಗಳನ್ನು ಸ್ವರಚನೆ ಮಾಡಿ ಹಾಡಿಸುತ್ತಿದ್ದರು. ನಮ್ಮ ಸದಸ್ಯರ ಸಹಿತ ಪ್ರತ್ಯಕ್ಷ ವೀಕ್ಷಿಸುತ್ತಿದ್ದ ವರ್ಷಂ ಪ್ರತಿ ಬರುತ್ತಿದ್ದ ಈದ್ ಮಿಲಾದ್ ಸಂದರ್ಭ ಕೈಕಂಬ ಕೃಷ್ಣಾಪುರಕ್ಕೆ ಆಗಮಿಸುತ್ತಿದ್ದ ಮೆರವಣಿಗೆಯ ಮೇಲ್ವಿಚಾರಣೆ ಯನ್ನು ವಹಿಸಿ ಮಕ್ಕಳಲ್ಲಿ ಸೌಹಾರ್ದದ ಹಾಡುಗಳನ್ನು ಹಾಡಿಸುತ್ತಿದ್ದರು. ವಿದ್ಯಾರ್ಥಿಗಳೊಂದಿಗೆ ಸಾಮರಸ್ಯದ ಬದುಕಿನ ಗೀತೆಗಳಿಗೆ ತಾವೂ ಸ್ವತ ದನಿಗೂಡಿಸುತ್ತಿದ್ದರು.

ಆ ದಿನ ಅವರ ದಿಢೀರ್ ಮರಣ ವಾರ್ತೆ ಕೇಳಿ ನಮಗೆಲ್ಲರಿಗೂ ಅತ್ಯಂತ ಶೋಕವಾಗಿತ್ತು. ಅವರ ಪುಣ್ಯ ದೇಹವನ್ನು ರಾತ್ರಿ ಅಂತಿಮ ಸಂಸ್ಕಾರವಾಗುವವರೆಗೂ ನಾವೂ ಸೇರಿ ಎಲ್ಲ ಧರ್ಮ ಭಾಂದವರು ತಮ್ಮ ಅಂಗಡಿ ಮುಂಗಟ್ಟು ಮುಚ್ಚಿದ್ದರು, ಆಟೋ ರಿಕ್ಷಾಗಳೆಲ್ಲವೂ ಆ ಸಮಯದಲ್ಲಿ ಸ್ಥಬ್ದವಾಗಿತ್ತು. ಒಟ್ಟಿನಲ್ಲಿ ಊರಿಗೆ ಊರೇ ಅವರ ಸಂತಾಪದಲ್ಲಿ ಪಾಲ್ಗೊಂಡಿತ್ತು. ನಮ್ಮ ಸದಸ್ಯರನೇಕರು ಅವರ ಅಂತಿಮ ದರ್ಶನವನ್ನು ಪಡೆದಿದ್ದರು.

ಅವರು ನಮಗೆ ತೋರಿಸಿ ಕೊಟ್ಟ ಮಾರ್ಗದರ್ಶನ ಪ್ರಸಕ್ತ ಕಾಲದಲ್ಲಿಯೂ ನಮಗೆ ಸ್ಮರಣೀಯ ವಾಗಿದೆ. ಅವರ ಅಗಲುವಿಕೆಯ ಇಪ್ಪತ್ತೈದನೇ ವರ್ಷದ ಸಮಯದಲ್ಲಿ ಆದರ್ಶ ಯುವಕ ಮಂಡಲವು ಆ ಮಹಾನ್ ಚೇತನವನ್ನು ಸ್ಮರಿಸುತ್ತದೆ.

### ಪ್ರವಾದಿ ವಚನ

ಪ್ರವಾದಿ (ಸ.) ಹೇಳಿದರು – ದಾನವು ಸಂಪತ್ತನ್ನು ಕಡಿಮೆಗೊಳಿಸುವುದಿಲ್ಲ. ಕ್ಷಮಾ ನೀತಿ ಪಾಲಿಸುವ ದಾಸನ ಗೌರವವನ್ನು ಅಲ್ಲಾಹನು ಹೆಚ್ಚಿಸುತ್ತಾನೆ. ಅಲ್ಲಾಹನಿಗಾಗಿ ವಿನಯಶೀಲತೆಯನ್ನು ಕೈಗೊಂಡವನ ಸ್ಥಾನಮಾನವನ್ನು ಅಲ್ಲಾಹನು ಏರಿಸುತ್ತಾನೆ.

**ಸಂಘಸಂಸ್ಥೆಗಳ ಅನಿಸಿಕೆ**

# ಸ್ನೇಹ ಜೀವಿ ಬೆಲಿಯೊ ಉಸ್ತಾದ್

ಅಧ್ಯಕ್ಷರು ಮತ್ತು ಸರ್ವ ಸದಸ್ಯರು
ಕೆನರಾ ಯೂತ್ ಕೌನ್ಸಿಲ್ (ರಿ) ಕಾಟಿಪಳ್ಳ

ಬೆಲಿಯೊ ಉಸ್ತಾದರನ್ನು ನೆನಪಿಸುವಾಗ ಕೆನರಾ ಯೂತ್ ಕೌನ್ಸಿಲ್‌ನ ಜನೋಪಯೋಗಿ ಕಾರ್ಯಕ್ರಮಗಳು ನೆನಪಿಗೆ ಬರುತ್ತದೆ, ಕೆನರಾ ಯೂತ್ ಕೌನ್ಸಿಲ್‌ಗೂ ಕಾಟಿಪಳ್ಳದಲ್ಲಿರುವ ಸರಕಾರಿ ಶಾಲೆಗೂ, ಅದೇ ರೀತಿ ಶಾಲೆಗೂ ಬೆಲಿಯೊ ಉಸ್ತಾದರಿಗೂ ಅದೇನೋ ನಂಟಿದೆ, ಆ ನಂಟು ಉಸ್ತಾದರನ್ನು ನಮ್ಮ ಸಂಸ್ಥೆಯ ಕಾರ್ಯಚಟುವಟಿಕೆಯ ಕಡೆಗೆ ಆಕರ್ಷಿಸುವಲ್ಲಿ ಯಶಸ್ವಿಯಾಗಿದೆ. ನಮ್ಮ ಸಂಸ್ಥೆಯ ಹಿರಿಯ ಸದಸ್ಯರೆಲ್ಲರೂ ಬೆಲಿಯೊ ಉಸ್ತಾದರವರ ಶಿಷ್ಯರೇ, ಅವರಿಂದ ಕಲಿತು ಮೇಲೇರಿದ ನಮ್ಮ ಹಿರಿಯ ಸದಸ್ಯರಿಗೆ ಅವರ ನೆನಪಿನ್ನೂ ಮಾಸಿಲ್ಲ,

ನಮ್ಮ ಹಿರಿಯ ಸದಸ್ಯರೊಬ್ಬರು ನೆನಪಿಸಿದಂತೆ ಶಾಲೆಯ ಕುಂದುಕೊರತೆಗಳಿಗೆ ಶಾಲೆಯ ಮುಖ್ಯೋಪಾಧ್ಯಾಯರ ಬಳಿ ಸಮಾಲೋಚಿಸಲು ಹೋಗುವಾಗ ಅಲ್ಲಿ ಬೆಲಿಯೊ ಉಸ್ತಾದ್ ರವರು ಹಾಜರಿರುತ್ತಿದ್ದರು. ಅಂದಿನ ಮುಖ್ಯೋಪಾಧ್ಯಾಯರಾದ ಸಮದ್ ಮಾಸ್ಟರ್, ಫ್ರಾನ್ಸಿಸ್ ಮಾಸ್ಟರ್, ಕಲ್ಪತ್ರಿ ಟೀಚರ್‌ರವರ ಜೊತೆ ಉಸ್ತಾದರು ಉತ್ತಮ ಸೌಹಾರ್ದಯುತ ಬಾಂಧವ್ಯವನ್ನೂ ಹೊಂದಿದ್ದರು, ಅಲ್ಲದೆ ನಮ್ಮ ಅಂದಿನ ಪ್ರಚಲಿತ ಕಾರ್ಯಕ್ರಮವಾದ ವನಮಹೋತ್ಸವದಲ್ಲಿ ಪಾಲ್ಗೊಂಡು ಗಿಡವನ್ನೂ ನೆಟ್ಟಿದ್ದರು.

ಅವರು ನಮ್ಮಿಂದಗಲಿ ಇದೀಗ 25 ವರ್ಷವಾದರೂ ನಮ್ಮೂರು ಮರೆಯದ ಬೆಲಿಯೊ ಉಸ್ತಾದ್‌ರ ನೆನಪಿನಲ್ಲಿ ಸ್ಮರಣ ಸಂಚಿಕೆಯೊಂದನ್ನು ಹೊರತರುವ ಪ್ರಯತ್ನ ಶ್ಲಾಘನೀಯ, ಇದರ ಸಂಪಾದಕರಾಗಿ ನಮ್ಮ ಸದಸ್ಯರಾದ ಅನ್ಸಾರ್ ಕಾಟಿಪಳ್ಳ ಮತ್ತು ಗೌರವ ಸಂಪಾದಕರಾಗಿ ನಮ್ಮ ಹಿರಿಯ ಸದಸ್ಯರಾದ ಹುಸೈನ್ ಕಾಟಿಪಳ್ಳರವರಿಂದ ಹೊರಬರುತ್ತಿರುವ ಬೆಲಿಯೊ ಉಸ್ತಾದರ ಈ ಕೃತಿಯು ಊರ ಏಳಿಗೆಯಲ್ಲಿ ಸಂಚಲನ ಮೂಡಿಸಲಿ, ಬೆಲಿಯೊ ಉಸ್ತಾದರೊಂದಿಗೆ ನಮ್ಮೆಲ್ಲರನ್ನೂ ಇಹಪರದಲ್ಲಿ ವಿಜಯಿಯಾಗಲು ಸೃಷ್ಟಿಕರ್ತನು ತೌಫೀಕ್ ನೀಡಲಿ, ಆಮೀನ್.

## ಸಂಘಸಂಸ್ಥೆಗಳ ಅನಿಸಿಕೆ

# ನಮ್ಮೆಲ್ಲರ ಆದರಣೀಯ ಉಸ್ತಾದ್

ಅಧ್ಯಕ್ಷರು ಮತ್ತು ಸರ್ವ ಸದಸ್ಯರು

ಬದ್ರಿಯಾ ಯೂತ್ ಕೌನ್ಸಿಲ್ ಕಾಟಿಪಳ್ಳ

ಕಾಟಿಪಳ್ಳದ ಇತಿಹಾಸದಲ್ಲಿ ಬೆಲಿಯೊ ಉಸ್ತಾದರ ಯುಗವೊಂದಿತ್ತು ಎಂದು ಹಿರಿಯರ ಬಾಯಿಯಿಂದ ನಮ್ಮ ಬದ್ರಿಯಾ ಯೂತ್ ಕೌನ್ಸಿಲ್ ಇದರ ಈಗಿನ ಹೆಚ್ಚಿನ ಸದಸ್ಯರು ತಮ್ಮ ಹಿರಿಯರಿಂದ, ತಂದೆ-ತಾಯಿಗಳಿಂದ ಆಗೊಮ್ಮೆ ಈಗೊಮ್ಮೆ ಕೇಳುತ್ತಿದ್ದೆವು. ಆದರೆ ನಮ್ಮ ಒಂದು ಲಕ್ ಎಂದೇ ಹೇಳಬಹುದು ಆ ಮಹಾನ್ ಚೇತನವನ್ನು ನೆನಪಿಸುವಂತಹ ಒಂದು ಪುಸ್ತಕ ಹೊರಬರುತ್ತಿದೆ ಎಂದು ಕೇಳಿದಾಗ ಬದ್ರಿಯಾದ ಹೆಚ್ಚಿನ ಸದಸ್ಯರು ಸಂತೋಷಭರಿತರಾದರು. ಇದಕ್ಕೆ ಕಾರಣ ಸುಮಾರು ಇಪ್ಪತ್ತೇಳು ವರ್ಷಗಳ ಹಿಂದೆ ಈ ಸಂಸ್ಥೆಗೆ ಹೆಸರನ್ನಿಟ್ಟ ಓರ್ವ ಮಹಾನ್ ದಾರ್ಶನಿಕ ಆಲಿಮ್ ಆಗಿದ್ದಾರೆ ನಮ್ಮೆಲ್ಲರ ಕಣ್ಮಣಿ ಬೆಲಿಯೊ ಉಸ್ತಾದ್.

ಅವರ ಇಪ್ಪತ್ತೈದನೇ ಪುಣ್ಯ ಅನುಸ್ಮರಣೆಯ ಈ ಸಂದರ್ಭದಲ್ಲಿ ಹೊರ ಬರುತ್ತಿರುವ ಗ್ರಂಥದ ಮೂಲಕ ನಮ್ಮ ಹೊಸ ತಲೆಮಾರಿಗೆ ಅವರ ಗುರುತು ಚಿರಸ್ಮರಣೀಯವಾಗಲಿದೆ. ಅವರು ನಡೆದು ಬಂದ ದಾರಿ, ಅವರ ಆದರ್ಶ ಜೀವನ ನಮಗೆಲ್ಲರಿಗೂ ಮೈಗೂಡಿಸಲು ಅವರ ಹಿತೋಪದೇಶವನ್ನು ನಮ್ಮ ಎಲ್ಲಾ ಸದಸ್ಯರು ಪಾಲಿಸುವ ಮೂಲಕ ಅವರಿಗೆ ಬಹುದೊಡ್ಡ ಗೌರವವನ್ನು ನೀಡುವಂತಾಗಲಿ ಎಂದು, ಹಾರೈಸುತ್ತಾ ಈ ಪುಸ್ತಕವನ್ನು ಹೊರತರುತ್ತಿರುವ ಸಂಪಾದಕೀಯ ಮಂಡಳಿಗೆ ಎಲ್ಲಾ ರೂಪದಲ್ಲೂ ಶುಭವನ್ನು ಹಾರೈಸುತ್ತೇವೆ.

## ಸಂಘಸಂಸ್ಥೆಗಳ ಅನಿಸಿಕೆ

# ಸರಳ ವ್ಯಕ್ತಿತ್ವದ ಬೆಲಿಯೊ ಉಸ್ತಾದ್

ಅಧ್ಯಕ್ಷರು ಮತ್ತು ಸರ್ವ ಸದಸ್ಯರು

ರಿಲಯನ್ಸ್ ಯೂತ್ ಅಸೋಸಿಯೇಷನ್ (ರಿ), ಕಾಟಿಪಳ್ಳ

ಸೌಮ್ಯ ಸ್ವಭಾವದ ಸರಳ ಸಂಪನ್ನ ರಾದ ಆ ಕಾಲದಲ್ಲಿ ಎಲ್ಲರಿಗೂ ಅಚ್ಚುಮೆಚ್ಚಿನ ಉಸ್ತಾದ್ ಆಗಿದ್ದರು ನಮ್ಮ ಮುಹಮ್ಮದ್ ಸಾಲಿಹ್ ಉಸ್ತಾದ್. ಅವರನ್ನು ಪ್ರೀತಿಯಿಂದ ಹಾಗೂ ಗೌರವದಿಂದ ಎಲ್ಲರೂ ಬೆಲಿಯೊ ಉಸ್ತಾದ್ ಎಂದೇ ಕರೆಯುತ್ತಿದ್ದರು. ಅವರು ನಮ್ಮನ್ನು ಅಗಲಿ ಮೂರು ದಶಕ ಕಳೆದರೂ ಅವರ ಆದರ್ಶ ಗಾಂಭೀರ್ಯ ನಡೆ, ನುಡಿ ಇತರರಿಗೆ ಮಾದರಿಯಾಗಿದೆ.ಅವರು ನಡೆದ ದಾರಿಯನ್ನು ನವು ಅವಲೋಕಿಸಿದಾಗ ನಮಗೆ ಅದರಿಂದ ಕಲಿಯಲು ಬೆಟ್ಟದಷ್ಟಿದೆ. ಅವರು ಹೇಳುತ್ತಿದ್ದ ಪ್ರತೀ ವಾಕ್ಯದಲ್ಲಿ ಅರ್ಥ ಇರುತ್ತಿತ್ತು. ಅಂತಹ ಮಹಾನ್ ವ್ಯಕ್ತಿ ಎಲ್ಲಾ ಕಾಲಕ್ಕೂ ಆದರ್ಶಪ್ರಾಯರು. ಅವರಿಂದ ಇಲ್ಮ್ ಕಲಿತ ಎಲ್ಲರೂ ಧನ್ಯರು.

ಅವರಿಗೆ ಆ ಲೋಕದಲ್ಲಿ ಸರ್ವ ಸುಖ ಪ್ರಾಪ್ತಿಯಾಗಲಿ ಎಂದು ನಾವೆಲ್ಲ ಅಲ್ಲಾಹನೊಂದಿಗೆ ದುಃಆ ಮಾಡೋಣ ಆಮೀನ್..








# ಕಿರು ಪರಿಚಯ

| | |
|---|---|
| ಸಾಧಕರ ಹೆಸರು : | ಹಾಜಿ ಎಂ. ಮುಹಮ್ಮದ್ ಸ್ವಾಲಿಹ್ ಕಾಟಿಪಳ್ಳ |
| ಹುಟ್ಟಿದ ದಿನಾಂಕ : | 14 ಜುಲೈ 1934 |
| ಮರಣದ ದಿನಾಂಕ : | 19 ಫೆಬ್ರವರಿ 1998 |
| ವಿದ್ಯಾಭ್ಯಾಸ : | 10ನೇ ತರಗತಿ |
| ತಂದೆಯ ಹೆಸರು : | ಹಾಜಿ ಎಂ. ಫಕ್ರುದ್ದೀನ್ ಮಂಗಳೂರು |
| ತಾಯಿಯ ಹೆಸರು : | ಫಾತಿಮಾ ಮಂಗಳೂರು |
| ಕುಟುಂಬ ಹಿನ್ನಲೆ : | ಧಾರ್ಮಿಕ ವಿದ್ವಾಂಸ ಕುಟುಂಬ |
| ಪತ್ನಿಯ ಹೆಸರು : | ಪಿ.ಎಂ. ರುಖಿಯ್ಯ<br>ಪಿ.ಎಂ. ಅಬ್ದುಲ್ ಖಾದರ್ ಮಾಸ್ಟರ್‌ರವರ ಮಗಳು<br>ಪಣಂಬೂರ್ ಖಾಝಿ ಇದ್ದಿನಬ್ಬರವರ ಮಗಳ ಮಗಳು |
| ಮಕ್ಕಳು : | 1. ಅಹ್ಮದ್ ಬಿನ್ ಸ್ವಾಲಿಹ್<br>2. ಅಬ್ದುಲ್ ಖಯ್ಯೂಮ್<br>3. ಹಬೀಬುರ್ರಹ್ಮಾನ್ ಮದನಿ<br>4. ಎಂ.ಇಸ್ಮಾಯೀಲ್<br>5. ಫಾತಿಮತುಝ್ಝುಹ್ರಾ (ಪತಿ: ಇಸ್ಮಾಯಿಲ್ ಶೇಕ್)<br>6. ಉಮ್ಮುಸಲ್ಮಾ (ಪತಿ : ಮುಹಮ್ಮದ್ ರಫೀಖ್ )<br>7. ಸದಖತುಲಾ<br>8. ಅಬ್ದುಲ್ ಖಾದಿರ್ ಸೈಫುಲ್ಲಾ |



## ನಮ್ಮೂರ ಹೆಮ್ಮೆ

# ಬೇಲಿಯೊ ಉಸ್ತಾದ್

ಈ ಕೃತಿಯಲ್ಲಿ ಬರುವುದು ಬರೀ ವ್ಯಕ್ತಿಯಲ್ಲ ಬದಲಾಗಿ ವ್ಯಕ್ತಿತ್ವ, ಬದುಕುವ ರೀತಿಯ ಉದ್ದಗಲದಷ್ಟೇ ಅವರ ಅಗಲುವಿಕೆಯ ನಂತರ ಜನ ನೆನಪಿಸುತ್ತಾರೆ, ಆ ಉದ್ದಗಲಗಳು ಹೇಗಿರಬೇಕೆಂದು ತೋರಿಸಿಕೊಟ್ಟ ವ್ಯಕ್ತಿತ್ವವೇ ಮರ್ಹೂಂ ಹಾಜಿ ಎಂ ಮುಹಮ್ಮದ್ ಸ್ವಾಲಿಹ್ ಉಸ್ತಾದ್ ಕಾಟಿಪಳ್ಳ, ಅಂದರೆ ನಾವೆಲ್ಲರೂ ಗುರುತಿಸಿದ ನಮ್ಮ ಹೆಮ್ಮೆಯ ಬೆಲಿಯೊ ಉಸ್ತಾದ್.

ಊರು ಗುರುತಿಸಿ ಗತಿಸಿ ಹೋದ ಇಪ್ಪತ್ತೈದು ವರ್ಷಗಳ ನಂತರ ಅವರ ನೆನಪನ್ನು ಬಿಚ್ಚಿಟ್ಟು ಪ್ರೇರಣೆ ನೀಡುವ ಪ್ರಯತ್ನವಿದು. ಇಲ್ಲಿ ಅಕ್ಷರ ರೂಪದಲ್ಲಿ ಬರುವ ನೆನಪುಗಳೆಲ್ಲವೂ ಒಂದಕ್ಕೊಂದು ಸಾಮ್ಯತೆಯಿದೆ, ಇದ್ದಷ್ಟು ಮುದ್ದೆಯಂತೆ ಅವರ ಸ್ವಾಭಿಮಾನದ ಬದುಕಿನ ತಿರುಳಿನ ಜೊತೆ ತನ್ನ ಕಾಯಕವನ್ನೂ ಮೀರಿದ ಊರ ಏಳಿಗೆಯ ತನ್ನ ಸಮರ್ಪಣೆಯಲ್ಲಿ ದ್ವಂದ್ವಗಳೇ ಇಲ್ಲ, ಊರ ಏಳಿಗೆಯಲ್ಲಿ ನಿರ್ಣಾಯಕ ಪಾತ್ರವಹಿಸಿದ ಬೆಲಿಯೊ ಉಸ್ತಾದ್ ನಮ್ಮೂರ ಹೆಮ್ಮೆಯಷ್ಟೆ.



ಪ್ರೀತಿಯಿಂದ,

ಅನ್ಸಾರ್ ಕಾಟಿಪಳ್ಳ